# ಪ್ರಸಾದ

## ದ್ವೈಮಾಸಿಕ

ಸಂಪುಟ 33 ಸಂಚಿಕೆ 5 ಸೆಪ್ಟೆಂಬರ್–ಅಕ್ಟೋಬರ್ 2018




ಜೆಎಸ್ಎಸ್ ಮಹಾವಿದ್ಯಾಪೀಠ
ಮೈಸೂರು



ಅಮೆರಿಕದ ಮೇರಿಲ್ಯಾಂಡ್‌ನ ಮೌಂಟ್‌ಗೋಮರಿ ಕೌಂಟಿಯ ಎಕ್ಸಿಕ್ಯುಟಿವ್ ಆಗಿ ಮೂರು ಅವಧಿಗಳನ್ನು ಯಶಸ್ವಿಯಾಗಿ ಪೂರೈಸಿದ ಶ್ರೀ ಐಕ್ ಲೆಗ್ಗೆಟ್ ಅವರನ್ನು ಪರಮಪೂಜ್ಯ ಜಗದ್ಗುರುಗಳು ಅಭಿನಂದಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಸುಭಾಷ್ ಮಲಗನ್, ಶ್ರೀಮತಿ ಜಯಶ್ರೀ ಜಗದೀಶ್, ಶ್ರೀ ಹಾದಿ ಮಂಚೂರ್, ಶ್ರೀ ಬಾಬು ಕಿಲಾರ, ಡಾ. ಎಚ್. ಬಸವನಗೌಡಪ್ಪ, ಶ್ರೀ ಜೋಸೆಫ್ ಜಾಂಗ್, ಶ್ರೀಮತಿ ಕ್ಯಾಥರಿನ್ ಮ್ಯಾಥೀವ್ಸ್, ರೆವರೆಂಡ್ ಕೆ.ಸಿ. ಕೇಸ್‌ಮನ್, ಶ್ರೀ ಕುಮಾರ್ ರಾಜಶೇಖರ್, ಶ್ರೀಮತಿ ಡಯಾನಾ ಜೋನ್ಸ್, ಶ್ರೀ ಉಮೇಶ್ ಮೂರ್ತಿ, ಶ್ರೀ ಚಾಯ್ ಮಾರ್ಮಿ, ಶ್ರೀಮತಿ ಶೀಲಾ ಕುಮಾರ್ ಮತ್ತು ಶ್ರೀ ನಾಗಶಂಕರ್ (6.9.2018)

# ಪ್ರಸಾದ

**ಸಂಪುಟ 33 : ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್ 2018**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

**ಮುಖಪುಟ ಚಿತ್ರ**

ಸುತ್ತೂರಿನಲ್ಲಿ ಜರುಗಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವವನ್ನು ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ವೆಂಕಯ್ಯ ನಾಯ್ಡು ಉದ್ಘಾಟಿಸಿದರು. ಚಿತ್ರದಲ್ಲಿ ಸಚಿವರುಗಳಾದ ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಾ.ರಾ. ಮಹೇಶ್, ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಜಗದ್ಗುರುಗಳು, ಸಿದ್ಧಗಂಗಾ ಮಠದ ಶ್ರೀಗಳು, ಸಚಿವರಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಪುಟ್ಟರಂಗಶೆಟ್ಟಿ, ಶಾಸಕರಾದ ಶ್ರೀ ಎ.ಹೆಚ್. ವಿಶ್ವನಾಥ್ (28.8.2018)

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 9

ಗಾಂಧೀಜಿ ಅವರ ದೃಷ್ಟಿಯಲ್ಲಿ ಜೀವನ ಕಲೆ 11
**ಪ್ರೊ. ಸಿ. ನಾಗಣ್ಣ**

ನೂರೊಂದು ವಿರಕ್ತರು: ಪರಿಚಯಾತ್ಮಕ ಅವಲೋಕನ 23
**ಡಾ. ರಣಧೀರ**

ಸೋಂಕಿನ ಸುಖ ಒಂದು ಚಿಂತನೆ 45
**ಡಾ. ಸಂಗಮೇಶ ಸವದತ್ತಿಮಠ**

ವಾರ್ತಾವಿಹಾರ 52

ಕೃತಿ-ಸ್ವೀಕೃತಿ 60

ಮಣ್ಣ ಹಿಡಿದವರೆಲ್ಲರೂ
ಬ್ರಹ್ಮನ ಸೃಷ್ಟಿಗೊಳಗಾದರು,
ಹೊನ್ನ ಹಿಡಿದವರೆಲ್ಲರೂ
ವಿಷ್ಣುವಿನ ಸ್ಥಿತಿಗೊಳಗಾದರು,
ಹೆಣ್ಣ ಹಿಡಿದವರೆಲ್ಲರೂ
ರುದ್ರನ ಸಂಹಾರಕ್ಕೊಳಗಾದರು!
ಹೆಣ್ಣು-ಹೊನ್ನು-ಮಣ್ಣ ಬಿಟ್ಟು
ಲಿಂಗಾಂಗ ಸಂಯೋಗವರಿಯದೆ
ಸದಾಚಾರದಲ್ಲಿ ತಿರಿದುಂಡು ಆತ್ಮಸುಖಿಯಾದವರೆಲ್ಲರೂ
ಫಲಭೋಗಕ್ಕೆ ಒಳಗಾದರು.

ನಾನು ಮೂರ ಬಿಟ್ಟು
ಆರ ಕಂಡು
ಮೂದೇವರ ಗೆಲಿದೆ,
ಆರ ಬಿಟ್ಟು
ಮೂರ ಕಂಡು
ಮನ ಮುಳುಗಿ
ಮೂರೊಂದು ಪದವ ದಾಂಟಿ
ಶಿವನೊಳಗಾದೆನು
ಅಯ್ಯ, ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

- ಘನಲಿಂಗದೇವರು

**'ಪ್ರಸಾದ' ಚಂದಾ ವಿವರ**

ವಾರ್ಷಿಕ ರೂ. 100 * ದಶವಾರ್ಷಿಕ ರೂ. 500

## ಸಂಪಾದಕೀಯ

**ಗ**ದಗ-ಡಂಬಳದ ಶ್ರೀ ತೋಂಟದಾರ್ಯ ಮಠಾಧೀಶರಾಗಿದ್ದ ಡಾ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ (21.2.1949 - 10.10.2018) ಅಕಾಲಿಕ ನಿಧನ ನಾಡಿನ ಧಾರ್ಮಿಕ ಹಾಗೂ ವೈಚಾರಿಕ ಲೋಕಕ್ಕೆ ಬಹು ದೊಡ್ಡ ನಷ್ಟವಾಗಿದೆ. ಸಿಂದಗಿಯ ಹಿರೇಮಠದ ಮರಯ್ಯ ಮತ್ತು ಶಂಕರಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ ಜನಿಸಿದ 'ಸಿದ್ಧರಾಮದೇವರು' ಎನ್ನುವ ಮಗು ಮುಂದೆ ಇಡೀ ಕನ್ನಡ ನಾಡಿನ ಜನತೆಯಿಂದ 'ಕನ್ನಡದ ಜಗದ್ಗುರು' ಎಂದು ಕರೆಸಿಕೊಂಡದ್ದರ ಹಿಂದೆ ಬಹು ದೊಡ್ಡ ಶ್ರಮ ಮತ್ತು ಸಾಧನೆಯ ಹೆಜ್ಜೆಗುರುತುಗಳಿವೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಿಂದಗಿಯಲ್ಲಿಯೇ ಪಡೆದ ಸಿದ್ಧರಾಮರು, ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಉನ್ನತ ವಿದ್ಯಾಭ್ಯಾಸ ಪಡೆದು ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದರು. ಇವರಲ್ಲಿನ ಅಧ್ಯಾತ್ಮದ ಒಲವನ್ನು ಗುರುತಿಸಿದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಸಿದ್ಧರಾಮದೇವರನ್ನು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳೆಂದು ನಾಮಕರಣ ಮಾಡಿ ಗದಗಿನ ಶ್ರೀ ತೋಂಟದಾರ್ಯ ಮಠಕ್ಕೆ ಅಧಿಪತಿಯನ್ನಾಗಿಸಿದರು. ಮುಂದಿನದೆಲ್ಲಾ ಬಹು ದೊಡ್ಡ ತೆರೆದ ಪುಸ್ತಕ.

ಗದಗ-ಡಂಬಳ ಮಠದ 19ನೇ ಪೀಠಾಧಿಪತಿಯಾಗಿ 29.6.1974 ರಲ್ಲಿ ನೇಮಕಗೊಂಡ ಪೂಜ್ಯರು ಇಟ್ಟ ಒಂದೊಂದು ಹೆಜ್ಜೆಯೂ ಸಮಾಜದ ಚಲನೆಗೆ ಧರ್ಮದ ಬೆಸುಗೆ ಹಾಕುವಂತಹದ್ದೇ ಆಗಿತ್ತು.

**ಭಗವಂತ ನೆಲೆಸಿರುವುದು ನೊಂದವರ ಸೇವೆಯಲ್ಲಿ**

ಒಮ್ಮೆ ರಾತ್ರಿ ಹೊತ್ತು ಯಾವುದೋ ಊರಿನ ಕಾರ್ಯಕ್ರಮವೊಂದಕ್ಕೆ ಕಾರಿನಲ್ಲಿ ಹೊರಟಿದ್ದರು. ಅದೊಂದು ಕಚ್ಚಾ ರಸ್ತೆ. ನಿಧಾನವಾಗಿ ಹೋಗುತ್ತಿದ್ದ ಕಾರಿನ ಮುಂದೆ ಗಾಡಿಯೊಂದು ಹೋಗುತ್ತಿತ್ತು. ಅದರ ಒಳಗಿದ್ದ ಹೆಣ್ಣೊಬ್ಬಳು ತುಂಬಾ ನರಳುತ್ತಿದ್ದುದು ಸ್ವಾಮಿಗಳ ಗಮನಕ್ಕೆ ಬಂತು. ಆಕೆ ತುಂಬು ಗರ್ಭಿಣಿ. ಹೆರಿಗೆಗಾಗಿ ಪಕ್ಕದ ಊರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಕೆಟ್ಟ ರಸ್ತೆಯಲ್ಲಿ ಚಲಿಸುತ್ತಿದ್ದ ಗಾಡಿಯ

ಕುಲುಕಾಟವನ್ನು ತಡೆಯಲಾರದೆ ಆಕೆ ರೋದಿಸುತ್ತಿದ್ದಳು. ಅದನ್ನು ಕಂಡ ಶ್ರೀಗಳು ತಮ್ಮ ಕಾರಿನಲ್ಲಿ ಆ ಗರ್ಭಿಣಿ ಮಹಿಳೆಯನ್ನು ಕಳುಹಿಸಿಕೊಟ್ಟು ತಾವು ಇನ್ನೊಂದು ವಾಹನದ ವ್ಯವಸ್ಥೆ ಮಾಡಿಕೊಂಡು ಕಾರ್ಯಕ್ರಮಕ್ಕೆ ಹೋದರು. ಅಲ್ಲಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಈ ಘಟನೆಯನ್ನು ಪ್ರಸ್ತಾಪಿಸಿ, ಕನಿಷ್ಠ ಅವಶ್ಯಕತೆಯನ್ನು ಪೂರೈಸುವ ಒಂದು ಪ್ರಾಥಮಿಕ ಆಸ್ಪತ್ರೆಯೂ ಇಲ್ಲದ ಈ ಊರಿನವರಿಗೆ ಶಿವಕಥೆ ಹರಿಕಥೆಗಳಿಂದ ಏನು ಪ್ರಯೋಜನ? ಸಂಕಟದಲ್ಲಿರುವವರ ಕಣ್ಣೀರನ್ನು ಒರೆಸುವುದೇ ನಿಜವಾದ ಧರ್ಮ ಎಂದು ಹೇಳಿ, ಊರಿನಲ್ಲಿ ಮೊದಲು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಿ, ನಾವೂ ಕೈಲಾದ ಸಹಾಯ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರು. ಇದು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಧಾರ್ಮಿಕ ಗುರುವಾಗಿ ಬದುಕಿದ ಪರಿ. ದಯೆಯಿಲ್ಲದ ಧರ್ಮ ಅದೇವುದಯ್ಯಾ ಎಂದ ಅಣ್ಣನವರ ವಾಣಿಗೆ ಸಾಕಾರರೂಪವಾಗಿ ಬದುಕಿದವರು ಪರಮಪೂಜ್ಯರು. ಅವರು ಯಾವ ಪವಾಡವನ್ನೂ ಮಾಡಿದವರಲ್ಲ. ನಾಡುನುಡಿಯ ಉತ್ಥಾನಕ್ಕಾಗಿ, ರೈತ ಸಮುದಾಯದ ಏಳ್ಗೆಗಾಗಿ, ಸಾಹಿತ್ಯ ಪರಿಚಾರಕರಾಗಿ ಅವರು ನಡೆದ ಹಾದಿಯೇ ಒಂದು ಪವಾಡಸದೃಶ ಮಹಾಯಾತ್ರೆ.

**ಏಕೈಕ ಕನ್ನಡ ಸ್ವಾಮೀಜಿ**

ನಿಜಾಮರ ಆಡಳಿತದ ಸಂದರ್ಭದಲ್ಲಿ ಭಾಲ್ಕಿಯ ಶ್ರೀ ಚನ್ನಬಸವ ಪಟ್ಟದ್ದೇವರು ಒಂದು ರೀತಿಯಲ್ಲಿ ಕ್ರಾಂತಿಕಾರಕವಾಗಿ ಕನ್ನಡದ ಕೆಲಸ ಮಾಡಿದರೆ, ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳದು ಮತ್ತೊಂದು ರೀತಿಯ ದೊಡ್ಡಮಟ್ಟದ ಕನ್ನಡದ ಸೇವೆಯೇ ಸರಿ. ಒಂದು ವಿಶ್ವವಿದ್ಯಾನಿಲಯ ಮಾಡುವಂತಹ ಕೆಲಸವನ್ನು ಇವರು ಮಾಡಿ ತೋರಿಸಿದ್ದಾರೆ. ತಮ್ಮ ಪೂರ್ವಾಶ್ರಮದ ವಿದ್ಯಾಗುರುಗಳಾದ ಡಾ. ಎಂ.ಎಂ. ಕಲಬುರ್ಗಿಯವರ ಮಾರ್ಗದರ್ಶನದಲ್ಲಿ, ಅವರ ಕನಸುಗಳನ್ನು ಸಾಕಾರಗೊಳಿಸಲು ಶ್ರಮಿಸಿದ ಕೀರ್ತಿ ಪೂಜ್ಯರದು.

ಲಿಂಗಾಯತ ಪುಣ್ಯಪುರುಷರ ಮಾಲೆಯಲ್ಲಿ ಅವರು ಪ್ರಕಟಿಸಿದ ಅನೇಕ ಸಾಧಕರ, ದಾನಿಗಳ, ಶರಣರನ್ನು ಕುರಿತ ಕೃತಿಗಳು ತುಂಬಾ ಮೌಲಿಕವಾದುವಾಗಿವೆ. ಕೇವಲ ವಚನಸಾಹಿತ್ಯದ ಪುಸ್ತಕಗಳನ್ನು ಮಾತ್ರವಲ್ಲ, ಕುರಾನ್, ಬೈಬಲ್‌ಗಳನ್ನು ಪ್ರಕಟಿಸಿ ಎಲ್ಲರಲ್ಲೂ ಭಾವೈಕ್ಯತೆಯ ಪ್ರಜ್ಞೆಯನ್ನು ಬೆಳೆಸಿದರು. ಬಳಿಗೆ ಬಂದ ಭಕ್ತರ ಕೈಗೆ ಕಲ್ಲುಸಕ್ಕರೆಯನ್ನು ಕೊಡುವುದರ ಜೊತೆಗೆ ಒಂದು ಪುಸ್ತಕವನ್ನೂ ಕೊಟ್ಟು ಆಶೀರ್ವಾದ ಮಾಡುತ್ತಿದ್ದರು. ಈ ಕಾರಣಕ್ಕಾಗಿಯೇ ಇವರನ್ನು ಜನ 'ಕನ್ನಡದ ಸ್ವಾಮೀಜಿ' ಎಂದು ಕರೆಯುತ್ತಿದ್ದರು.

**ಸರ್ವಜನಾಂಗದ ಶಾಂತಿಯ ತೋಟ**

ವಿರಕ್ತ ಪರಂಪರೆಯ ಶ್ರೀ ತೋಂಟದಾರ್ಯ ಮಠದಲ್ಲಿ ಎಲ್ಲರಿಗೂ ಮುಕ್ತ ಅವಕಾಶ; ಸಮಾನ ಪಂಕ್ತಿ ಭೋಜನ! ದಲಿತ ಭಕ್ತರನ್ನು ಜಾತ್ರಾ ಮಹೋತ್ಸವದ ಅಧ್ಯಕ್ಷರನ್ನಾಗಿಸಿದರು. ದಲಿತ ವಿದ್ಯಾರ್ಥಿಗಳನ್ನು ಮಠದಲ್ಲಿ ಪೋಷಿಸಿ, ಮುಂದೆ ಅವರನ್ನು ಮಠಾಧೀಶರನ್ನಾಗಿಸಿದರು; ಹರಿಜನಕೇರಿ, ತಾಂಡಾಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಿದರು. ಅನೇಕರನ್ನು ದುರ್ವ್ಯಸನಮುಕ್ತರನ್ನಾಗಿಸಿ ಸಾತ್ವಿಕ ಮಾರ್ಗದಲ್ಲಿ ಮುನ್ನಡೆಸಿದರು. ದೆಹಲಿಯಲ್ಲಿನ ಜಾಟ್ ಜನಾಂಗದ ಅನೇಕರಿಗೆ ದೀಕ್ಷೆ ನೀಡಿ ಬಸವಾನುಯಾಯಿಗಳನ್ನಾಗಿಸಿದರು. ಅಡ್ಡಪಲ್ಲಕ್ಕಿ ಉತ್ಸವ, ಆಭರಣಗಳ ಅಲಂಕಾರವನ್ನು ತ್ಯಜಿಸಿ ಪಲ್ಲಕ್ಕಿಯ ಮೇಲೆ ಶರಣರ ಭಾವಚಿತ್ರಗಳು, ವಚನಗಳ ಕಟ್ಟುಗಳನ್ನು ಇಟ್ಟು ಮೆರವಣಿಗೆ ಮಾಡಿ, ತಾವು ಸಾಮಾನ್ಯ ಭಕ್ತರ ನಡುವೆ ಸಾಮಾನ್ಯರಂತೆ ಮೆರವಣಿಗೆಯ ಮುಂದೆ ಹೆಜ್ಜೆ ಹಾಕಿದರು.

**ಕನ್ನಡವೆನೆ ಕುಣಿದಾಡುವುದೆನ್ನೆದೆ**

ಪೂಜ್ಯರು ಕನ್ನಡವನ್ನು ತಮ್ಮ ಉಸಿರೆಂದೇ ಭಾವಿಸಿದ್ದರು. ಕನ್ನಡ ಭಾಷೆಗೆ ಏನಾದರೂ 'ಕಂಟಕ' ಬರುವ ಸೂಚನೆ ಸಿಕ್ಕಿದರೂ ಸಾಕು ಅವರು ಸಿಡಿದೇಳುತ್ತಿದ್ದರು. 1982 ರಲ್ಲಿ ಸಿಂದಗಿಯಲ್ಲಿ ಬಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಕನ್ನಡದ ಅಳಿವು ಉಳಿವಿನ ಬಗ್ಗೆ ಮಾಡಿದ ವಿಚಾರಪೂರ್ಣ ಭಾಷಣವೇ ಮುಂದೆ ಗೋಕಾಕ ಚಳವಳಿಗೆ ನಾಂದಿಯಾಯಿತು ಎಂದು ಇಂದಿಗೂ ಜನ ಸ್ಮರಿಸಿಕೊಳ್ಳುತ್ತಾರೆ. ಒಂದು ಭಾಷೆ ಉದ್ಧಾರವಾಗಬೇಕಾದರೆ ಅದು ಜೀವಂತವಾಗಿರುವ ನೆಲವೂ ಜೀವಚೈತನ್ಯದಿಂದ ತುಂಬಿರಬೇಕು ಎನ್ನುವುದು ಅವರ ಯಾವತ್ತೂ ನಿಲುವಾಗಿತ್ತು.

ಈ ದೃಷ್ಟಿಯಿಂದ ಅವರು ನಡೆಸಿದ 'ಕಪ್ಪತ್ತುಗುಡ್ಡ ಉಳಿಸಿ' ಹೋರಾಟ ಪ್ರಮುಖವಾದುದು. ಸುಮಾರು ಆರು ಸಾವಿರ ಎಕರೆ ಭೂಮಿಯನ್ನು ಪಡೆದುಕೊಂಡು ಪೋಸ್ಕೋ ಬಹುರಾಷ್ಟ್ರೀಯ ಉಕ್ಕಿನ ಕಂಪೆನಿ ಪ್ರಾರಂಭ ಮಾಡಲು ಹವಣಿಸುತ್ತಿದ್ದು, ಅದು ಅದಿರಿಗಾಗಿ ಕಪ್ಪತ್ತುಗುಡ್ಡವನ್ನು ಕಬಳಿಸಲು ಹುನ್ನಾರ ನಡೆಸಿದುದನ್ನು ವಿರೋಧಿಸಿ ಒಂದು ದೊಡ್ಡ ಚಳವಳಿಯನ್ನು ಹುಟ್ಟುಹಾಕಿ ಅದರಲ್ಲಿ ಜಯಶಾಲಿಗಳಾದದ್ದು ಅವರ ಪರಿಸರಪ್ರೇಮಕ್ಕೆ ಸಾಕ್ಷಿಯಾಗಿದೆ. ಖ್ಯಾತ ಪರಿಸರವಾದಿ ಮೇಧಾ ಪಾಟ್ಕರ್ ಅಂತಹವರು, ರಾಷ್ಟ್ರಮಟ್ಟದ ಅನೇಕ ಹೋರಾಟಗಾರರು ಈ ಚಳವಳಿಯಲ್ಲಿ ಭಾಗಿಯಾದರು. ಈ ಹೋರಾಟದ ಚಂಡಮಾರುತಕ್ಕೆ ಹೆದರಿದ ಅಂದಿನ ಸರ್ಕಾರ, ಆ ಕೈಗಾರಿಕೆಯನ್ನು ಸ್ಥಾಪಿಸುವುದಿಲ್ಲ ಎಂದು ಪೂಜ್ಯರಿಗೆ ಪತ್ರ ಕೊಟ್ಟ ನಂತರವೇ ಚಳವಳಿ ನಿಂತಿತು - ಕಪ್ಪತ್ತುಗುಡ್ಡ ಉಳಿಯಿತು!

ರೋಣ ತಾಲ್ಲೂಕಿನ ಬೊಮ್ಮಸಾಗರದಲ್ಲಿ ವರ್ಷಕ್ಕೊಮ್ಮೆ ಹುಣ್ಣಿಮೆಯಂದು ಕೊಡುತ್ತಿದ್ದ ಕೋಣನ ಬಲಿಯನ್ನು ತಪ್ಪಿಸಲು ಸ್ವಾಮೀಜಿ ಮುಂದಾದರು. ಆದರೆ ಮುಗ್ಧ ಜನರು ತಲೆತಲಾಂತರದಿಂದ ಅನುಸರಿಸಿಕೊಂಡು ಬರುತ್ತಿದ್ದ ಇಂತಹ ಧಾರ್ಮಿಕ (?) ನಂಬಿಕೆಗಳನ್ನು ಅಷ್ಟು ಸುಲಭವಾಗಿ ಹೋಗಲಾಡಿಸಲು ಸಾಧ್ಯವಿಲ್ಲ ಎಂದು ತಿಳಿದಿದ್ದರೂ ಸ್ವಾಮೀಜಿ ಅದರ ವಿರುದ್ಧ ಕಹಳೆಯನ್ನು ಊದಿಯೇಬಿಟ್ಟರು. ಬಲಿಪ್ರಿಯರಿಂದ ಇದಕ್ಕೆ ಪ್ರಬಲ ವಿರೋಧ ವ್ಯಕ್ತವಾಯಿತು. ಆಗ ಸ್ವಾಮೀಜಿ ನಿಮ್ಮ ದೇವರಿಗೆ ಪ್ರಾಣಿಬಲಿಯೇ ಬೇಕೆಂದರೆ ಮೊದಲು ನನ್ನನ್ನೇ ಕಡಿದು ನಿಮ್ಮ ದೇವರನ್ನು ತೃಪ್ತಿಪಡಿಸಿ ಎಂದರು. ಕೊನೆಗೂ ಅವರು ಪೂಜ್ಯರ ಸಾತ್ವಿಕ ಶಕ್ತಿಗೆ ಮಣಿಯಲೇ ಬೇಕಾಯಿತು. ಈ ಘಟನೆಯನ್ನು ನೆನೆದರೆ, ಗಾಂಧೀಜಿ ಶಿರಸಿ ಮಾರಿಕಾಂಬ ದೇವಸ್ಥಾನ ದಲ್ಲಿ ಕೋಣನ ಬಲಿ ಕೊಡುತ್ತಿದ್ದುದನ್ನು ತಪ್ಪಿಸಿದ ಘಟನೆ ಕಣ್ಣಮುಂದೆ ಬರುತ್ತದೆ.

ಕಳೆದ 40 ವರ್ಷಗಳಿಂದ ಪ್ರತಿ ಸೋಮವಾರವೂ ತಪ್ಪದೆ ಶ್ರೀಮಠದಲ್ಲಿ ನಡೆಸಿಕೊಂಡು ಬರುತ್ತಿರುವ ಶಿವಾನುಭವ ಕಾರ್ಯಕ್ರಮ ಆಸ್ತಿಕ ಸಮುದಾಯದಲ್ಲಿ ಒಂದು ಮೌನಕ್ರಾಂತಿಯನ್ನೇ ಉಂಟುಮಾಡಿದೆ. ಪೂಜ್ಯರು ಪಟ್ಟಾಧಿಕಾರವಾದ ದಿನಮಾನಗಳಲ್ಲಿ ಗದಗ ಮಠಕ್ಕೆ ನೂರಾರು ಎಕರೆ ಭೂಮಿ ಇತ್ತು. ಆದರೆ ನಿರ್ವಹಣೆ ಇಲ್ಲದೆ ಬಹುಪಾಲು ಪಾಳು ಬಿದ್ದಿತ್ತು. ಟಿ.ಕೆ. ರಾಮರಾಯರ 'ಬಂಗಾರದ ಮನುಷ್ಯ' ಕಾದಂಬರಿಯಿಂದ ಸ್ಫೂರ್ತಿ ಪಡೆದಿದ್ದ ಪೂಜ್ಯರು ಡಂಬಳದ ಬಳಿ ಇದ್ದ ಭೂಮಿಯನ್ನು ಬಂಗಾರವನ್ನಾಗಿ ಪರಿವರ್ತಿಸಿದರು. ಸ್ವತಃ ಹಾರೆ ಗುದ್ದಲಿ ಹಿಡಿದು ಕಾಯಕಪೂಜೆಯನ್ನು ಕೈಗೊಂಡ ಪೂಜ್ಯರ ಶ್ರಮಸೇವೆ ಆ ಭಾಗದ ಅನೇಕ ರೈತರಿಗೆ ಮಾದರಿಯಾಯಿತು. ಅಂತರಂಗಕ್ಕೆ ಶಿವಾನುಭವ ದಾಸೋಹ, ಬಹಿರಂಗಕ್ಕೆ ಅನ್ನದಾಸೋಹವನ್ನು ನೀಡಿದುದು ಏಕಕಾಲದಲ್ಲಿ ಅಂತರಂಗ ಹಾಗೂ ಬಹಿರಂಗ ಕೃಷಿಯ ಸ್ವರೂಪವನ್ನು ದರ್ಶನ ಮಾಡಿಸುತ್ತದೆ.

ಮಠಾಧಿಪತಿಯೊಬ್ಬರು ಒಂದು ಸಮಾಜವನ್ನು ಪೂರ್ಣದೃಷ್ಟಿಯಿಂದ ಪರಿಭಾವಿಸುವುದರಿಂದ ಏನೆಲ್ಲಾ ಮಾರ್ಗಗಳಲ್ಲಿ ಸಮಾಜವನ್ನು ಇಹಪರಗಳ ಸಮನ್ವಯದ ಶಿವಪಥದಲ್ಲಿ ನಡೆಸಬಹುದು ಎನ್ನುವುದಕ್ಕೆ ಡಾ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಬಹು ದೊಡ್ಡ ಆದರ್ಶವಾಗಿದ್ದಾರೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

> ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
> ಕೇಳಿರಯ್ಯಾ ಎರಡಾಳಿನ ಭಾಷೆಯ;
> ಕೊಲುವೆನೆಂಬ ಭಾಷೆ ದೇವನದು; ಗೆಲುವೆನೆಂಬ ಭಾಷೆ ಭಕ್ತನದು.
> ಸತ್ಯವೆಂಬ ಕೂರಲಗನೆ ತಳೆದುಕೊಂಡು
> ಸದ್ಭಕ್ತರು ಗೆದ್ದರು, ಕಾಣಾ, ಕೂಡಲಸಂಗಮದೇವಾ.

ಪುರಾಣಕಾಲದಿಂದ ಇಂದಿನವರೆಗೂ ಶರದೃತುವಿನಲ್ಲಿ ಬರುವ ಆಶ್ವಯುಜ ಮಾಸ ಅನೇಕ ವಿಜಯಗಳಿಗೆ ಸಾಕ್ಷಿಯಾಗಿದೆ. ಚಾಮುಂಡೇಶ್ವರಿ ಮಹಿಷಾಸುರನನ್ನು ಸಂಹರಿಸಿದ್ದು, ರಾಮ ರಾವಣನನ್ನು ವಧಿಸಿದ್ದು, ಪಾಂಡವರು ಕೌರವರ ಮೇಲೆ ವಿಜಯ ಸಾಧಿಸಿದ್ದು ಇದೇ ಮಾಸದಲ್ಲಿ ಎಂದು ಅನೂಚಾನವಾಗಿ ಒಪ್ಪಿಕೊಂಡು ಬಂದಿರುವ ಘಟನೆಗಳಾಗಿವೆ. ಪರಂಪರಾಗತವಾಗಿ ಹೀಗೆ ಒಪ್ಪಿತವಾಗಿರುವ ವಿಜಯದ ನಿರ್ದಿಷ್ಟ ದಿನವನ್ನು 'ವಿಜಯದಶಮಿ' ಎಂದು ಶ್ರದ್ಧಾಭಕ್ತಿಗಳಿಂದ ಇಂದಿಗೂ ಆಚರಿಸಲಾಗುತ್ತಿದೆ. ವಿಜಯನಗರದ ಅರಸರ ಕಾಲದಲ್ಲಿ ಪ್ರಾರಂಭವಾದ ಈ ಉತ್ಸವವನ್ನು ಮೈಸೂರರಸರು ಯಥಾವತ್ತಾಗಿ ಮುಂದುವರಿಸಿಕೊಂಡು ಬಂದರು. ಇದು ಅನಂತರದಲ್ಲಿ ಕೇವಲ ಪ್ರಭುತ್ವದ ಆಚರಣೆಯಾಗಿ ಉಳಿಯದೆ, ಪ್ರಜೆಗಳೂ ಸಹ ಅತ್ಯುತ್ಸಾಹ, ವಿಜೃಂಭಣೆಗಳಿಂದ ಆಚರಿಸುತ್ತಾರೆ. ವಿಜಯದಶಮಿಯ ಹಿಂದಿನ ದಿನ ಅದ್ದೂರಿಯ ಆಯುಧಪೂಜೆ ನಡೆಯುತ್ತದೆ.

ಯುದ್ಧದಲ್ಲಿ ದುಷ್ಟರನ್ನು ನಾಶಮಾಡಲು ಸಹಕಾರಿಯಾಗುವ ಆಯುಧಗಳನ್ನು ಪೂಜಿಸಿ, ಅವುಗಳಿಗೆ ವಿಶಿಷ್ಟ ರೀತಿಯಲ್ಲಿ ಕೃತಜ್ಞತೆಯನ್ನು ಸಲ್ಲಿಸುವ ಪರಿಕಲ್ಪನೆ ಇಲ್ಲಿ ಇರುವಂತೆ ಕಂಡುಬರುತ್ತದೆ. ಇದೆಲ್ಲಾ ವೀರಯುಗದ ಕೆಲವು ನಂಬಿಕೆ, ನಡಾವಳಿಗಳು. ಆದರೆ ಈಗಿನ ಯುಗಪ್ರಜ್ಞೆಯೇ ವಿಭಿನ್ನವಾಗಿದೆ. ಹಿಂದೆ ಯುದ್ಧಕ್ಕೆ ಬಳಸುತ್ತಿದ್ದ ಪಾರಂಪರಿಕ ಆಯುಧಗಳಾವುವೂ ಈಗ ಉಳಿದುಬಂದಿಲ್ಲ. ರಾಜರಾಜರುಗಳ ನಡುವೆ, ದೇವತೆಗಳು ರಾಕ್ಷಸರ ನಡುವೆ ನಡೆಯುತ್ತಿದ್ದ ಯುದ್ಧಗಳನ್ನು ಇಂದಿನ ದಿನಮಾನಗಳಲ್ಲಿ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಈಗ ಏನಿದ್ದರೂ ರಾಷ್ಟ್ರ ರಾಷ್ಟ್ರಗಳ ನಡುವೆ ಮಾತ್ರ ಯುದ್ಧ. ಹಾಗೆಯೇ, ಯುದ್ಧದ ಸ್ವರೂಪವೂ, ಮಾರ್ಗಗಳೂ ಬೇರೆಯವೇ ಆಗಿವೆ. ಮಿಸೈಲ್‌ಗಳು, ಬಾಂಬ್‌ಗಳು, ಜೈವಿಕ ಅಸ್ತ್ರಗಳು ಮುಂತಾದ ಯುದ್ಧದ ವಿನಾಶಕಾರಿ

ತಂತ್ರಗಳೂ, ಆಯುಧಗಳೂ ಸ್ಥೂಲದಿಂದ ಸೂಕ್ಷ್ಮದತ್ತ ಸಾಗುತ್ತಿವೆ. ಇಂತಹ ಮಾರಕಾಸ್ತ್ರಗಳ ಸಹಾಯದಿಂದ ಯುದ್ಧವೇನಾದರೂ ಘಟಿಸಿದರೆ, ವಿಜಯೋತ್ಸವವನ್ನು ಆಚರಿಸಲು ಮನುಷ್ಯರೇನು, ಭೂಗೋಲದ ಮೇಲೆ ಬಹುಶಃ ಯಾವ ಜೀವಿಯೂ ಉಳಿದಿರುವುದಿಲ್ಲ. ಅಣುರೇಣುತೃಣಕಾಷ್ಠಗಳೆಲ್ಲವೂ ಕ್ಷಣಮಾತ್ರದಲ್ಲಿ ಭಸ್ಮವಾಗಿ ಬಿಟ್ಟಿರುತ್ತವೆ. ಇದನ್ನು ಕಲ್ಪಿಸಿಕೊಳ್ಳುವುದೂ ಸಹ ತುಂಬಾ ಭಯಾನಕವೇ.

ಯುದ್ಧ ಮಾಡಲು ಶತ್ರುಗಳಾದವರು ಮುಖಾಮುಖಿಯಾಗಿ ನಿಲ್ಲುವ ಕಾಲ ಎಂದೋ ಮುಗಿದಿದ್ದು, ಸಾವಿರಾರು ಮೈಲುಗಳ ದೂರದಲ್ಲಿಯೇ ಕುಳಿತು ಕಾಣದ ಕೈಯ ಬೆರಳ ತುದಿಯೊಂದು ಗುಂಡಿ ಒತ್ತುವ ಮೂಲಕ ರತ್ನಗರ್ಭೆಯಾದ ವಸುಂಧರೆಯನ್ನು ನಿರ್ನಾಮ ಮಾಡುವ ಶಕ್ತಿ ಪಡೆದಿದೆ. ಇಂತಹ ಭಯಂಕರ ಯುಗದಲ್ಲಿ, ನಿತ್ಯವೂ ಆತಂಕದ ನೆರಳಿನಲ್ಲಿ ಬದುಕುತ್ತಿರುವ ಮನುಷ್ಯನು ಆಯುಧಗಳ ಪರಿಕಲ್ಪನೆಯನ್ನೇ ಬದಲಿಸಿಕೊಳ್ಳಬೇಕಾದ ಮನಃಸ್ಥಿತಿಯಲ್ಲಿ ನಿಂತಿದ್ದಾನೆ.

ಹೊರಗಿನ ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವುದು ಒಂದರ್ಥದಲ್ಲಿ ಸುಲಭ. ಅದರಲ್ಲಿಯೂ ಅನೇಕ ರೀತಿಯ ತಂತ್ರಗಳು, ಮೋಸ-ವಂಚನೆಗಳು ಅಡಗಿರುತ್ತವೆ. ಆದರೆ ಅಂತರಂಗದಲ್ಲಿಯೇ ಅಡಗಿರುವ ಶತ್ರುಗಳ ಮೇಲೆ ವಿಜಯ ಸಾಧಿಸಲು ಇರುವ ಏಕೈಕ ಮಾರ್ಗವೆಂದರೆ ಎಲ್ಲರ ಅಂತರಂಗದಲ್ಲಿಯೂ ಸುಪ್ತವಾಗಿ ರುವ ಸತ್ಯಮಾರ್ಗವೊಂದೇ ದಾರಿ. ಸತ್ಯದ ಕರವಾಲ ಕೈಯಲ್ಲಿ ಇದ್ದರೆ, ಕೊಲ್ಲ ಬಯಸುವ ಎಂತಹ ದುಷ್ಟಶಕ್ತಿಯೂ ನಿಶ್ಶಕ್ತವಾಗಿ ಸೋಲೊಪ್ಪಿಕೊಳ್ಳಬೇಕಾಗುತ್ತದೆ.

ಆದ್ದರಿಂದಲೇ ಮನುಷ್ಯನು ಈಗ ತನ್ನ ಬದುಕಿನ ಉನ್ನತಿಗೆ, ಕಾಯಕಕ್ಕೆ ಸಹಕಾರಿಯಾಗಿರುವ ಯಂತ್ರಗಳು, ಕಾರುಗಳು, ಕಂಪ್ಯೂಟರ್‌ಗಳು ಮುಂತಾದವುಗಳನ್ನು ಪೂಜಿಸಲು ತೊಡಗಿರುವುದು ಶುಭಸೂಚಕ. ಏಕೆಂದರೆ, ಹಿಂದೆ ಇದ್ದವರು ಕೇವಲ ಹೊರಗಿನ ಶತ್ರುಗಳು ಮಾತ್ರ. ಆದರೆ ಇಂದು ಹೊರಗಿನ ಶತ್ರುಗಳಿಗಿಂತಲೂ ಭಯಂಕರವಾದ ಅರಿಷಡ್ವರ್ಗಗಳು, ಅಷ್ಟಮದಗಳೆಂಬ ಒಳಗಿನ ಶತ್ರುಗಳು ಪ್ರತಿಯೊಬ್ಬರ ಅಂತರಂಗದಲ್ಲಿ ವ್ಯೋಮಾತೀತವಾಗಿ ಬೆಳೆದಿದ್ದು ದಯೆ, ಕರುಣೆ, ತ್ಯಾಗ ಅನುಕಂಪೆ ಮುಂತಾದ ಮಾನವೀಯ ಮೌಲ್ಯಗಳನ್ನು ಕ್ಷಣಕ್ಷಣಕ್ಕೂ ಕೊಲ್ಲುತ್ತಿವೆ. ಇಂಥ ಅಂತರಂಗದ ಶತ್ರುಗಳನ್ನು ಗೆದ್ದು, ವಿಜಯೋತ್ಸವ ಆಚರಿಸುವ ದಿಸೆಯಲ್ಲಿ ಎಲ್ಲರೂ ಚಿಂತಿಸಬೇಕಾಗಿದೆ. ಅಂತಹ ಚಿಂತನೆಗೆ ಈ ದಸರೆಯ ಉತ್ಸವ ಪ್ರೇರಕವಾಗಲಿ ಎಂದು ವಿಜಯದಶಮಿಯ ಸಂದರ್ಭದಲ್ಲಿ ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಗಾಂಧೀಜಿ ಅವರ ದೃಷ್ಟಿಯಲ್ಲಿ ಜೀವನ ಕಲೆ

**ಪ್ರೊ. ಸಿ. ನಾಗಣ್ಣ**

**ಮ**ನುಷ್ಯ ಸಿದ್ಧಿಸಿಕೊಳ್ಳುವ ಎಲ್ಲ ಕಲೆಗಳಲ್ಲಿ ಪ್ರಾಯಶಃ ಜೀವನ ಕಲೆ ಎಂಬುದು ಅತ್ಯಂತ ಕಠಿಣವಾದುದು. ಮನುಷ್ಯಜೀವನ ಅತ್ಯಂತ ದುಸ್ತರವಾದುದಷ್ಟೇ ಅಲ್ಲ, ಅದು ಅನೇಕ ರಾಜಿಸೂತ್ರಗಳನ್ನು ಬಯಸುವಂಥದು. ಆದರ್ಶಕ್ಕೂ ಪ್ರಾಯೋಗಿಕತೆಗೂ ಅಜಗಜಾಂತರ ವ್ಯತ್ಯಾಸವಿದೆ. ಸೈದ್ಧಾಂತಿಕವಾಗಿ ಸ್ವೀಕೃತವಾದದ್ದನ್ನು ಅನುಷ್ಠಾನಕ್ಕೆ ತರುವುದು ಕಷ್ಟಸಾಧ್ಯ. ಆದಾಗ್ಯೂ ಮನುಷ್ಯನಿಗೆ ನಿಜವಾದ ಸುಖ ಹಾಗೂ ಮನಃಶಾಂತಿಯನ್ನು ಕಲ್ಪಿಸುವುದರಿಂದ ಜೀವನ ಕಲೆಯನ್ನು ಕಲಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾದುದು ಬಹಳ ಅವಶ್ಯಕ.

ಜೀವನ ಕಲೆ ಎಂದರೆ ನಿಜವಾಗಿ ಏನು ? ಜೀವನದ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಆ ಗುರಿಸಾಧನೆಯ ದಿಶೆಯಲ್ಲಿ ಪ್ರತಿದಿನವೂ ಸ್ವಲ್ಪ ಸ್ವಲ್ಪವಾಗಿ ಮುಂದುವರಿಯುವ ಕ್ರಮವಾಗಿದೆ ಜೀವನ ಕಲೆ. ಗಾಂಧೀಜಿಯವರ ಪ್ರಕಾರ ಜೀವನ ಕಲೆ ಎಂದರೆ 'ತನ್ನ ತಾ ಅರಿಯುವುದು'. ತನ್ನನ್ನು ತಾನು ಅರಿಯಲು ತೊಡಗಿದ ವ್ಯಕ್ತಿಯು ಮಾನವಕೋಟಿಯೆಂಬ ಸಾಗರದಲ್ಲಿ ಲೀನವಾಗುತ್ತಾನೆ. ಎಲ್ಲ ಜೀವಿಗಳ ಜೊತೆ ಅನನ್ಯತೆ ಸಾಧಿಸಿಕೊಳ್ಳುತ್ತಾನೆ. ಅಂಥ ಬದುಕಿನ ಒಟ್ಟು ಕ್ರೋಡೀಕರಣ ದೇವರೇ ಆಗಿರುವುದರಿಂದ ದೇವರ ಸೃಷ್ಟಿಯ ಸೇವೆ ಮಾಡುವುದರಿಂದ ವ್ಯಕ್ತಿಗೆ ಆತ್ಮಜ್ಞಾನ ಪ್ರಾಪ್ತಿಯಾಗುವುದು. ಹಾಗಾಗಿ ಆತ್ಮಸಾಕ್ಷಾತ್ಕಾರದಲ್ಲಿ ತೊಡಗುವವನಿಗೆ ಸೇವೆಯೇ ಸರ್ವಸ್ವವಾಗುತ್ತದೆ.

ಏನೇ ಆದರೂ ಮನುಷ್ಯ ಸರ್ವಶಕ್ತನಲ್ಲ. ಅವನೆಷ್ಟೇ ಆಸೆಪಟ್ಟರೂ ಇಡೀ ಜಗತ್ತಿಗೆ ಸೇವೆ ಸಲ್ಲಿಸಲಾಗುವುದಿಲ್ಲ. ಸೇವೆಯೆ ಅವನ ಸಾಮರ್ಥ್ಯ ಪರಿಮಿತವಾದದ್ದು. ಹಾಗಾಗಿ ತನ್ನ ಸೇವೆಯನ್ನು ಅವನು ತನ್ನ ನಿಕಟವಾದ ನೆರೆಹೊರೆಗೆ ಮೀಸಲಿಟ್ಟರೆ ಸಾಕು. ಏಕೆಂದರೆ "ತನ್ನ ನೆರೆಹೊರೆಯವರ ಸೇವೆ ಮಾಡುವವನು ಜಗತ್ತಿಗೇ ಸೇವೆ ಸಲ್ಲಿಸಿದಂತೆ". ತನ್ನ ನೆರೆಹೊರೆಯವರನ್ನು ತನ್ನ ಬಂಧುಬಾಂಧವರೆಂದು ಭಾವಿಸಿ ಪರಿಪೂರ್ಣ ಸೌಹಾರ್ದತೆಯಲ್ಲಿ ಬದುಕುವುದರಿಂದ ತನ್ನ ಚೇತನದ ನಿಯಮಕ್ಕೆ ಬದ್ಧನಾದಂತೆಯೇ ಸರಿ. ಸಾಕ್ಷರತೆ ಅಥವಾ ಕಲಿಕೆಯಿಂದ ಬಹಳವೇನೂ ಆಗುವುದಿಲ್ಲ, ನಿಜವಾದ ಜೀವನದ ಶಿಕ್ಷಣ ಮುಖ್ಯ. ಹಾಗೆಂದು ಗಾಂಧೀಜಿ ಹೇಳುತ್ತಾರೆ.

ಮುಂದುವರಿದು ಅವರು ಕೇಳುತ್ತಾರೆ "ನಮಗೆ ಎಲ್ಲಾ ಗೊತ್ತಿದ್ದು ಏನು ಪ್ರಯೋಜನ? ನಮ್ಮ ನೆರೆಹೊರೆಯವರೊಡನೆ ಸೋದರತೆಯಿಂದ ಇರುವುದನ್ನು ಕಲಿಯದಿದ್ದರೆ?" ಅವರ ಇನ್ನೊಂದು ಮಾತು ಹೀಗಿದೆ: "ಓದುವುದನ್ನು, ಬರೆಯುವುದನ್ನು ನಾವು ಕಲಿತರಷ್ಟೇ ಸಾಲದು, ನಮ್ಮ ನೆರೆಹೊರೆಯವರೊಡನೆ ಮೈತ್ರಿಯಿಂದ ಬದುಕುವ ಕಲೆಯನ್ನೂ ನಾವು ಕಲಿಯುವುದು ಬಹಳ ಮುಖ್ಯ."

ಆದರೆ ಸಹಕಾರ ತತ್ತ್ವದಲ್ಲಿ ನಂಬಿಕೆಯುಳ್ಳವರಾಗಿ 'ಸರ್ವರ ಒಳಿತಿಗಾಗಿ ದುಡಿಯುವವರು ಯಾರು?' ತನ್ನ ಜೀವನದ ಪರಮಗುರಿ ಸೇವೆಯೆಂದು ತಿಳಿದವನು ಹಾಗೂ ಇತರರ ಒಳಿತಿನೊಳಗೆ ತನ್ನ ಶ್ರೇಯಸ್ಸು ಅಡಗಿದೆಯೆಂದು ತಿಳಿದವನು, ದೇವರ ಸಮಸ್ತ ಸೃಷ್ಟಿಯ ಒಳಿತಿನಲ್ಲಿ ತನ್ನ ಒಳಿತು ಅಡಗಿರುವುದೆಂದು ನಂಬಿದವನು ಸುಖಿಯೆಂದು ಹೇಳಬಹುದು. ಅಂಥ ವ್ಯಕ್ತಿಗೆ ದೇವರಲ್ಲಿ ನಂಬಿಕೆ ಇರುತ್ತದೆ, ಹಾಗೆಯೇ ತನ್ನ ಬಗ್ಗೆ ಕೂಡ ಆತನಿಗೆ ವಿಶ್ವಾಸವಿರುತ್ತದೆ. ಅಂಥ ಮನುಷ್ಯ ಎಂಥ ತ್ಯಾಗಕ್ಕಾದರೂ ಸಿದ್ಧನಾಗಿರುತ್ತಾನೆ.

ಭೂಮಿಯ ಮೇಲೆ ತನ್ನ ಜೀವನದ ಅಂತಿಮ ಗುರಿಯನ್ನು ಅರಿತಿರುವ ವ್ಯಕ್ತಿ, ತನ್ನ ಸಹಮಾನವರ ಸೇವೆಗಾಗಿ ತನ್ನ ಬಾಳನ್ನೇ ಮುಡಿಪಾಗಿಡುವುದರಿಂದ ಮೊದಲು ಅವನು ಚಿಂತಿಸುವುದು ಇತರರ ಹಿತದ ಬಗ್ಗೆ, ವಾಸ್ತವವಾಗಿ ತನ್ನ ಸುಖ ಸೌಲಭ್ಯಗಳ ಬಗ್ಗೆ ಯೋಚಿಸುವುದಕ್ಕೆ ಅವನಿಗೆ ಪುರಸೊತ್ತು ಇರುವುದೇ ಇಲ್ಲ. ಅವನ ಬದುಕು ಅತ್ಯಂತ ಪರಿಶುದ್ಧವೂ, ಸರಳವೂ ಆಗಿರುತ್ತದೆ. ಅವನ ಪ್ರತಿಯೊಂದು ಚಟುವಟಿಕೆಯೂ ಕೂಡ ತ್ಯಾಗಮೂಲದಿಂದಲೇ ಪ್ರೇರಿತವಾದದ್ದಾಗಿರುತ್ತದೆ. ಮನುಷ್ಯರ ಮಧ್ಯದಲ್ಲೇ ಅವನ ಜೀವನ ಸಾಗಿರುವುದಾದರೂ, ಅವನ ಮನಸ್ಸು ಮಾತ್ರ ನಿರ್ಲಿಪ್ತವಾಗಿರುವುದು ಮತ್ತು ಬದುಕಿನ ಸಂಕುಚಿತವಾದ ಆಸೆ ಆಕಾಂಕ್ಷೆಗಳಿಗೆ ಒಳಗಾಗದಿರುವುದು. ಸ್ವಯಂ ಪ್ರೇರಿತ ಬಡತನದ ಗಹನತೆಯನ್ನು ಆತ ಅರಿತಿರುತ್ತಾನೆ ಹಾಗೂ ಸರಳವಾದ ಬದುಕು ಮತ್ತು ಉದಾತ್ತವಾದ ಚಿಂತನೆ ಎಂಬುದರ ಮಹತ್ವ ಅವನಿಗೆ ವೇದ್ಯವಾಗಿರುತ್ತದೆ. ಧನದಾಹ ಮತ್ತು ಕಾಂಚಾಣ ಎನ್ನುವುದು ಅವನ ಪ್ರಜ್ಞೆಯಿಂದ ದೂರ, ಅವನ ನಿತ್ಯದ ಬೇಡಿಕೆಗಳು ತೀರಾ ಅತ್ಯಲ್ಪ. ಶ್ರೀಮಂತಿಕೆ ಅವನಲ್ಲಿ ಇರುವಾಗಲೂ ಅದನ್ನೊಂದು ನ್ಯಾಸವಾಗಿ ಅವನು ಬಹು ಜಾಗರೂಕತೆಯಿಂದ ಬಳಸುತ್ತಾನೆ. ಯಾವ ಕಾರಣಕ್ಕೂ ಆತ ತನ್ನ ಶ್ರೀಮಂತಿಕೆಯನ್ನು ಡೌಲಿನಿಂದ ಪ್ರದರ್ಶಿಸುವುದಿಲ್ಲ. ಗಾಂಧೀಜಿಯವರು ಹೇಳುತ್ತಾರೆ "ಶ್ರೀಮಂತಿಕೆಯನ್ನು ಘನತರವಾದ ಕಲೆಯಾಗಿ ಬಳಸುವುದನ್ನು ಕಲಿಯದೇ ಹೋದ ಪಕ್ಷದಲ್ಲಿ ಸಂಪತ್ತನ್ನು ಶೇಖರಿಸುವ ಕಲೆ ಹೀನವಾದ ಕಲೆಯಾಗಿ ಪರಿಣಮಿಸುತ್ತದೆ. ಸಂಪತ್ತನ್ನು ಹೊಂದುವುದರಿಂದ ನಮ್ಮ ಮೌಲ್ಯ ಹಾಳಾಗಬಾರದು, ಕೆಡುಕಿಗೆ ಈಡಾಗಬಾರದು."

ಆತ ವ್ಯಾಪಾರಗಾರನಾಗಿದ್ದರೆ ಶುದ್ಧ ಮಾರ್ಗವನ್ನೇ ಅನುಸರಿಸುತ್ತಾನೆ. ಮಾರ್ಗದಲ್ಲಿ ಅವನಿಗೆ ಅಚಲವಾದ ನಂಬಿಕೆ, ವಿನಯವಂತಿಕೆ, ವಿನಮ್ರತೆ ಅವನ ವ್ಯಕ್ತಿತ್ವದ ಒಂದು ಭಾಗವಾಗಿರುತ್ತದೆ. ಅಂಥ ವ್ಯಕ್ತಿಗೆ ಸಾವಿನ ಭಯವೂ ಇರುವುದಿಲ್ಲ, ಬದಲಾಗಿ ಸಾವು ಬಿಡುಗಡೆಯ ಮಾರ್ಗವಾಗಿ ಸ್ನೇಹದ ಹಸ್ತ ಚಾಚುವಂತೆ ಗೋಚರವಾಗುತ್ತದೆ. ಸುಖದಲ್ಲಿ, ದುಃಖದಲ್ಲಿ, ಸಂತೋಷದಲ್ಲಿ, ದುಮ್ಮಾನದಲ್ಲಿ ಅವನದು ಒಂದೇ ಮಂತ್ರ. "ದೇವರೆ, ನಿನ್ನಿಚ್ಛೆ ಇದ್ದಂತಾಗಲಿ! ದೇವರ ಇಚ್ಛೆಗೆ ತನ್ನನ್ನು ಒಪ್ಪಿಸಿಕೊಳ್ಳುವ ಅವನ ಕ್ರಮದಲ್ಲಿ ಅವನಿಗೆ ಅಮಿತವಾದ ಸಂತೋಷ ಪ್ರಾಪ್ತವಾಗುತ್ತದೆ. ಇಹಲೋಕದ ಸಂತೋಷಗಳನ್ನೆಲ್ಲ ಮೀರಿದ ಸಂತೋಷವದು. ಆ ಸಂತೋಷದ ಮೂಲಸ್ಥಾನ ಅವನ ಹೃದಯವೇ ಆಗಿರುತ್ತದೆ".

ತನ್ನ ಮೇಲೆ ಹತೋಟಿ ಸಾಧಿಸಿದ ವ್ಯಕ್ತಿಯು ಇತರರೊಡನೆ ಸಹಿಷ್ಣುತೆಯಿಂದ ಬದುಕುವುದನ್ನು ಕಲಿಯುತ್ತಾನೆ. ತನ್ನ ಬಗ್ಗೆ ಯಾವಾಗಲೂ ಕಠಿಣವಾಗಿರುವ ಮನುಷ್ಯ ಇತರರ ವಿಷಯದಲ್ಲಿ ಉದಾರವಾಗಿರುತ್ತಾನೆ. ತನ್ನ ವಿರೋಧಿಗಳು ಎನಿಸಿಕೊಳ್ಳುವುದರ ವಿಷಯದಲ್ಲಿ ಕೂಡ ಅವನ ಪ್ರೀತಿ ಹಾಗೂ ಸಹಾನುಭೂತಿಯನ್ನು ತೋರುತ್ತಾನೆ. ಅವರಿಂದ ಇಪ್ಪತ್ತು ಬಾರಿ ಮೋಸ ಹೋಗಿದ್ದರೂ ಸಹ ಇಪ್ಪತ್ತೊಂದನೆಯ ಬಾರಿ ಅವರಲ್ಲಿ ವಿಶ್ವಾಸವಿಡುವ ಧೈರ್ಯ ತೋರುತ್ತಾನೆ. ಅಂಥ ವ್ಯಕ್ತಿಯ ಬಗ್ಗೆ ಮಾತ್ರ ನಾವು "ಈತನಿಗೆ ಜೀವನ ಕಲೆ" ಸಿದ್ಧಿಸಿದೆ ಎನ್ನಬಹುದಲ್ಲದೆ, ಆ ವ್ಯಕ್ತಿಯಲ್ಲಿ "ಮನುಷ್ಯನಾಗಿ ಇರುವ ಮನುಷ್ಯನಾಗಿ ವಿಕಸಿಸುವ ಮತ್ತು ಮನುಷ್ಯನಾಗಿ ಅರ್ಥಪೂರ್ಣವಾಗುವ" ಎಲ್ಲ ಸಾಧ್ಯತೆಗಳನ್ನೂ ಕಾಣಬಹುದು.

'ಜೀವನಕಲೆ' ಯ ವಿವರಗಳನ್ನು ತಿಳಿಸುತ್ತಾ ಗಾಂಧೀಜಿಯವರು ಅನೇಕ ಸಂಗತಿಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಉದಾಹರಣೆಗೆ, 'ನೈತಿಕತೆ ಮತ್ತು ಮನುಷ್ಯನ ಕರ್ತವ್ಯ,' 'ಬಡತನ ಮತ್ತು ಸಿರಿತನ', 'ಬೆವರಿನ ಬೆಲೆ', 'ಮಾರ್ಗ ಮತ್ತು ಗುರಿ', 'ಹಕ್ಕು ಮತ್ತು ಕರ್ತವ್ಯ', 'ಹುಟ್ಟು ಮತ್ತು ಸಾವು', 'ವಿಶ್ವಾಸ ಮತ್ತು ಸಹಿಷ್ಣುತೆ', 'ಅಂತರಂಗ ಶುಚಿತ್ವ-ಬಹಿರಂಗ ಶುಚಿತ್ವ', 'ಮಾನವ ಶರೀರ', 'ಕಲೆ, ಸತ್ಯ ಮತ್ತು ಸೌಂದರ್ಯ' ಇನ್ನೂ ಮುಂತಾದ ಅನೇಕ ಸಂಗತಿಗಳು ಅವರ ಚಿಂತನೆಯಲ್ಲಿವೆ.

ಇವುಗಳಲ್ಲಿ ಕೆಲವು ಅಂಶಗಳ ಬಗ್ಗೆ ನಾವು ಆಲೋಚಿಸೋಣ.

**ನೈತಿಕ ನಿಯಮ**

ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಬಹುಜನರ ಸುಖವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮಾತ್ರ ಮನುಷ್ಯನ ಕರ್ತವ್ಯವೆಂದಾಗಿದೆ. ಸುಖವೆಂದರೆ ಭೌತಿಕವಾದ ಸುಖ ಮತ್ತು ಆರ್ಥಿಕತೆಯ ಪ್ರಗತಿ. ಈ ಸುಖದ ಅನ್ವೇಷಣೆಯಲ್ಲಿ ನೈತಿಕ ನಿಯಮಗಳು ಭಂಗವಾದರೆ ಬಹಳ ನಷ್ಟವೇನೂ ಆಗುವುದಿಲ್ಲ. ಬಹುಜನರ ಸುಖವನ್ನು ಸಾಧಿಸುವುದು ಮುಖ್ಯ

ಗುರಿಯೆಂದಾದರೆ, ಆ ಪ್ರಕ್ರಿಯೆಯಲ್ಲಿ ಸ್ವಲ್ಪ ಜನರ ಬಲಿ ತೆಗೆದುಕೊಂಡು ಇದನ್ನು ದಕ್ಕಿಸಿಕೊಳ್ಳುವುದು ಸಾಧುವೆಂದಾಗುತ್ತದೆ. ಈ ತರಹದ ಚಿಂತನೆಯ ಪರಿಣಾಮವನ್ನು ಯೂರೋಪಿನಲ್ಲಿ ಆಗಿರುವ ಕ್ಲೇಶದಿಂದ ಮನಗಾಣಬಹುದು.

ಭೌತಿಕವಾದ ಮತ್ತು ಆರ್ಥಿಕವಾದ ಸುಖವನ್ನಷ್ಟೇ ಅನ್ವೇಷಿಸುತ್ತಾ ನೈತಿಕತೆಯನ್ನು ಕಡೆಗಣಿಸುವುದು ದೈವನಿಯಮಕ್ಕೆ ವ್ಯತಿರಿಕ್ತವಾದದ್ದು, ಹಾಗೆಂದು ಪಶ್ಚಿಮದ ಚಿಂತಕವರೇಣ್ಯರೇ ಹೇಳಿದ್ದಾರೆ. ಅಂಥ ಚಿಂತಕರಲ್ಲಿ ಒಬ್ಬರಾದ ಜಾನ್ ರಸ್ಕಿನ್ನರು ತಮ್ಮ ಅನ್ ಟು ದಿಸ್ ಲಾಸ್ಟ್ ಗ್ರಂಥದಲ್ಲಿ ನೈತಿಕ ನಿಯಮ ಪರಿಪಾಲನೆ ಮಾಡಿದರೆ ಮಾತ್ರ. ಮನುಷ್ಯರು ಸುಖವಾಗಿರಲು ಸಾಧ್ಯ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಒಂದು ಮಾತು ಮುಖ್ಯ, ಪ್ರಾಯೋಗಿಕವಾಗಿ ನಾವು ಅನುಷ್ಠಾನಗೊಳಿಸದ ನೈತಿಕ ತತ್ತ್ವಗಳು ನಿಷ್ಪ್ರಯೋಜಕವಾಗಿರುತ್ತವೆ. ನೈತಿಕತೆಯ ನಿಯಮಗಳನ್ನು ಉರುಹೊಡೆದು ಹೇಳುವ ಜನರನೇಕರನ್ನು ನಾವು ಕಂಡಿದ್ದೇವೆ. ಉಚ್ಚಕಂಠದಲ್ಲಿ ಅವರು ಕಲಿತದ್ದನ್ನು ಹೇಳುತ್ತಾರೆ. ಯಾವೊಂದು ನಿಯಮವನ್ನೂ ಅವರು ಆಚರಣೆಗೆ ತರುವುದಿಲ್ಲ. ಈ ಪ್ರಪಂಚದಲ್ಲಿ ನಮಗೆ ಕಷ್ಟನಷ್ಟಗಳ ನಿಯಮವನ್ನೂ ಅವರು ಆಚರಣೆಗೆ ತರುವುದಿಲ್ಲ. ಈ ಪ್ರಪಂಚದಲ್ಲಿ ನಮಗೆ ಕಷ್ಟನಷ್ಟಗಳು ಉಂಟಾದರೂ ಕೂಡ ಸತ್ಯಸಂಧತೆ ಮತ್ತು ನೇರ ನಡೆಯಿಂದ ಸುಖ ಪ್ರಾಪ್ತಿಗೊಳಿಸಿಕೊಳ್ಳಲು ನಾವು ಪ್ರಯತ್ನಿಸಬೇಕು.

ದೇವರು ಸರ್ವಾಂತರ್ಯಾಮಿ. ಅವನು ಪರಿಪೂರ್ಣತೆಯ ಸಾಕಾರಮೂರ್ತಿ. ಅವನ ನ್ಯಾಯಕ್ಕೆ, ಅವನ ರಕ್ಷಣೆಗೆ, ಅವನ ಕರುಣೆಗೆ ಪರಿಮಿತಿಯನ್ನು ಹಾಕಲು ಯಾರಿಗೂ ಸಾಧ್ಯವಿಲ್ಲ. ಹಾಗಿದ್ದ ಮೇಲೆ ಅವನ ಭಕ್ತರೆಂದು ಹೇಳಿಕೊಳ್ಳುವ ನಮಗೆ ನೈತಿಕತೆಯನ್ನು ಉಲ್ಲಂಘಿಸುವ ಧೈರ್ಯ ಬರುವುದಾದರೂ ಹೇಗೆ ?

ಜಗತ್ತಿನಲ್ಲಿ ಕಾಣಿಸಿಕೊಳ್ಳುವುದಕ್ಕೆ, ಪ್ರದರ್ಶನಕ್ಕೆ ಹಾತೊರೆಯುವ ವ್ಯಕ್ತಿ ನಿಜವಾಗಿ ನೀತಿವಂತನಾಗಿರಲು ಸಾಧ್ಯವಿಲ್ಲ. ನೈತಿಕತೆಯು ಸ್ವಚ್ಛತೆಯಲ್ಲಿಲ್ಲ ಅಥವಾ ಜ್ಞಾನದಲ್ಲಿಲ್ಲ ಅಥವಾ ಶ್ರಮದಲ್ಲೂ ಇಲ್ಲ - ಇವೆಲ್ಲ ನೈತಿಕತೆಯ ಭಾಗಗಳು. ಅಂದರೆ ವ್ಯಕ್ತಿಯನ್ನು ನೀತಿವಂತನನ್ನಾಗಿಸಲು ಇವಿಷ್ಟೇ ಸಾಲದು. ನಿಜವಾಗಿಯೂ ನೀತಿವಂತನಾದ ಮನುಷ್ಯ ಸನ್ನಡತೆಯ ಜೀವನವನ್ನು ಸಾಗಿಸುವುದೇಕೆಂದರೆ ಅದರಿಂದ ಅವನಿಗೆ ಒಳ್ಳೆಯದಾಗುತ್ತದೆ ಎಂಬ ಉದ್ದೇಶದಿಂದಲ್ಲ - ಹಾಗೆ ಬದುಕುವುದು ಅವನ ಜೀವನಕ್ರಮ, ಅವನ ಉಸಿರಿನ ವಿಧಾನ. ಒಂದೇ ಮಾತಿನಲ್ಲಿ ಹೇಳುವುದಾದರೆ, ಶೀಲಕ್ಕೆ ಪ್ರತಿಫಲ ಶೀಲವೆ, ಒಳ್ಳೆಯದನ್ನು ಮಾಡುವ ಶಕ್ತಿ ನಮಗೆ ಹೊರಗಿನಿಂದ ಬರುವಂಥದ್ದಲ್ಲ. ನಮ್ಮೊಳಗೇ ಅದು ಇರುತ್ತದೆ. ಸರಿಯಾದ ವಿಧಾನದಿಂದ ನಾವು ಅದನ್ನು ಬೆಳೆಸಿಕೊಳ್ಳಬೇಕು. ನಿರಂತರವಾಗಿ ಮಾನವಕೋಟಿಯ ಕಲ್ಯಾಣಕ್ಕೆ ನಾವು ದುಡಿಯುವಂಥಾದ್ದೇ ಅತ್ಯಂತ ಉದಾತ್ತವಾದ ನೈತಿಕ ನಿಯಮ.

ಒಟ್ಟಿನಲ್ಲಿ ನಿಸ್ವಾರ್ಥವೂ, ಪರಿಶುದ್ಧವೂ ಆದ ಜೀವನವನ್ನು ನಡೆಸುತ್ತಾ ದ್ವೇಷಾಸೂಯೆಗಳಿಂದ ದೂರವಾಗಿರುವ ವ್ಯಕ್ತಿಯನ್ನು ನಾವು ನಿಜವಾಗಿ ಧಾರ್ಮಿಕ ಹಾಗೂ ನೈತಿಕ ವ್ಯಕ್ತಿಯೆಂದು ಕರೆಯಬಹುದು, ಅಂಥ ವ್ಯಕ್ತಿಯನ್ನು ಮಾತ್ರ ನಾವು ನಿಜವಾದ ಶ್ರೀಮಂತ ಅಥವಾ ಸುಖಿಯೆಂದು ತಿಳಿಯಬೇಕು...ಮಾನವತೆಯ ಸೇವಕನಾದವನಿಗೆ ಸೇವೆಯ ಉತ್ತಮ ಮಾರ್ಗ ಯಾವುದು ಎಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ನೈತಿಕ ನಿಯಮದ ಗಾಂಭೀರ್ಯ ನಮಗೆ ತಿಳಿದ ಕೂಡಲೇ ನಮ್ಮ ಸುಖ ಅಥವಾ ಅಸುಖ, ನಮ್ಮ ಆರೋಗ್ಯ, ಯಶಸ್ಸು, ಕೀರ್ತಿ ಇತ್ಯಾದಿಗಳ ಮೇಲೆ ಅವಲಂಬಿಸಿರುವುದಿಲ್ಲವೆಂದು ಮನವರಿಕೆಯಾಗುವುದು. ಮೊದಲು ನೀನು ದೇವರ ಸಾಮ್ರಾಜ್ಯ ಮತ್ತು ಸನ್ಮಾರ್ಗವನ್ನು ಹುಡುಕು, ಉಳಿದುದೆಲ್ಲ ತಾನಾಗಿಯೇ ಪ್ರಾಪ್ತವಾಗುವುದು.

**ಬಡತನ ಮತ್ತು ಸಿರಿತನ**

ಶ್ರೀಮಂತರು ತಮಗೆ ಬೇಕಾದ ಪ್ರಮಾಣಕ್ಕಿಂತ ಹೆಚ್ಚಾಗಿ ತುಂಬಿಟ್ಟುಕೊಂಡಿದ್ದಾರೆ. ಹಾಗಾಗಿ ಅದು ತಾತ್ಸಾರಕ್ಕೆ ಒಳಗಾಗುತ್ತದೆ. ಕಾಲಾಂತರದಲ್ಲಿ ನಾಶವಾಗಿಬಿಡುತ್ತದೆ. ಆ ಕಡೆ ಬಡವರು ಆ ಪದಾರ್ಥಗಳ ಕೊರತೆಯಿಂದ ಬಳಲುತ್ತಾರೆ ಸಾಯುತ್ತಾರೆ. ಒಬ್ಬ ವ್ಯಕ್ತಿ ತನಗೆ ಅಗತ್ಯವಾದಷ್ಟು ಪದಾರ್ಥಗಳನ್ನು ಹೊಂದಿದ್ದ ಪಕ್ಷದಲ್ಲಿ ಯಾರಿಗೂ ಪದಾರ್ಥಗಳ ಕೊರತೆಯಿರುವುದಿಲ್ಲ ಮತ್ತು ಎಲ್ಲರೂ ತೃಪ್ತಿಯಿಂದಿರುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ಕೇವಲ ತಮ್ಮ ಹೊಟ್ಟೆ ತುಂಬುವಷ್ಟನ್ನು ಪಡೆದುಕೊಳ್ಳುವುದರಿಂದ ಬಡವರಿಗೆ ತೃಪ್ತಿಯಾಗಲಾರದು. ಆದರೆ ಅಷ್ಟನ್ನಾದರೂ ಅವರಿಗೆ ದಕ್ಕಿಸಿಕೊಡಬೇಕು. ಇದು ಸಮಾಜದ ಆದ್ಯ ಕರ್ತವ್ಯ. ತೃಪ್ತಿಯೆಂಬುದು ಎಲ್ಲರಲ್ಲೂ ಕಾಣಿಸಿಕೊಳ್ಳುವಂತೆ ದುಡಿಯುವ ಕ್ರಮವನ್ನು ಶ್ರೀಮಂತರು ಕೈಗೊಳ್ಳಬೇಕು.

ಎಲ್ಲರೂ ಸಮಾನರು ಎಂದು ತಿಳಿಯುವ ಸಾಮರ್ಥ್ಯವನ್ನು ನಾವು ಬೆಳೆಸಿಕೊಳ್ಳಲು ಪ್ರಯತ್ನಿಸುವಾಗ ಪ್ರಪಂಚ ದಕ್ಕಿಸಿಕೊಳ್ಳುವುದನ್ನು ಮಾತ್ರ ನಾವು ಪಡೆದುಕೊಳ್ಳಲು ಗುರಿ ಹೊಂದಬೇಕು. ಹಾಗಾಗಿ ಇಡೀ ಜಗತ್ತಿಗೆ ಹಾಲು ದೊರಕಿದರೆ, ನಮಗೆ ಹಾಲು ದೊರಕುತ್ತದೆ. ದೇವರಲ್ಲಿ ಆಗ ನಾವು ಸಲ್ಲಿಸಬೇಕಾದ ಪ್ರಾರ್ಥನೆ ಹೀಗಿರುತ್ತದೆ : "ದೇವರೆ, ನನಗೆ ಹಾಲು ದೊರಕಬೇಕೆಂಬುದು ನಿನ್ನ ಇಚ್ಛೆಯಾದರೆ, ಮೊದಲು ಜಗತ್ತಿಗೆ ಅದನ್ನು ಕರುಣಿಸು."

**ಬೆವರಿನ ಬೆಲೆ**

"ರಟ್ಟೆ ಮುರಿದು ದುಡಿದು ಬೆವರಿನಿಂದ ಅನ್ನ ಸಂಪಾದಿಸು" ಎಂದು ಬೈಬಲ್ ಹೇಳುತ್ತದೆ. ಅನ್ನಕ್ಕಾಗಿ ಮಾತ್ರ ಎಲ್ಲರೂ ದುಡಿದರೆ ಜಗತ್ತಿನಲ್ಲಿ ಎಲ್ಲರಿಗೂ ಸಾಕಷ್ಟು ಆಹಾರ, ಸಾಕಷ್ಟು ವಿರಾಮ ದೊರೆಯುತ್ತದೆ. ಆವಾಗ ವಿಪರೀತ ಜನಸಂಖ್ಯೆ ಎಂಬ

ಕೂಗಾಗಲಿ, ರೋಗವಾಗಲಿ, ನಮ್ಮ ಸುತ್ತಮುತ್ತ ನಾವು ಕಾಣುವ ಸಂಕಟವಾಗಲಿ ನಮಗೆ ಕಾಣುವುದಿಲ್ಲ. ಅಂಥ ದುಡಿಮೆ ಪರಮಪವಿತ್ರವಾದ ತ್ಯಾಗಕ್ಕೆ ಸಮನಾಗಿರುತ್ತದೆ. ಅದು ನೆರವೇರುವ ಸಂದರ್ಭದಲ್ಲಿ ಬಡವರು ಶ್ರೀಮಂತರು ಎಂಬ ಭೇದವಿರುವುದಿಲ್ಲ, ಮೇಲು ಕೀಳೆಂಬ ತರತಮವಿರುವುದಿಲ್ಲ, ಹಾಗೆಯೇ ಸ್ಪೃಶ್ಯ ಅಸ್ಪೃಶ್ಯವೆಂಬ ಎರಡಿರುವುದಿಲ್ಲ.

ಬೌದ್ಧಿಕ ಶ್ರಮದಿಂದ ಜನರು ತಮ್ಮ ಆಹಾರವನ್ನು ಸಂಪಾದಿಸಿಕೊಳ್ಳಬಹುದಲ್ಲವೆ? ಇಲ್ಲ. ಶರೀರದ ಅಗತ್ಯಗಳನ್ನು ಶರೀರವೇ ಪೂರೈಸಬೇಕು. "ಸೀಸರ್‌ನಿಗೆ ಸಲ್ಲಬೇಕಾದುದನ್ನು ಸೀಸರ್‌ನಿಗೆ ಕೊಟ್ಟುಬಿಡು" ಪ್ರಾಯಶಃ ಆ ನಿಯಮ ಇಲ್ಲಿಗೂ ಅನ್ವಯವಾಗುತ್ತದೆ.

ಆದರ್ಶವಾದ ಸನ್ನಿವೇಶದಲ್ಲಿ ವೈದ್ಯರು, ವಕೀಲರು ಇತ್ಯಾದಿಗಳು ಕೇವಲ ಸಮಾಜದ ಒಳಿತಿಗಾಗಿ ದುಡಿಯಬೇಕು. ತಮಗಾಗಿ ಅಲ್ಲ, ಅನ್ನಕ್ಕಾಗಿ ದುಡಿಮೆಯೆಂಬ ನಿಯಮವನ್ನು ಪರಿಪಾಲಿಸುವುದರಿಂದ ಸಮಾಜದ ಶಿಲ್ಪವನ್ನೇ ಬದಲಾಯಿಸುವಂಥ ಮೌನಕ್ರಾಂತಿಗೆ ಹಾದಿಯಾಗುವುದು. ಅಸ್ತಿತ್ವಕ್ಕೆ ಹೋರಾಟ ಎನ್ನುವುದಕ್ಕೆ ಬದಲಾಗಿ ಪರಸ್ಪರ ಸೇವೆಗೆ ಹೋರಾಟ ಎನ್ನುವುದಾದರೆ ಮನುಷ್ಯನ ಗೆಲುವು ಸಾಧಿತವಾದಂತೆಯೇ. ಬರ್ಬರ ವ್ಯಕ್ತಿಯ ಕಾನೂನಿನ ಜಾಗದಲ್ಲಿ ಮಾನವನ ನಿಯಮ ಸ್ಥಾಪನೆಯಾಗುವುದು.

ಪ್ರಭುವೊಬ್ಬನಿಗೆ ಕಡ್ಡಾಯವಾಗಿ ವಿಧೇಯವಾಗುವುದು ಗುಲಾಮಗಿರಿಯ ದ್ಯೋತಕ, ತಂದೆಯೊಬ್ಬನಿಗೆ ಮನಃಪೂರ್ವಕವಾಗಿ ವಿಧೇಯವಾಗಿರುವುದು ಪುತ್ರತ್ವದ ವೈಭವ. ಅದೇ ಪ್ರಕಾರ ಅನ್ನದ ದುಡಿಮೆಗೆ ವಿಧೇಯನಾಗಿರುವುದರಿಂದ ಬಡತನ, ರೋಗ, ಅತೃಪ್ತಿ ಹೆಚ್ಚಾಗುವುವು, ಮನಃಪೂರ್ವಕ ನಾವು ದುಡಿಯುವಾಗ ತೃಪ್ತಿ ಮತ್ತು ಆರೋಗ್ಯ ನಮ್ಮದಾಗುವುವು. ಆರೋಗ್ಯವೇ ನಿಜವಾದ ಭಾಗ್ಯ, ಬೆಳ್ಳಿಯ ಚೂರಿನಿಂದಾಗಲಿ, ಚಿನ್ನದ ತುಣುಕಿನಿಂದಾಗಲಿ ಆ ಭಾಗ್ಯ ಲಭಿಸದು. ಪ್ರತಿಯೊಬ್ಬರೂ ಬೆವರು ಸುರಿಸಿ ಬದುಕಿದರೆ ಈ ಭೂಮಿಯೇ ಸ್ವರ್ಗವಾಗುವುದು. ಆವಾಗ ವಿಶೇಷವಾದ ಪ್ರತಿಭೆಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕೆಂಬ ಬೇಡಿಕೆಯಿರುವುದಿಲ್ಲ. ಪ್ರತಿಯೊಬ್ಬನೂ ತನ್ನ ಅನ್ನಕ್ಕಾಗಿ ದುಡಿಯುವಂತಾದರೆ, ಕವಿಗಳು, ವಕೀಲರು, ವೈದ್ಯರು, ಮುಂತಾದವರು ತಮ್ಮ ಪ್ರತಿಭೆಯನ್ನು ಮಾನವಕೋಟಿಯ ಸೇವೆಗೆ ಪುಕ್ಕಟೆಯಾಗಿ ವಿನಿಯೋಗಿಸಬೇಕಾದದ್ದು ತಮ್ಮ ಕರ್ತವ್ಯವೆಂದು ಭಾವಿಸಿಯಾರು. ನಿಸ್ವಾರ್ಥದಿಂದ ಅವರು ಕರ್ತವ್ಯಕ್ಕೆ ತೊಡಗುವುದರಿಂದ ಅವರ ದುಡಿಮೆಯ ಫಲ ಇನ್ನಷ್ಟು ಉತ್ಕೃಷ್ಟವಾಗಿರುವುದು, ಇನ್ನಷ್ಟು ಉತ್ತಮವಾಗಿರುವುದು.

**ಶಾರೀರಕ ದುಡಿಮೆಯ ಶೈಕ್ಷಣಿಕ ಮೌಲ್ಯ**

ಶರೀರ ಮತ್ತು ಆತ್ಮದ ನಿಯಮಿತವಾದ ಬೆಳವಣಿಗೆಯೇ ನಿಯಮಿತವಾದ

ಬೆಳವಣಿಗೆ, ಸಾಮಾಜಿಕವಾಗಿ ಉಪಯುಕ್ತವಾದ ದುಡಿಮೆಯ ಮೂಲಕ ಸಾಧಿತವಾಗುವ ಬೌದ್ಧಿಕ ಬೆಳವಣಿಗೆ ಸೇವೆಗೆ ಸಾಧನವಾಗಿರುವುದು ಹಾಗೂ ವ್ಯಕ್ತಿ ತಪ್ಪು ದಾರಿ ತುಳಿಯುವುದಕ್ಕೆ ಅದು ಅವಕಾಶ ಕೊಡದು. ಚಮತ್ಕಾರದಲ್ಲಿ ಬೆಳೆಯುವ ಬುದ್ಧಿ ಅತ್ಯಂತ ಅಪಾಯಕಾರಿಯೆಂದು ಮನಗಾಣಬೇಕು. ಶಾರೀರಕ ದುಡಿಮೆಯಿಂದ ಯಾವ ವ್ಯಕ್ತಿಗೂ ರಿಯಾಯಿತಿ ಇರಬಾರದು. ಶರೀರಿಕ ದುಡಿಮೆಯಿಂದ ಬೌದ್ಧಿಕ ಕ್ರಿಯೆಯ ಗುಣಮಟ್ಟವೂ ಉತ್ತಮವಾಗುವುದು. ಈ ಸಂದರ್ಭದಲ್ಲಿ ನಾನು ಟಾಲ್‌ಸ್ಟಾಯ್‌ರವರ ಬದುಕನ್ನು ನೆನೆಯುತ್ತೇನೆ. ರಷ್ಯಾದಲ್ಲಿ ಟಾಲ್‌ಸ್ಟಾಯ್‌ರವರು ಬಹುವಾಗಿ ಮೆಚ್ಚಿದ ಅನ್ನಕ್ಕಾಗಿ ದುಡಿಮೆ ಎಂಬ ತತ್ತ್ವವನ್ನು ಪ್ರತಿಪಾದಿಸಿದವನು ರೈತನಾದ ಬಾಂಡರೇವ್ ಎಂಬಾತ.

ನಮ್ಮ ಶಿಕ್ಷಣದಲ್ಲಿ ಕ್ರಾಂತಿಯಾಗಬೇಕು. ಮಿದುಳಿಗೆ ಕೈಯ ಮೂಲಕ ಶಿಕ್ಷಣವಾಗಬೇಕು. ನಾನು ಕವಿಯಾಗಿದ್ದಿದ್ದರೆ ಐದು ಬೆರಳುಗಳಿಗೆ ಇರುವ ಸಾಧ್ಯತೆಗಳ ಬಗ್ಗೆ ಕಾವ್ಯ ಬರೆಯುತ್ತಿದ್ದೆ. ಮನಸ್ಸೇ ಇಲ್ಲ. ಕೈ ಕಾಲುಗಳು ಏನೂ ಇಲ್ಲವೆಂದು ನೀವೇಕೆ ತಿಳಿಯಬೇಕು ? ಕೇವಲ ಮಾಮೂಲಿ ಜಾಡಿನ ಶಿಕ್ಷಣದಲ್ಲಿ ಮುಂದುವರಿಯುವ ಕೈಗಳಿಗೆ ತರಬೇತು ನೀಡದ ಮಂದಿಗೆ ಜೀವನ ಸಂಗೀತ ಗೊತ್ತಿರುವುದಿಲ್ಲ. ಅವರ ಗಮನ ಕೇಂದ್ರೀಕೃತವಾಗುವುದು ಅಸಾಧ್ಯ. ಬರೀ ಪದಗಳ ಸಹವಾಸದಲ್ಲಿ ಅವರ ಬುದ್ಧಿ ಮಂಕಾಗುತ್ತದೆ. ಹಾಗಾಗಿ ಅವರ ಮನಸ್ಸು ಅಂಧಕಾರವಾಗುತ್ತದೆ. ತಾನು ಮಾಡಬಾರದ ಕೆಲಸವನ್ನು ಕೈ ಮಾಡುತ್ತದೆ. ತಾನು ಕಾಣಬಾರದ್ದನ್ನು ಕಣ್ಣು ಕಾಣುತ್ತದೆ. ತಾನು ಕೇಳಬಾರದ್ದನ್ನು ಕಿವಿ ಕೇಳುತ್ತದೆ. ಅದೇ ಪ್ರಕಾರ ತಾವು ಮಾಡಬೇಕಾದ್ದನ್ನು, ಕಾಣಬೇಕಾದ್ದನ್ನು ಹಾಗೂ ಕೇಳಬೇಕಾದ್ದನ್ನು ಅವು ಮರೆಯುತ್ತಿವೆ. ಮಕ್ಕಳಿಗೆ ಸರಿಯಾಗಿ ಆಯ್ಕೆ ಮಾಡಿಕೊಳ್ಳುವ ಶಿಕ್ಷಣ ದೊರಕದೆ ಮುಂದೆ ಅವರು ತೊಂದರೆ ಅನುಭವಿಸು ತ್ತಾರೆ. ಒಳ್ಳೆಯದಾವುದು, ಕೆಟ್ಟದಾವುದು ಎಂಬ ತರತಮ ಜ್ಞಾನವನ್ನು ಅರುಹಿ ಒಂದನ್ನು ಹಿಡಿದುಕೊಂಡು ಮತ್ತೊಂದನ್ನು ತೊರೆಯಲು ಕಲಿಸದಂಥ ಶಿಕ್ಷಣ ಶಿಕ್ಷಣವೇ ಅಲ್ಲ.

**ಏಕಾಂಗಿಯಾಗಿ ನಿಲ್ಲುವ ಕಲೆ**

ಜಗತ್ತಿನಲ್ಲಿ ದೊಡ್ಡವರೆನಿಸಿಕೊಂಡವರು ದೊಡ್ಡ ಉದ್ದೇಶಗಳಿಗಾಗಿ ಒಂಟಿಯಾಗಿ ನಿಂತಿದ್ದಾರೆ. ದೊಡ್ಡ ಪ್ರವಾದಿಗಳನ್ನು ಗಮನಿಸಿ, ಜೊರಾಸ್ಟರ್, ಬುದ್ಧ, ಏಸುಕ್ರಿಸ್ತ, ಮಹಮ್ಮದ್ ಅವರೆಲ್ಲ ಒಂಟಿಯಾಗಿ ನಿಂತರು, ಅಂಥ ಇನ್ನು ಕೆಲವು ಹೆಸರನ್ನು ನಾನು ಹೇಳಬಲ್ಲೆ. ಆದರೆ ಅವರಿಗೆಲ್ಲ ತಮ್ಮ ಬಗ್ಗೆ ಮತ್ತು ತಮ್ಮ ದೇವರ ಬಗ್ಗೆ ಅಚಲವಾದ ನಂಬಿಕೆ ಇತ್ತು. ಹಾಗೆಯೇ ದೇವರು ತಮ್ಮ ಪರ ಇದ್ದಾನೆ ಎಂದು ಅವರು ತಿಳಿದಿದ್ದರಿಂದ ಅವರಿಗೆ ಒಂಟಿತನವೆಂಬುದೇ ಇರಲಿಲ್ಲ. ಅನೇಕ ಶತ್ರುಗಳು ತಮ್ಮನ್ನು ಹಿಂಬಾಲಿಸಿ ಬರುವಾಗ ಮಹಮ್ಮದರ ಜೊತೆಯಲ್ಲಿದ್ದಂಥ ಅವರ ಅನುಯಾಯಿ

ಅಬುಬಕರ್ ಹೇಳಿದ ಪ್ರಸಂಗವನ್ನು ನೆನೆಯೋಣ. "ನಮ್ಮನ್ನು ಬೆನ್ನಟ್ಟಿ ಬರುತ್ತಿರುವ ಶತ್ರುಗಳ ಸಂಖ್ಯೆಯನ್ನು ನೋಡಿ. ಇಷ್ಟೊಂದು ಜನರೆದುರು ನಾವು ಇಬ್ಬರು ಮಾಡುವುದು ತಾನೆ ಏನು?" ಒಂದು ಕ್ಷಣವೂ ಯೋಚಿಸದೆ ಮಹಮ್ಮದರು ತಮ್ಮ ಶ್ರದ್ಧಾವಂತ ಅನುಯಾಯಿಗೆ ಹೇಳಿದರು, "ಇಲ್ಲ ಅಬುಬಕರ್, ನಾವು ಮೂವರಿದ್ದೇವೆ, ದೇವರು ನಮ್ಮೊಟ್ಟಿಗಿದ್ದಾರೆ.' ಹಾಗೆಯೇ ವಿಭೀಷಣ ಮತ್ತು ಪ್ರಹ್ಲಾದರ ಅಗೋಚರ ಭಕ್ತಿಯನ್ನು ಗಮನಿಸಿ. ನಿಮ್ಮ ಬಗ್ಗೆ ಮತ್ತು ದೇವರ ಬಗ್ಗೆ ನಿಮ್ಮಲ್ಲಿ ಅದೇ ಬಗೆಯ ಭಕ್ತಿ ಇರಬೇಕು.

ಸಂಖ್ಯೆಯ ಬಲ ಯಾವಾಗಲೂ ಪುಕ್ಕಲರಿಗೆ ಪುಳಕವುಂಟುಮಾಡುತ್ತದೆ. ಅಂತಃಶ್ಚೇತನವಿರುವ ವೀರರು ಎಂದೂ ಏಕಾಂಗಿಯಾಗಿಯೇ ಹೋರಾಡುವುದು. ಚೈತನ್ಯದ ಶೌರ್ಯವನ್ನು ತ್ಯಾಗ, ದೃಢತೆ, ನಂಬಿಕೆ ಹಾಗೂ ವಿನಮ್ರತೆಯಿಲ್ಲದೆ ಸಾಧಿಸಲಾಗುವುದಿಲ್ಲ.

ಮಹತ್ಕಾರ್ಯಗಳ ಚರಿತ್ರೆಯಾದರೂ ಜಗತ್ತಿನ ವಿರುದ್ಧ ಏಕಾಂಗಿಯಾಗಿ ನಿಂತು ಹೋರಾಡಿದ ಮಹಾನ್ ವ್ಯಕ್ತಿಗಳ ಚರಿತ್ರೆಯೇ ಆಗಿದೆ. ವಿಚಲಿತರಾಗಿದ್ದ ಅನೇಕರಿಗೆ ಧೈರ್ಯ ತುಂಬಲು ಕೃಷ್ಣನೊಬ್ಬನ ಸಹವಾಸ ಕಾರಣವಾಯಿತು. ಸಂಖ್ಯಾಬಲದ ಒತ್ತಾಸೆಗೆ ಆತ ಆಸೆಪಡಲಿಲ್ಲ. ತನ್ನ ಶ್ರೇಷ್ಠತೆಯ ಸೀಮಾರೇಖೆಯನ್ನು ಪ್ರವಾದಿ ಮುಟ್ಟಿದುದು, ಎಲ್ಲವನ್ನೂ ಗೆದ್ದ ವೀರ ನೀನು ಎಂದು ಅರೇಬಿಯಾದವರು ಪರಾಕು ಹಾಕುವಾಗ ಅಲ್ಲ, ಬದಲಾಗಿ, ಏಕಾಂಗಿಯಾಗಿ ದೇವರ ಜೊತೆ ನಿಲ್ಲುವ ಸುಖವನ್ನು ಅವನು ತನ್ನದಾಗಿಸಿಕೊಂಡಾಗ, ಪ್ರತಾಪಸಿಂಹ, ಶಿವಾಜಿ ಇವರ ಬದುಕೂ ಕೂಡ ಹೆಮ್ಮೆ ಪಡುವಂಥದ್ದೇ.

ಆತ್ಮಬಲ ಅಥವಾ ಚೈತನ್ಯಬಲ ಎಂಬುದೆ ಕೇವಲ ಕಾಲ್ಪನಿಕವಲ್ಲ, ಅದೊಂದು ಸದೃಢವಾದಂಥ ವಾಸ್ತವ. ಆಧುನಿಕ ಶಿಕ್ಷಣ ಚೈತನ್ಯದಿಂದ ಬೇರೆ ಕಡೆ ನಾವು ಕಣ್ಣು ಹೊರಳಿಸುವಂತೆ ಮಾಡುತ್ತದೆ. ಆತ್ಮಬಲ ಅಥವಾ ಚೈತನ್ಯಬಲದ ಸಾಧ್ಯತೆಗಳು ನಮಗೆ ಹಿಡಿಸುವುದಿಲ್ಲ. ಹಾಗಾಗಿ ನಮ್ಮ ಕಣ್ಣುಗಳೇನಿದ್ದರೂ ತಾತ್ಕಾಲಿಕವಾದ, ನಶ್ವರವಾದ ಐಹಿಕಬಲದ ಮೇಲೆ ಕೇಂದ್ರೀಕೃತವಾಗಿರುತ್ತದೆ. ಖಂಡಿತವಾಗಿ ಇದು ಅತ್ಯಂತ ಮಂದಮತಿಗೆ ಒಗ್ಗುವಂಥ ಕ್ರಮ.

**ಹುಟ್ಟು ಮತ್ತು ಸಾವು**

ಪ್ರತಿನಿತ್ಯವೂ ನಾವು ಬೆಳಕಿನ ಸಮೀಪ ಹಾರಾಡುವ ಅಸಂಖ್ಯಾತ ಪತಂಗಗಳನ್ನು ಕಾಣುತ್ತೇವೆ. ಕ್ಷಣಕಾಲ ಹಾರಾಡಿ ಅವು ಸತ್ತುಹೋಗುತ್ತವೆ. ನಮ್ಮ ಜೀವನವಾದರೂ ಇವುಗಳ ಜೀವನದಂತೆಯೇ ನಶ್ವರವಾದುದು. ಮಹಿಳೆಯರು ತೊಡುವ ಗಾಜಿನ ಬಳೆಗಳಂತೆಯೇ ಈ ಇಹಲೋಕದ ಬದುಕು ಮುಟ್ಟಿದರೆ ಮುರಿಯುವಂಥದ್ದು. ಒಂದು ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟುಬಿಡುವುದರಿಂದ ಈ ಗಾಜಿನ ಬಳೆಗಳನ್ನು ಸಾವಿರಾರು ವರ್ಷಗಳ ತನಕ ಸಂರಕ್ಷಿಸಬಹುದು. ಆದರೆ ಈ ಇಹಜೀವನ ಎಷ್ಟು

ಚಂಚಲವಾದದ್ದೆಂದರೆ ಕಣ್ಣುಮುಚ್ಚಿ ಕಣ್ಣುಬಿಡುವುದರೊಳಗೆ ಇದು ನಷ್ಟವಾಗಿ ಹೋಗ ಬಹುದು. ಈಗ ನಮಗೆ ಸ್ವಲ್ಪ ಸಮಯವಿರುವಾಗಲೇ ಉಚ್ಚ ನೀಚ ಭಾವನೆಯನ್ನು ಕಳೆದುಕೊಳ್ಳೋಣ. ಹೃದಯವನ್ನು ಶುದ್ಧಗೊಳಿಸಿಕೊಳ್ಳೋಣ. ಭೂಕಂಪ ಅಥವಾ ಬೇರೆ ಯಾವುದಾದರೂ ಪ್ರಕೃತಿವಿಕೋಪದ ಕಾರಣ ನಮಗೆ ಸಾವು ಸಂಭವಿಸಿ ನಮ್ಮ ಸೃಷ್ಟಿಕರ್ತನನ್ನು ಎದುರಾಗುವ ಪ್ರಮೇಯ ಒದಗಿದರೆ ನಾವು ಸಿದ್ಧರಾಗಿರಬೇಕು.

ಚಿಕ್ಕ ಮಕ್ಕಳಾಗಲೀ, ಯುವಕರಾಗಲಿ ಅಥವಾ ವೃದ್ಧರಾಗಲಿ ಸಾಯುವಾಗ ನಾವು ದುಃಖಪಡುವುದೇಕೆ ? ಈ ಪ್ರಪಂಚದಲ್ಲಿ ಪ್ರತಿಕ್ಷಣವೂ ಯಾರಾದರೂ ಹುಟ್ಟುತ್ತಾರೆ, ಯಾರಾದರೂ ಸಾಯುತ್ತಾರೆ. ಹುಟ್ಟಿನಲ್ಲಿ ಸಂತೋಷವನ್ನೂ, ಸಾವಿನಲ್ಲಿ ದುಃಖವನ್ನೂ ಅನುಭವಿಸುವುದು ಮೂರ್ಖತನವೆಂದು ನಾವು ತಿಳಿಯಬೇಕು. ಆತ್ಮದಲ್ಲಿ ನಂಬಿಕೆ ಇರುವವರು ಆತ್ಮಕ್ಕೆ ಸಾವಿಲ್ಲವೆಂಬುದನ್ನು ಅರಿತಿರುವರು. ಹಿಂದುವಾಗಲಿ, ಮುಸಲ್ಮಾನನಾಗಲಿ ಅಥವಾ ಪಾರ್ಸಿಯಾಗಲಿ ಆತ್ಮದಲ್ಲಿ ನಂಬಿಕೆಯುಳ್ಳವನೇ ಆಗಿದ್ದಾನೆ. ಬದುಕಿರುವವರ ಆತ್ಮವಾಗಲಿ ಅಳಿದಿರುವವರ ಆತ್ಮವಾಗಲಿ ಎಲ್ಲಾ ಒಂದೇ. ಸೃಷ್ಟಿ ಲಯದ ಕಾರ್ಯಗಳು ನಿರಂತರವಾಗಿ ನಡೆದೇ ಇರುವುವು. ಇದರಲ್ಲಿ ಸಂತೋಷಪಡುವ, ದುಃಖಪಡುವ ಪ್ರಸಂಗವೇನೂ ಇರುವುದಿಲ್ಲ. ನಮ್ಮ ದೇಶಬಾಂಧವ ರಿಗಷ್ಟೇ ನಮ್ಮ ಸಂಬಂಧವನ್ನು ಸೀಮಿತಗೊಳಿಸಿಕೊಂಡು ದೇಶದವರೆಲ್ಲರೂ ನಮ್ಮ ಕುಟುಂಬದವರೆಂದೇ ಭಾವಿಸಿದರೆ ಅಲ್ಲಿ ಜರುಗುವ ಎಷ್ಟು ಜನನಗಳಲ್ಲಿ ನಾವು ಸಂತೋಷಪಡಬಹುದು? ನಮ್ಮ ರಾಷ್ಟ್ರದ ಎಲ್ಲ ಸಾವುಗಳಿಗಾಗಿ ನಾವು ದುಃಖ ಪಡುವುದಾದರೆ ನಮ್ಮ ಕಣ್ಣುಗಳಲ್ಲಿರುವ ಕಣ್ಣೀರು ಏನೇನೂ ಸಾಲದಾಗುತ್ತದೆ. ಈ ಆಲೋಚನಾ ಲಹರಿಯಿಂದ ಸಾವಿನಿಂದಾಗುವ ಭಯವನ್ನು ನಾವು ನಿವಾರಿಸಿಕೊಳ್ಳ ಬಹುದು.

ಹಿಂದೂ ಕುಟುಂಬಗಳಲ್ಲಿ ಸಾವು ಸಂಭವಿಸಿದಾಗ ಅಳುವುದು ಕರೆಯುವುದು ವಿಪರೀತ. ನಮ್ಮ ಧಾರ್ಮಿಕ ಸಾಹಿತ್ಯ ಸಾವಿನ ಎದುರು ರೋದಿಸಬಾರದೆಂದು ಹೇಳಿದ್ದರೂ ಸಹ. ಅನೇಕ ಕಡೆ ಜನರು ಸತ್ತಾಗ ಬಹುವಾಗಿ ರೋದಿಸುವುದು ವಾಡಿಕೆಯಾಗಿದೆ, ದುಃಖ ತಂತಾನೆ ಆಗದ ಸಂದರ್ಭದಲ್ಲಿ ಬಲವಂತವಾಗಿ ಅದನ್ನು ತಂದುಕೊಳ್ಳುವುದನ್ನು ನೋಡಿದ್ದೇನೆ. ದೇವರಿಲ್ಲದಂಥ ಅತ್ಯಂತ ಬರ್ಬರವಾದ ಅಭ್ಯಾಸವಿದು. ಇದನ್ನು ತಪ್ಪಿಸಬೇಕಾದ ಅಗತ್ಯವಿದೆ. ದೇವರಲ್ಲಿ ನಂಬಿಕೆ ಇರುವವರು ಮುಕ್ತಿಯ ಮಾರ್ಗವೆಂದು ಸಾವನ್ನು ಸ್ವಾಗತಿಸಬೇಕು. ಯೌವನ ಹಾಗೂ ವೃದ್ಧಾಪ್ಯ ದಂತೆಯೇ ಅದು ಬದಲಾವಣೆಯ ಸಂಕೇತವಾಗಿದೆ. ಹಾಗಾಗಿ ಅದಕ್ಕೆ ದುಃಖ ಪಡುವುಂಥದ್ದೇನೂ ಇರುವುದಿಲ್ಲ.

ಹಿಂದೂಗಳಾಗಿ ನಾವು ಸಾವಿನ ಆಲೋಚನೆಯಿಂದ ಏನೊಂದು ಚೂರೂ

ವಿಚಲಿತರಾಗಬಾರದು. ಏಕೆಂದರೆ ತೊಟ್ಟಿಲಲ್ಲಿ ಇರುವ ಕಾಲದಿಂದಲೇ ಆತ್ಮದ ಅಮರತ್ವದ ಬಗ್ಗೆ ದೇಹದ ನಶ್ವರತೆಯ ಬಗ್ಗೆ ನಮಗೆ ಮನವರಿಕೆಯಾಗಿರುತ್ತದೆ. ಈ ಕಾರಣದಿಂದಲೇ ಸಾವನ್ನು ಬದುಕಿನಲ್ಲಾದ ಒಂದು ದೊಡ್ಡ ಬದಲಾವಣೆ ಎಂದು ಮಾತ್ರ ತಿಳಿಯಬೇಕು, ಮತ್ತು ಅದು ಯಾವಾಗ ಸಂಭವಿಸಿದರೂ ಅದನ್ನು ಸ್ವಾಗತಿಸಬೇಕು.

ಸಾವು ಯಾವಾಗ ಬಂದರೂ ಸ್ವಾಗತವೇ. ಆದರೆ ಸತ್ಯಕ್ಕೆ ಒಬ್ಬ ಯೋಧ ಹೋರಾಡಿ ಮಡಿದರೆ ಆ ಸಾವು ಇನ್ನೂ ಪವಿತ್ರವಾದುದಾಗಿರುತ್ತದೆ. ಸಾವೊಂದು ಪೆಡಂಭೂತವಲ್ಲ. ಅದು ಪರಮಮಿತ್ರನ ಪ್ರತೀಕ. ಕೋಟಲೆಗಳಿಂದ ನಮ್ಮನ್ನು ಬಿಡುಗಡೆಗೊಳಿಸುತ್ತಾನೆ. ಹೊಸ ಅವಕಾಶಗಳು, ಹೊಸ ಭರವಸೆಗಳನ್ನವನು ನಮಗೆ ನೀಡುತ್ತಾನೆ. ನಿದ್ದೆಯಂತೆಯೇ ಹೊಸ ವರ್ಷಕ್ಕೆ ನಮ್ಮನ್ನು ಒಡ್ಡುತ್ತಾನೆ. ಆದಾಗ್ಯೂ ಮಿತ್ರನೊಬ್ಬ ಮಡಿದಾಗ ದುಃಖವನ್ನಾಚರಿಸುವುದು ವಾಡಿಕೆ. ಆದರೆ ಹುತಾತ್ಮನು ಮಡಿದಾಗ ಈ ಪದ್ಧತಿಗೆ ಅಷ್ಟು ಬೆಲೆಯಿಲ್ಲ.

ಹರ್ಷೋಲ್ಲಾಸದಲ್ಲಿ ತೇಲಿಕೊಂಡು ದುಃಖವೂ ಕೂಡ ದುಃಖವಾಗಿ ಉಳಿಯದೆ ಅನಿರ್ವಚನೀಯವಾದ ಆನಂದವಾಗಿ ಪರಿಣಮಿಸುತ್ತದೆ. ದುಃಖ ಬರುವುದಕ್ಕೆ ಮೊದಲೇ ಅದರಿಂದ ಓಡಿ ಹೋಗುವವನು ಅರ್ಧ ಸತ್ತಿರುತ್ತಾನೆ, ಅದು ಬಂದಾಗ ಪೂರ್ತಿ ಅಸುನೀಗುತ್ತಾನೆ. ಏನು ಬಂದರೂ ಬರಲಿ ಎಂದು ಸಿದ್ಧವಾಗಿರುವ ವ್ಯಕ್ತಿಯು ಎಲ್ಲ ನೋವಿನಿಂದ ಪಾರಾಗಿಬಿಟ್ಟಿರುತ್ತಾನೆ, ಅವನ ಹರ್ಷೋಲ್ಲಾಸವೇ ಅರಿವಳಿಕೆಯ ತರಹ ಕೆಲಸ ಮಾಡುತ್ತದೆ.

**ದಾಂಪತ್ಯಜೀವನ**

ದಾಂಪತ್ಯದಲ್ಲಿ ಯಾರಾದರೊಬ್ಬರು ಸಂಯಮದ ಎಲ್ಲೆ ದಾಟಿ ಎಗ್ಗಿಲ್ಲದೆ ಹರಿದಾಡುವ ಹಾಗಾದರೆ ಆ ದಾಂಪತ್ಯ ಅಸಹನೀಯವಾಗಿಬಿಡುತ್ತದೆ. ಇಬ್ಬರೂ ಪಾಲುದಾರರ ಸಮ್ಮಿಲನದ ಹಕ್ಕನ್ನು ಎತ್ತಿ ಹಿಡಿಯುವ ವ್ಯವಸ್ಥೆಯೇ ಮದುವೆ, ಇಲ್ಲಿ ಇನ್ನೊಬ್ಬರಿಗೆ ಪ್ರವೇಶವಿಲ್ಲ. ಹಾಗಿರಲಾಗಿ, ಯಾರೊಬ್ಬರೂ ಕೂಡ ಇನ್ನೊಬ್ಬರನ್ನು ಮಿಲನಕ್ಕಾಗಿ ಬಲಾತ್ಕಾರ ಮಾಡಲಾಗದು. ಅವರ ಮಿಲನಕ್ಕೆ ಜಂಟಿ ಒಪ್ಪಿಗೆ ಬೇಕೇಬೇಕು. ನೈತಿಕತೆಯೇ ದಾಂಪತ್ಯದ ತಳಹದಿಯಾಗಿರುವುದರಿಂದ ಅದರ ಉಲ್ಲಂಘನೆಯಾದ ಪಕ್ಷದಲ್ಲಿ ವಿಚ್ಛೇದನದ ಪರ್ಯಾಯದ ಬಗ್ಗೆ ಚಿಂತಿಸಬೇಕಾಗುತ್ತದೆ.

ಸರಿಯಾಗಿ ಹೇಳುವುದಾದರೆ ಮದುವೆಯ ಉದ್ದೇಶ ಪುರುಷ ಮತ್ತು ಸ್ತ್ರೀಯ ನಡುವೆ ಆಪ್ತವಾದ ಸ್ನೇಹ ಮತ್ತು ಸಾಹಚರ್ಯವನ್ನುಂಟುಮಾಡುವುದು. ಇಲ್ಲಿ ಲೈಂಗಿಕ ತೃಪ್ತಿಯಷ್ಟೇ ಗುರಿಯಾಗಿರುವುದಿಲ್ಲ. ಕೇವಲ ಲೈಂಗಿಕ ತೃಪ್ತಿಯನ್ನಷ್ಟೇ ಉದ್ದೇಶವಾಗುಳ್ಳ ಮದುವೆ ಮದುವೆಯೇ ಅಲ್ಲ. ಆ ತೃಪ್ತಿ ನಿಜವಾದ ಪ್ರೇಮದ

ನಿರಾಕರಣೆಯಾಗುತ್ತದೆ. ಸಾಹಚರ್ಯೆ ಹಾಗೂ ಪರಸ್ಪರ ಸೇವೆಗಾಗಿ ನಡೆದಿರುವಂಥ ಅನೇಕ ಆಂಗ್ಲರ ಮದುವೆಯನ್ನು ನಾನು ಚೆನ್ನಾಗಿ ಬಲ್ಲೆ. ನನ್ನ ದಾಂಪತ್ಯಜೀವನದ ಬಗ್ಗೆ ಮಾತನಾಡುವುದು ಇಲ್ಲಿ ಅಪ್ರಸ್ತುತವೆಂದು ಬಗೆಯದಿದ್ದಲ್ಲಿ ಹೇಳುತ್ತೇನೆ. ಲೈಂಗಿಕ ಸಂಪರ್ಕವನ್ನು ನಾವು ಬಿಟ್ಟ ನಂತರವೇ ನಿಜವಾದ ದಾಂಪತ್ಯಜೀವನದ ಸುಖವನ್ನನುಭವಿಸಿದುದು - ಅದೂ ನಮ್ಮ ಯೌವನದ ಪರಾಕಾಷ್ಠೆಯ ದಿನಗಳಲ್ಲಿ. ಆವಾಗಲೇ ನಮ್ಮ ಸಾಹಚರ್ಯೆ ಅರಳಿದುದು ಮತ್ತು ನಾವಿಬ್ಬರೂ ಭಾರತಕ್ಕೆ ಮತ್ತು ವಿಶಾಲವಾದ ಮಾನವಕೋಟಿಗೆ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಗಳಿಸಿಕೊಂಡದ್ದು. ವಾಸ್ತವವಾಗಿ ಈ ಆತ್ಮನಿರಾಕರಣೆ ಸಾಧ್ಯವಾದದ್ದು ಸೇವಾಮನೋಭಾವನೆಯ ಉತ್ಕಟತೆ ನಮ್ಮಲ್ಲಿ ಮೊಳೆತಾಗಲೆ.

ಮದುವೆ ಬಂಧನದ ಪರಿಶುದ್ಧತೆ ಮತ್ತು ಪಾವಿತ್ರ್ಯತೆಯನ್ನು ಅನುಭವಿಸುವುದಕ್ಕೆ ಮದುವೆಯಾದವರು ನಿಜವಾದ ದಂಪತಿಗಳು. ಅವರಿಗೆ ಆಂತರ್ಯದ ದೈವಿಕತೆ ಸಾಕ್ಷಾತ್ಕಾರವಾಗುತ್ತದೆ.

ಗಂಡ ಹೆಂಡಿರ ನಡುವೆ ಯಾವ ರಹಸ್ಯವೂ ಇರಬಾರದು. ಗಂಡ ಹೆಂಡಿರು ಒಬ್ಬರೊಡನೊಬ್ಬರು ಬೆರೆತುಬಿಡಬೇಕು. ಅವರು ಇಬ್ಬರಲ್ಲಿ ಒಬ್ಬರು ಅಥವಾ ಒಬ್ಬರಲ್ಲಿ ಇಬ್ಬರು.

ಈವತ್ತು ಹಿಂದೂ ಕುಟುಂಬಗಳಲ್ಲಿ ಬಹಳ ಗೊಂದಲವಿದೆ. ಮದುವೆ ಯಾದಾಗಲೂ ಗಂಡ ಹೆಂಡಿರಿಗೆ ತಮ್ಮ ಬಗ್ಗೆ ಏನೂ ತಿಳಿದಿರುವುದಿಲ್ಲ. ತನ್ನ ಸಂಗಾತಿಯ ಅಭಿಪ್ರಾಯವನ್ನು ತಿಳಿಯುವಂಥ ಯಾವುದೇ ಹೊಣೆಗಾರಿಕೆ ಗಂಡನಿಗಿರುವುದಿಲ್ಲ. ತನ್ನ ಹೆಂಡತಿ ಎಂದರೆ ಅವನಿಗೆ ಆಸ್ತಿ ಇದ್ದಂತೆ. ಪಾಪ, ಹೆಂಡತಿಯೂ ಕೂಡ ತಾನು ಗಂಡನ ಆಸ್ತಿಯೆಂದೇ ನಂಬುತ್ತಾ ಎಲ್ಲವನ್ನು ಹತ್ತಿಕ್ಕಿಕೊಳ್ಳುತ್ತಾಳೆ.

ನನ್ನ ಮಟ್ಟಿಗೆ, ದಾಂಪತ್ಯದ ಸ್ಥಿತಿ ಇನ್ನಾವುದೇ ಸ್ಥಿತಿಗಿಂತ ಶಿಸ್ತುಬದ್ಧವಾದದ್ದು. ಜೀವನವೆನ್ನುವುದು ಒಂದು ಕರ್ತವ್ಯ. ಒಂದು ನೀತಿ ಪರೀಕ್ಷೆ. ದಾಂಪತ್ಯಜೀವನವು ಇಹದಲ್ಲಿ ಹಾಗೂ ಪರದಲ್ಲಿ ಪರಸ್ಪರರ ಒಳ್ಳೆಯದನ್ನು ಹೆಚ್ಚಿಸಲು ಉದ್ದೇಶಿತ ವಾಗಿರುವಂಥದು. ಮಾನವಕೋಟಿಯ ಸೇವೆಗೆ ಅದು ಮುಡಿಪಾದದ್ದು.

ನವವಿವಾಹಿತ ಯುವಕ ತನ್ನ ಪತ್ನಿಯ ಗೌರವವನ್ನು ರಕ್ಷಿಸಬೇಕು, ಆತ ಆಕೆಯ ಪ್ರಭುವಲ್ಲ, ನಿಜವಾದ ಸ್ನೇಹಿತ. ಅವಳ ಶರೀರ ಮತ್ತು ಆತ್ಮವನ್ನು ಪವಿತ್ರವೆಂದು ತಿಳಿಯಬೇಕು, ಆಕೆಯೂ ಕೂಡ ಗಂಡನ ಶರೀರ ಮತ್ತು ಆತ್ಮವನ್ನು ಹಾಗೆಯೇ ತಿಳಿಯಬೇಕು. ಆ ಗುರಿಯೆಡೆಗೆ ಪ್ರಾರ್ಥನಾಪೂರ್ವಕವಾದ ದುಡಿಮೆ, ಸರಳತೆ ಹಾಗೂ ಸಂಯಮದ ಬಾಳನ್ನು ಆತ ಬಾಳಬೇಕು. ಅವರಲ್ಲಿ ಯಾರೊಬ್ಬರೂ ಪರಸ್ಪರರನ್ನು ಭೋಗದ ವಸ್ತುವೆಂದು ಬಗೆಯದಿರಲಿ.

ತಾಯಿನಾಡ ಸೇವೆಗಾಗಿ ಅವರ ಬದುಕು ಮುಡಿಪಾಗಿರಲಿ, ಅವರು ತಮ್ಮ ಶರೀರ ಸವೆಯುವ ತನಕ ದುಡಿಯುವಂತಾಗಲಿ. ಬಡವರು ದುಡಿಯುವ ಹಾಗೆ ತಮ್ಮ ಹುಬ್ಬಿನ ಬೆವರಿನಿಂದ ಆಹಾರವನ್ನು ದಂಪತಿಗಳು ಉತ್ಪತ್ತಿ ಮಾಡಿಕೊಳ್ಳಲಿ. ದಿನದ ಶ್ರಮದ ಮೂಲಕ ಪರಸ್ಪರರಿಗೆ ಸಹಾಯವಾಗಿ, ಅದರಲ್ಲೇ ಅವರು ಸುಖ ಕಾಣುವಂತಾಗಲಿ.

ಗಾಂಧೀಜಿಯವರು ಇಂಥ ಅಮೂಲ್ಯವಾದ ಜೀವನಕಲೆಯನ್ನು ಜಗತ್ತಿಗೆ ಬೋಧಿಸಿದ್ದಾರೆ. ಭೋಗದ ಆಕರ್ಷಣೆಗೆ ಒಳಗಾಗಿ ಸಂಯಮದ ಎಲ್ಲೆ ಮೀರಿ ಬದುಕುತ್ತಿರುವ ವರ್ತಮಾನದ ಮಂದಿಗೆ ಅವರ ನುಡಿಗಳು ಪಥ್ಯವಾಗುವುದು ಕಷ್ಟ. ಗಾಂಧೀಜಿಯವರು ಹೇಳದ ವಿಷಯವಿಲ್ಲ. ಎಲ್ಲ ಸಂಗತಿಗಳ ಬಗ್ಗೆ ಅವರು ಮಾತನಾಡಿದ್ದಾರೆ. ಅವರು ಬೋಧಿಸಿರುವ ವಿವೇಕವನ್ನು ಸ್ವಲ್ಪ ಪ್ರಮಾಣದಲ್ಲಿ ಯಾದರೂ ನಾವು ಅಳವಡಿಸಿಕೊಳ್ಳುವುದಾದರೆ ನಮ್ಮ ಜೀವನ ಪಾವನವಾಗುವುದರಲ್ಲಿ ಸಂಶಯವಿಲ್ಲ.

□

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ
ವಿವಾಹವ ಮಾಡಿದಿರಿ, ಸ್ವಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣಾರ್ಥಿ !

- ಅಕ್ಕಮಹಾದೇವಿ

# ನೂರೊಂದು ವಿರಕ್ತರು: ಪರಿಚಯಾತ್ಮಕ ಅವಲೋಕನ

**ಡಾ. ರಣಧೀರ**

ಹದಿನಾಲ್ಕು–ಹದಿನೈದನೆಯ ಶತಮಾನವು ದಕ್ಷಿಣ ಭಾರತದ ಇತಿಹಾಸದಲ್ಲಿ ಗಮನಾರ್ಹವಾದ ಕಾಲಘಟ್ಟ. ಒಂದು ಕಡೆಯಿಂದ ರಾಜಕೀಯ ತಲ್ಲಣದ ಕಾಲ, ಮತ್ತೊಂದು ಕಡೆಯಿಂದ ಎರಡು ಸಂಸ್ಕೃತಿಗಳ ನಡುವಿನ ಪೈಪೋಟಿಯ ಕಾಲ, ಮಗದೊಂದು ಕಡೆಯಿಂದ ಮಹಮ್ಮದೀಯರ ಆಳ್ವಿಕೆ ವಿರುದ್ಧ ದಕ್ಷಿಣದ ಹಲವು ಸಾಮ್ರಾಜ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರದಾಡುತ್ತಿದ್ದ ಕಾಲ. 12ನೆಯ ಶತಮಾನದ ವಚನ/ಶರಣರ ಚಳುವಳಿಗೆ ಹತ್ತು ಹಲವಾರು ಕಾರಣಗಳಿದ್ದವು. ಹಾಗೆಯೇ ಈ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವು ಹುಟ್ಟಿಕೊಳ್ಳಲು ಕೆಲವು ಕಾರಣಗಳಿದ್ದವು. ಬಹುಮುಖ್ಯವಾಗಿ ಉತ್ತರಭಾರತದಲ್ಲಿ ನೆಲೆಯೂರಿದ್ದ ಸುಲ್ತಾನರು ದಕ್ಷಿಣಭಾರತದ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಲು ಆರಂಭಿಸಿದ ಸಲುವಾಗಿ ತೀವ್ರತರ ರಾಜಕೀಯ ಚಟುವಟಿಕೆಗಳು ದಕ್ಷಿಣಭಾರತದಲ್ಲೂ ತಲೆದೋರಿದ್ದವು. ಇನ್ನೂ ಮಹತ್ವದ ಸಂಗತಿಯೆಂದರೆ 1295ರ ಆರಂಭದಲ್ಲಿ ಅಲ್ಲಾವುದ್ದೀನ್ ಖಿಲ್ಜಿ ದೇವಗಿರಿಯ ಮೇಲೆ (ರಾಮಚಂದ್ರ ದೊರೆ), 1309ರಲ್ಲಿ ಕಾಕತೀಯರ ಮೇಲೆ, 1311ರಲ್ಲಿ ಹೊಯ್ಸಳ ಮತ್ತು ಪಾಂಡ್ಯರ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ನಂತರ ಬಂದ ಮಹಮ್ಮದ್ ಬಿನ್ ತೊಘಲಕ್ 1323ರಲ್ಲಿ ಕಾಕತೀಯ ರಾಜ್ಯವನ್ನು, 1330ರಲ್ಲಿ ಮಧುರೆಪಾಂಡ್ಯರ ರಾಜ್ಯವನ್ನು, 1327ರಲ್ಲಿ ಕಮ್ಮಟದುರ್ಗವನ್ನು, ದೇವಗಿರಿಯ ಸೇವುಣರ ರಾಜ್ಯವನ್ನು ಮೊದಲೆ ತನ್ನ ರಾಜ್ಯಕ್ಕೆ ಸೇರಿಸಿಕೊಂಡು 1330ರ ಹೊತ್ತಿಗೆ ದಕ್ಷಿಣಭಾರತದ ಬಹುತೇಕ ಎಲ್ಲಾ ಹಿಂದೂ ಸಾಮ್ರಾಜ್ಯಗಳು ದಿಲ್ಲಿ ಸುಲ್ತಾನರ ಸಾಮ್ರಾಜ್ಯವನ್ನು ಸೇರಿದವು. ಹೊಯ್ಸಳ ರಾಜ್ಯ ಮಾತ್ರ ಒಂದಿಷ್ಟು ಉಸಿರಾಡುತ್ತಿತ್ತು. ಹೀಗೆ ರಾಜಕೀಯವಾಗಿ ಎಲ್ಲವೂ ಶೂನ್ಯವಾಗಿರುವಾಗ ಹೊಯ್ಸಳ ಹಾಗೂ ಕಾಕತೀಯರು ತಮ್ಮತಮ್ಮಲ್ಲೇ ಕಲಹದಲ್ಲಿ ನಿರತರಾಗಿರುವಾಗ ಜನತೆಗೆ ಆಶಾಕಿರಣವಾಗಿ ಬಂದವರು ಅಂದಿನ ಧರ್ಮಗುರುಗಳು. ಜನರ ಮನಸ್ಸಿನಲ್ಲಿ ಧರ್ಮಜ್ಯೋತಿ ನಂದದಂತೆ ನೋಡಿಕೊಳ್ಳುವ ಜೊತೆಗೆ

---

**ಡಾ. ರಣಧೀರ,** ಕನ್ನಡ ಅತಿಥಿ ಉಪನ್ಯಾಸಕರು, ಡಿ.ವಿ.ಎಸ್. ಸಂಯುಕ್ತ ಪದವಿಪೂರ್ವ ಕಾಲೇಜು, ಬಸವೇಶ್ವರ ಸರ್ಕಲ್, ಶಿವಮೊಗ್ಗ –577201

ರಾಜಕೀಯವಾಗಿಯೂ ಅವರು ಜಾಗೃತರಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದವರೆಂದರೆ ಅಂದಿನ ದೇವಸ್ಥಾನ, ಮಠ, ಆಶ್ರಮಗಳಂತಹ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಆಚಾರ್ಯರು ಹಾಗೂ ವಿರಕ್ತಮುನಿಗಳು. ಅಂದಿನ ಒಂದು ಮುಖ್ಯ ಧಾರ್ಮಿಕ ಕೇಂದ್ರವಾದ ಪಂಪಾಕ್ಷೇತ್ರವು ಈ ಹಿಂದೆ ವಿದ್ಯಾಕೇಂದ್ರವಾಗಿ, ಹರಿಹರ–ರಾಘವಾಂಕರಂತಹ ಪ್ರಸಿದ್ಧ ಕವಿಗಳಿಗೆ ವಾಸಸ್ಥಳವಾಗಿ, ಪ್ರಭಾವಿ ಆಚಾರ್ಯ–ಸ್ವಾಮಿಗಳ ಕರ್ಮಭೂಮಿಯಾಗಿ, ಬಹುಮುಖ್ಯವಾಗಿ ಎಲ್ಲಾ ಭಕ್ತರ ಒಂದು ಪುಣ್ಯ ವಿರೂಪಾಕ್ಷನ ಕ್ಷೇತ್ರವಾಗಿ ಹೆಸರು ಪಡೆದಿತ್ತು. ಈ ಮಧ್ಯೆ ಮುಸ್ಲಿಂ ದಾಳಿಕಾರರಿಂದ ಹಿಂದೂ ಸಂಸ್ಕೃತಿಯನ್ನು ಉಳಿಸಬಲ್ಲ ಒಂದು ಪ್ರಬಲ ರಾಜ್ಯವನ್ನು ಕಟ್ಟಲು ಸಾಧ್ಯವೆಂಬ ವಿಶ್ವಾಸ ಅಂದಿನ ಕಾಳಾಮುಖ ಆಚಾರ್ಯ ಕಾಶಿವಿಲಾಸ ಕ್ರಿಯಾಶಕ್ತಿ ಗುರು ಅವರಲ್ಲಿ ಮೂಡಿತ್ತು. ಅದಕ್ಕಾಗಿ ಅವರು ಕಂಕಣಬದ್ಧರಾಗಿ ತಾತ್ವಿಕವಾಗಿ ತಮ್ಮಲ್ಲಿ ಇದ್ದಿರಬಹುದಾದ ಭೇದಗಳನ್ನು ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ತಮ್ಮೆಲ್ಲಾ ಶಕ್ತಿಯನ್ನು ಸಂಗಮ ಸಹೋದರರಿಗೆ ನೀಡಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲು ಬೆಂಬಲವಾಗಿ ನಿಂತರು. "ಅವರ ಪ್ರಭಾವ ಪಾಂಡಿತ್ಯಾದಿಗಳನ್ನು ಶಾಸನಗಳು ಮನವಾರೆ ಕೊಂಡಾಡಿವೆ. ಈ ಕ್ರಿಯಾಶಕ್ತಿಯನ್ನು ಶಾಸನಗಳು 'ಕ್ರಿಯಾಶಕ್ತಿಪಂಡಿತ', 'ಕ್ರಿಯಾಶಕ್ತಿ ವಿದ್ಯಾರಣ್ಯ', 'ಕ್ರಿಯಾಶಕ್ತಿದೇಶಿಕ', 'ಕಾಶಿವಿಲಾಸಕ್ರಿಯಾಶಕ್ತಿ', 'ಕ್ರಿಯಾಶಕ್ತ್ಯಾಚಾರ', 'ಕ್ರಿಯಾಶಕ್ತಿಗುರು' ಮುಂತಾಗಿ ಕರೆದಿವೆ. 'ಯಃ ಸಾಕ್ಷಾತ್ ಗಿರೀಶಾವತಾರ ವಪುಷಃ', 'ತಪೋರಾಜ್ಯ ಲಕ್ಷ್ಮೀನಿವಾಸಕಾಯ ಶ್ರೀಕ್ರಿಯಾಶಕ್ತಿಃ' ಮುಂತಾಗಿ ಕ್ರಿಯಾಶಕ್ತಿಯನ್ನು ಶಾಸನಗಳು ಬಣ್ಣಿಸುತ್ತವೆ. ಶಿವಮೊಗ್ಗೆಯ ಶಾಸನವೊಂದು ಇವರನ್ನು ಕುರಿತು; ಕ್ರಿಯಾಶಕ್ತಿಗಳು ಮೂರು ವೇದಗಳನ್ನೂ ಪುರಾಣಗಳನ್ನೂ ಸಮಾಲೋಚಿಸಿ ಲೋಕಹಿತಕ್ಕಾಗಿಯೂ ಮಾಧವರ ಪ್ರೀತಿಗಾಗಿಯೂ ಶೈವಾಗಮಸಾರ ಸಂಗ್ರಹವನ್ನು ರಚಿಸಿದರು ಎಂದು ಹೇಳುತ್ತದೆ. ಗಂಗಾದೇವಿ (ಬುಕ್ಕರಾಯನ ಸೊಸೆ) ತನ್ನ 'ಮಧುರಾವಿಜಯಂ' ಎಂಬ 'ವೀರ ಕಂಪಣರಾಯ ಚರಿತಂ' ಗ್ರಂಥದಲ್ಲಿ 'ಅಸಾಧಾರಣ ಸಾರ್ವಜ್ಞ ವಿಲಸತ್ ಸರ್ವಮಂಗಲಂ ಕ್ರಿಯಾಶಕ್ತಿಗುರುಂ ವಂದೇ ತ್ರಿಲೋಚನಮಿವಾಪರಂ' ಎಂದು ಕ್ರಿಯಾಶಕ್ತಿಯನ್ನು ಸಾಕ್ಷಾತ್ ಶಿವನಿಗೆ ಹೋಲಿಸಿದ್ದಾಳೆ. ಇವರು ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮ ಸಹೋದರರ ಕುಲಗುರುಗಳೂ ಆಗಿದ್ದುದನ್ನು ಅನೇಕ ಶಾಸನಗಳು ಸಾರುತ್ತವೆ" ಎಂದು ಡಾ. ಬಿ.ವ್ಹಿ. ಮಲ್ಲಾಪುರ ಹೇಳುತ್ತಾರೆ. ಹೀಗೆ ಧರ್ಮಗುರುಗಳಿಂದ ಪ್ರಭಾವಶಾಲಿಯಾಗಿ ತಲೆ ಎತ್ತಿದ ವಿಜಯನಗರ; ಎರಡನೆಯ ಪ್ರೌಢದೇವರಾಯನ ಕಾಲಕ್ಕೆ (1424–1446) ಮಹಾಸಾಮ್ರಾಜ್ಯವಾಗಿ ಮೆರೆಯಲಾರಂಭಿಸಿತು. ಜೊತೆಗೆ ಅಲ್ಲಿಯವರೆಗೆ ರಾಜ್ಯವಿಸ್ತರಣೆ ಹಾಗೂ ರಾಜ್ಯ–ರಾಜ್ಯಗಳ ನಡುವಿನ ಯುದ್ಧದಲ್ಲಿ ನಿರತರಾದ ದೊರೆಗಳು ಧಾರ್ಮಿಕ ಚಟುವಟಿಕೆಗಳ

ಕಡೆಗೆ ಗಮನಹರಿಸಿರಲಿಲ್ಲ. ಪ್ರೌಢದೇವರಾಯನ ಕಾಲಕ್ಕೆ ಹೆಚ್ಚು ಯುದ್ಧಗಳು–ದಾಳಿಗಳು ತಲೆದೋರಲಿಲ್ಲ. ಪ್ರಜೆಗಳು ನೆಮ್ಮದಿಯ ಬದುಕು ಸಾಗಿಸುತ್ತಿದ್ದರು. ಆಡಳಿತದಲ್ಲಿ ಸ್ಥಿರತೆ, ಮತೀಯ ಔದಾರ್ಯ, ಸಂಸ್ಕೃತಿ ಪ್ರೇಮ ರಾಜನಲ್ಲಿದ್ದುದರಿಂದ ಸಾಹಿತ್ಯ ಸೃಷ್ಟಿ ಮತ್ತು ಧರ್ಮಗಳ ಪುನರ್ ಸೃಷ್ಟಿಗೆ ಕಾಲ ಕೂಡಿ ಬಂದಿತ್ತು. ಆ ಕಾಲಕ್ಕಾಗಲೇ ವಚನ ಚಳುವಳಿಯಾದ ನಂತರ ಕಲ್ಯಾಣಕ್ರಾಂತಿಯಿಂದ ಶರಣರು ಶೈವ ಕೇಂದ್ರಗಳನ್ನು ಆಶ್ರಯಿಸಿಕೊಂಡು ಹಂಪೆಗೂ ಬಂದಿರುವ ಸಾಧ್ಯತೆಗಳಿವೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹಂಪೆಯ ಪರಿಸರವನ್ನು ದಾಟಿ ಶಿವಮೊಗ್ಗ ಪ್ರಾಂತ್ಯದತ್ತ ಬಂದ ಶರಣರು ಹಲವರಿದ್ದಾರೆ. (ಉದಾ: ನುಲಿಯ ಚಂದಯ್ಯ, ಅಕ್ಕನಾಗಮ್ಮ) ಹಾಗಾಗಿಯೇ ಸರ್ವಸಮಾನತೆ ಸಮಾಜದಲ್ಲಿ ತರಲು ಆಶಿಸಿದ ಶರಣರ ಮಾರ್ಗದಲ್ಲಿ ನೂರೊಂದು ವಿರಕ್ತರ ಗಣ ಹುಟ್ಟಿ, ಆ ಧರ್ಮವನ್ನು ಕಟ್ಟಲು ರಾಜನ ನಿಕಟವರ್ತಿಗಳಾಗಿ ಶ್ರಮಿಸಿದರು. ಇಮ್ಮಡಿ ಪ್ರೌಢದೇವರಾಯ ಸರ್ವಧರ್ಮಗಳನ್ನು ಸಮಾನವಾಗಿ ಕಂಡರೂ ಲಿಂಗಾಯತ ಧರ್ಮ ಪಕ್ಷಪಾತಿಯಾಗಿ ಈ ಧರ್ಮಕ್ಕೆ ಒತ್ತುಕೊಟ್ಟನು. ಹಾಗಾಗಿಯೇ "ವೀರಶೈವ ಕವಿಗಳನ್ನು ಬಿಟ್ಟು ಇಲ್ಲಿಯವರೆಗೆ ಬೇರಾವ ಮತದ ಕವಿಯೂ ಪ್ರೌಢರಾಯನನ್ನು ತಮ್ಮ ಮತದವನೆಂದು ಉಲ್ಲೇಖಿಸಿಲ್ಲ. ಇದು ಕೂಡ ಅವನು ವೀರಶೈವನೆಂಬುದನ್ನೇ ಸಮರ್ಥಿಸುತ್ತದೆ" ಅದಕ್ಕೆ ಬಹುಮುಖ್ಯ ಕಾರಣ ಆತನ ದಂಡಾಧಿಕಾರಿಯಾದ ಲಕ್ಕಣ್ಣ ಮತ್ತು ಜಕ್ಕಣ್ಣ ಹಾಗೂ ಕರಸ್ಥಲ ವೀರಣ್ಣೊಡೆಯರು. ವೀರಶೈವರಾದ ಇವರು ಅವ್ಯವಸ್ಥೆಗೆ ಒಳಗಾದ ಧರ್ಮವನ್ನು ಪುನರುಜ್ಜೀವನಗೊಳಿಸಿ ಮತ್ತೆ ಸಮಾಜದಲ್ಲಿ ಶರಣರ ಸರ್ವಸಮಾನತೆಯ ನಾಡು ಕಟ್ಟಲು ಒಗ್ಗೂಡಬೇಕಿತ್ತು. ಅದಕ್ಕಾಗಿಯೇ ಧರ್ಮವನ್ನು ಉಳಿಸಿಕೊಳ್ಳಲು ಈ ನೂರೊಂದು ವಿರಕ್ತರ ಗಣ ಜನ್ಮ ತಾಳಿತು. ಸಮಾಜದ ಸಮಷ್ಟಿ ಹಿತವನ್ನು ಕಾಯುವಲ್ಲಿ ಶ್ರಮಿಸಿದ ಈ ನೂರೊಂದು ವಿರಕ್ತರು ಶರಣರ ಮಾರ್ಗದಲ್ಲೇ ತಮ್ಮ ನಡೆ–ನುಡಿಯನ್ನು ಚಾಚೂ ತಪ್ಪದೇ ಪಾಲಿಸಿದರು.

"ವೀರಶೈವ ಗಣವರರಲ್ಲಿ ಪ್ರಮಥಗಣ, ರುದ್ರಗಣ, ವೃಷಭಗಣ, ತ್ರಿಷಷ್ಠಿ ಪುರಾತನಗಣ, ಷೋಡಶಗಣ, ತೇರಸಗಣ, 770 ಅಮರಗಣ ಹಾಗೂ ನೂತನ ಗಣವರರ ಚರಿತ್ರೆ ಸಮ್ಮಿಳಿತವಾಗಿರುವಂತೆ ನೂರೊಂದು ವಿರಕ್ತ ಗಣೇಶ್ವರರ ಚರಿತ್ರೆಯೂ ಸೇರಿದೆ. 15ನೆಯ ಶತಮಾನದ ವಿಜಯನಗರ ದೊರೆ ಪ್ರೌಢದೇವ ರಾಯನ ಮಹಾಮಂತ್ರಿ ಲಕ್ಕಣ್ಣ ದಂಡೇಶನು ಉಲ್ಲೇಖಿಸಿದ 600ಕ್ಕೂ ಮಿಕ್ಕಿನ ನೂತನಗಣಂಗಳ ಕಾಲ ಮುಗಿಯುತ್ತಿದ್ದಂತೆಯೇ ನೂರೊಂದು ವಿರಕ್ತರು ಉದಯರಾಗಿ ವೀರಶೈವವನ್ನುದ್ಧರಿಸಿದರೆಂಬ ಸಂಗತಿ ಅನೇಕ ಪುರಾಣಗಳಲ್ಲಿದೆ. ಅಷ್ಟೇ ಅಲ್ಲ ನೂರೊಂದು ವಿರಕ್ತರು ಅವರ ಕಾಯಕ ಹಾಗೂ ಜೀವನ ತತ್ವಗಳನ್ನೊಳಗೊಂಡ ಒಂದು ಸ್ವತಂತ್ರ ಕಾವ್ಯವೇ 'ಮೋದಿರುದ್ರ'ನೆಂಬ ಕವಿಯಿಂದ

ರಚಿತವಾಗಿದೆ. 'ಕೈಲಾಸದಿಂದಿಳೆದೈತಂದು ಜಂಗಮ ಸ್ಥಲವನಂಗೀಕರಿಸಿದವರು', 'ಶಿವನ ಬೆಸನವನಾಂತು ಭುವನಕೆ ಅವತರಿಸಿ ಮೀಸಲಳಿಯದೆ ಲಿಂಗನಿಷ್ಠೆಯನು ಪ್ರಭುವಿಂಗೆ ತೋರಿದವರು,' 'ಪರಮೇಶ್ವರನ ಆಜ್ಞೆಯಿಂದ ಕೈಲಾಸದಿಂ ಮೃತ್ಯುಲೋಕಕ್ಕೆ ದಯಮಾಡಿಸಿ ಲೀಲೆಯ ಮಾಡಿ ಶಿವಭಕ್ತಿಯಂ ನೆಲೆಗೊಳಿಸಿದವರು' ಎಂಬುದಾಗಿ ಇವರ ಮಹತಿಯನ್ನು ಪ್ರಶಂಸಿಸಲಾಗಿದೆ" ಎಂಬ ಹೇಳಿಕೆಗಳು ನೂರೊಂದು ವಿರಕ್ತರು ಒಗ್ಗೂಡಲು ಕಾರಣಗಳೇನು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ವಿಜಯನಗರದ ನೂರೊಂದು ವಿರಕ್ತರು ಮೂಲತಃ ಎಲ್ಲಿಂದ ಬಂದರು ಎಂಬುದಕ್ಕೆ ಹೆಚ್ಚಿನ ಆಧಾರಗಳು ದೊರಕುವುದಿಲ್ಲ. ಆದರೆ ಲಕ್ಕಣ್ಣ, ಜಕ್ಕಣಾಮಾತ್ಯರ ವೀರಶೈವಾಭಿಮಾನ, ಪ್ರೌಢದೇವರಾಯನ ಉದಾರಾಶ್ರಯ ಈ ರಾಜಕೀಯ ಆಸರೆಯ ನೆರಳಲ್ಲಿ ವೀರಶೈವ ಸಾಹಿತ್ಯಾಭಿವೃದ್ಧಿ, ಧರ್ಮಸಂಘಟನೆ, ತತ್ತ್ವಪ್ರಚಾರಕ್ಕೆಂದು ನಾಡಿನ ಮೂಲೆ-ಮೂಲೆಗಳಿಂದ ಪಂಡಿತರು, ಕವಿಗಳು, ವಿರಕ್ತರು, ಅನುಭಾವಿ ಆಚಾರ್ಯರು ಅಂದು ಬಂದು ಸೇರಿ ಒಂದು ಸಾಮೂಹಿಕ ಯೋಜನೆಯಲ್ಲಿ ಕಾರ್ಯಪ್ರವೃತ್ತರಾದರು.

ಈ ವಿರಕ್ತರ ಪರಂಪರೆಯನ್ನು ಕುರಿತು ನಿರ್ದಿಷ್ಟವಾಗಿ ಹೇಳಲು ಕಷ್ಟಸಾಧ್ಯ. ಈ ಧರ್ಮದಲ್ಲಿ ನಿರಂಜನಮೂರ್ತಿಗಳಿಗೆ ವಿರಕ್ತರು ಎಂದು ಕರೆಯುತ್ತಾರೆ. ಈ ವಿರಕ್ತರ ಸಂಪ್ರದಾಯ-ಪರಂಪರೆ ಹುಟ್ಟು ಕುರಿತು ಹೇಳಲು ಕಷ್ಟ. ಆದಾಗ್ಯೂ ವೈರಾಗ್ಯ ಮೂರ್ತಿಯಾಗಿ 12ನೆಯ ಶತಮಾನದಲ್ಲಿ ಶೂನ್ಯ ಸಿಂಹಾಸನವೇರಿ ಪರಮವೈರಾಗ್ಯಮೂರ್ತಿ ಎನಿಸಿದ ಅಲ್ಲಮಪ್ರಭುವೇ ಮೊದಲ ವಿರಕ್ತ. ಅವನಲ್ಲಿ ವಿರಕ್ತ ತತ್ತ್ವದ ಛಾಯೆ ಎದ್ದು ಕಾಣುತ್ತದೆ. (ಅಲ್ಲಮ ಪ್ರಭುವಿನ ಮೇಲೆ ಬೇರೆಯವರ ಪ್ರಭಾವವು ಇದ್ದಿರಬಹುದು). ಅಲ್ಲಮಪ್ರಭುವಿನ ಮೂಲಕ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಾರಂಭವಾದ ಈ ಪರಂಪರೆ 15ನೆಯ ಶತಮಾನದಷ್ಟೊತ್ತಿಗೆ ಒಂದು ಗಣವಾಗಿಯೇ ಹುಟ್ಟಿಕೊಳ್ಳುತ್ತದೆ. ಅದೇ ಈ ನೂರೊಂದು ವಿರಕ್ತರ ಗಣ. ನೂರೊಂದು ವಿರಕ್ತರ ಕುರಿತು ಮತ್ತು ಅವರ ಸಂಖ್ಯಾನಿರ್ಣಯದ ಕುರಿತು ಹಲವು ಚರ್ಚೆಗಳು ನಡೆದಿವೆ. ಇವರನ್ನು ಉಲ್ಲೇಖಿಸುವ ಕೃತಿಗಳಲ್ಲಿ ಒಂದೆರಡು ಮಾತ್ರ ಸ್ವತಂತ್ರ ಕೃತಿಗಳು. ಇನ್ನುಳಿದವು ಸಾಂದರ್ಭಿಕವಾಗಿ ನೂರೊಂದು ವಿರಕ್ತರ ಪದಪ್ರಯೋಗ ಮಾಡಿದ ಗ್ರಂಥಗಳಾಗಿವೆ. ಅವುಗಳನ್ನು ಕಾಲಾನುಕ್ರಮಣಿಕೆಯಲ್ಲಿ ಹೀಗೆ ಅವಲೋಕಿಸಬಹುದು.

**1. ಲಕ್ಕಣ್ಣದಂಡೇಶನ-ಶಿವತತ್ತ್ವ ಚಿಂತಾಮಣಿ (1416-1446)**

ಎರಡನೆಯ ಪ್ರೌಢದೇವರಾಯನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯವು ವಿರಾಜಮಾನವಾಗಿದ್ದ ಸಂದರ್ಭದಲ್ಲಿ ರಾಯಗೆ ಆಪ್ತನೂ, ಸಾಮ್ರಾಜ್ಯದ ಪ್ರಧಾನ ಶಿರೋಮಣಿಯೂ, ಮಹಾದಂಡನಾಯಕನೂ ಆಗಿದ್ದ ಲಕ್ಕಣ್ಣ ದಂಡೇಶನು 'ಶಿವತತ್ತ್ವ

ಚಿಂತಾಮಣಿ' ಎಂಬ ಕೃತಿಯನ್ನು ಬರೆದಿದ್ದಾನೆ. "ಶಿವತತ್ತ್ವ ಚಿಂತಾಮಣಿಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದರೆ 101 ವಿರಕ್ತರ ಸುಳುಹು ಹತ್ತುತ್ತದೆ. ಲಕ್ಕಣ್ಣ ದಂಡೇಶ 'ಹದಿನಾಡೊಳೆಸೆವ ಬೊಮ್ಮನ ಹಳ್ಳಿಯಲ್ಲಿರ್ಪ ಮದನಹರ ಶರಣ ವೀರಣ್ಣಯ್ಯ'ನನ್ನು ಉಲ್ಲೇಖಿಸಿದ್ದಾನೆ. ಇವನು ಕರಸ್ಥಲದ ನಾಗಿದೇವನ ಗುರುವಾದ ಕರಸ್ಥಲ ವೀರಣ್ಣೊಡೆಯನಾಗಿರುವ ಸಾಧ್ಯತೆಯಿದೆ" ಎಂದು ತಿಳಿಸಿದ್ದಾರೆ.

ಸಂಧಿ 38 ರಲ್ಲಿ ಸುಮಾರು 40–50 ಕಾಯಕನಿರತ ವ್ಯಕ್ತಿಗಳನ್ನು ಹೆಸರಿಸುವನು. ಅಲ್ಲದೆ 600 ಮಂದಿ ನೂತನ ಶರಣ ಗಣವನ್ನು ತಿಳಿಸಿರುವನು. ಕವಿ ಕಾಯಕನಿರತ ಶರಣರ ಕುರಿತು ತೋರಿದ ಕಾಳಜಿಯ ಹಿಂದೆ 12ನೆಯ ಶತಮಾನದ ಶರಣರ ಕಾಯಕತತ್ತ್ವ ನಿಷ್ಠೆಯೇ ಕೆಲಸ ಮಾಡಿದೆ ಎನಿಸುತ್ತದೆ. ಅಲ್ಲದೆ ಲಿಂಗಾಯತ ಪುನರುತ್ಥಾನ ಚಳುವಳಿಯ ಕೇಂದ್ರವೆನಿಸಿದ ವಿಜಯಕಲ್ಯಾಣ ನಗರವು, ಚಳುವಳಿಗೆ ಆಶ್ರಯದಾತರಾದ ಪ್ರೌಢದೇವರಾಯ ಹಾಗೂ ಚಳುವಳಿಯ ನೇತ್ರದಾರ ಲಕ್ಕಣ್ಣದಂಡೇಶ ಇವರ ವಿಷಯಗಳು ಈ ಸಂಧಿಯಲ್ಲಿ ಹೇಳಲ್ಪಟ್ಟಿವೆ. ನೂತನ ಗಣಗಳನ್ನು ಕುರಿತು ಕವಿ ಹೇಳಿದ ಎಲ್ಲಾ ವಿಚಾರ ಸನ್ನಿವೇಶಗಳು ಆತನ ಕಾಲದವುಗಳು ಎಂಬುದು ಗಮನಾರ್ಹವಾದ ವಿಚಾರ. ಇಲ್ಲಿನ 600ಕ್ಕೂ ಮಿಕ್ಕ ಗಣವರರು ಅಂದಿನ ಲಿಂಗಾಯತ ಧರ್ಮದ ಪುನರುತ್ಥಾನ ಸಂಕೇತವೆಂದರೆ ತಪ್ಪಾಗಲಾರದು. ನೂರೊಂದು ವಿರಕ್ತರು ಮಾತ್ರ ಹಂಪೆಯ ಪರಿಸರದ ಬೆಟ್ಟ–ಗುಡ್ಡ–ಕಾಡು–ಕಣಿವೆಗಳಲ್ಲಿ ವಾಸವಾಗಿದ್ದರೆ, ನೂತನಗಣವರರು ಚದುರಿಹೋದ ಊರುಗಳಲ್ಲಿ ವಾಸವಾಗಿದ್ದ ವಿಚಾರ ಕವಿ ಗುರುತಿಸಿದ ನೂತನ ಗಣದವರ ಊರುಗಳ ಹೆಸರುಗಳಿಂದ ಅರಿಯಬಹುದು. ಈ ನೂತನ ಗಣವರರಲ್ಲಿ ಹೆಸರು ಉಲ್ಲೇಖಗೊಳ್ಳದ (ಅಂದರೆ ನೂರೊಂದು ವಿರಕ್ತರಲ್ಲಿ ಅನೇಕರ ಹೆಸರು ಗೊತ್ತಾಗದೆ ವಿರಕ್ತರ ಕಾವ್ಯದಲ್ಲಿ ಶಾಂತ, ಶಾಂತೇಶ ಇತ್ಯಾದಿಯಾಗಿ ಉಲ್ಲೇಖಗೊಂಡಿವೆ.) ವಿರಕ್ತರ ಹೆಸರು ಸೇರಿರುವ ಸಾಧ್ಯತೆ ಇದೆ ಎಂಬುದು ತಳ್ಳಿಹಾಕುವ ಮಾತಲ್ಲ. ಡಾ. ಶಿವಾನಂದ ವಿರಕ್ತಮಠರು "ಶಿವತತ್ತ್ವ ಚಿಂತಾಮಣಿಯಲ್ಲಿ ಲಕ್ಕಣ್ಣದಂಡೇಶ, ಭಕ್ತ್ಯಾವೇಶದಿಂದ ಬಣ್ಣಿಸಿರುವ ಚರಲಿಂಗಮೂರ್ತಿಗಳು ನೂರೊಂದು ವಿರಕ್ತರೇ ಆಗಿರಬೇಕೆಂದು" ಹೇಳಿರುವ ಮಾತು ಒಪ್ಪತಕ್ಕದ್ದಾಗಿದೆ. ಮೂಲತಃ ಲಿಂಗಾಯತರಲ್ಲಿ ಚರಲಿಂಗಮೂರ್ತಿಗಳೆಂದರೆ ಅವರು ನಿರಂಜನಮೂರ್ತಿಗಳೇ ಆಗಿರುತ್ತಾರೆಂಬುದು ಮನಗಾಣಬೇಕು. ಇವತ್ತಿಗೂ ವಿರಕ್ತ ಪರಂಪರೆಯ ಮಠಾಧಿಪತಿಗಳಿಗೆ ಬಳಸುವ ಬಿರುದಾಂಕಿತ 'ಶ್ರೀಮನ್ ನಿರಂಜನ ಪ್ರಣವಸ್ವರೂಪಿ' ಎಂದೇ ಆಗಿದೆ. 'ಚರಲಿಂಗ' ಎಂಬುದು 'ಜಂಗಮ' ಎಂಬರ್ಥ ಹೊಂದಿದ್ದು ಅದು ಜಂಗಮಮೂರ್ತಿಗಳು ಎಂಬ ಅರ್ಥದಲ್ಲೇ ಕವಿ ಬಳಸಿದ್ದಾನೆನಿಸುತ್ತದೆ. ಕವಿ ಚರಲಿಂಗಮೂರ್ತಿಗಳ ಕುರಿತು ಹೇಳುವ ಪದ್ಯ ಹೀಗಿದೆ–

"ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೊಳು
ನಟ್ಟದೃಷ್ಟಿಯ ಕರಣತತಿಯ ನಿಶ್ಚಲತೆಗಳ
ಘಟ್ಟಿಗೊಂಡ ವಿರಳ ಸಮಾಧಿಯ ಪರಾನಂದರಸವೊಸರುವಶ್ರುಜಲದ
ದಟ್ಟಯಿಸಿ ನೆಗೆವ ಪುಳಕದ ಭಸಿತ ಲೇಪನದ
ಪುಟ್ಟುವ ಸ್ವೇದದೊಜಿತೆಯ ವಿಜಯಕಲ್ಯಾಣ
ಪಟ್ಟಣದೊಳೊಲಿದಿರ್ಪ ಚರಲಿಂಗಮೂರ್ತಿಗಳ ಚರಣಾಂಬುಜಕ್ಕೆ ಶರಣು"

ಎಂಬಲ್ಲಿ ಮೋದಿರುದ್ರರಾದಿಯಾಗಿ ವಿರಕ್ತರ ಲಕ್ಷಣ ಕುರಿತು ಹೇಳಿದ ಕವಿಗಳು ಸಹ ಇದೇ ರೀತಿಯಲ್ಲಿ ವರ್ಣಿಸಿರುವರು.

'ಪರಬೊಮ್ಮವೊಲಿದು ಸಾಕಾರಮಂ ತಳೆದು ನಿಜ
ಶರಣರ ಮನೋರಥವನೀವ ಕಾರುಣ್ಯದಿಂ'

ಎಂಬ ಪದ್ಯವನ್ನು ಉಲ್ಲೇಖಿಸಿ ಡಾ. ಶಿವಾನಂದ ವಿರಕ್ತಮಠರು "ಇದೇ ವಿಷಯವನ್ನು ತರುವಾಯದ ವಿರೂಪಾಕ್ಷಪಂಡಿತ ಹೇಳಿದ್ದಾನೆ. ಮೋದಿಯ ರುದ್ರನ ನೂರೊಂದು ವಿರಕ್ತರ ಕಾವ್ಯದಲ್ಲಿ ಇವರೆಲ್ಲರನ್ನು 'ಶಾಂತ', 'ಶಾಂತೇಶ', 'ಶಾಂತಮೂರ್ತಿ'ಗಳೆಂದು ಕರೆದುದು ಉತ್ಪ್ರೇಕ್ಷೆಯಾಗಲಾರದು. ಏಕೆಂದರೆ ಲಕ್ಕಣ್ಣದಂಡೇಶ ಇವರ ಗುಣ ಸ್ವಭಾವಗಳನ್ನು ವರ್ಣಿಸುತ್ತ–'ಶಿವನ ಶಾಂತರಸದ ಹರವರಿಯೋ ಶಿವಕಳೆಯ ಬಳಗವೊ' ಎಂಬಲ್ಲಿ ಇದು ಉಚಿತವಾಗಿ ಪರಿಣಮಿಸಿದೆ. ಇವರನ್ನೇ ತರುವಾಯದ ವೀರಶೈವ ಕವಿಗಳು ನೂರೊಂದು ವಿರಕ್ತರೆಂದು ನಿರ್ಣಯಿಸಿರುವುದಿಲ್ಲ. ಔಚಿತ್ಯವೂ ವಾಸ್ತವಿಕ ಸತ್ಯವೂ ಆಗಿದೆ" ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಅನೇಕ ಸೂಕ್ಷ್ಮ ಚಿತ್ರಣಗಳು ನೂರೊಂದು ವಿರಕ್ತರ ಕುರಿತು ಈ ಕಾವ್ಯದಲ್ಲಿ ಸಿಗುತ್ತವೆ.

"ಏಕನೆಂದೆನಿಪ ಪರಶಿವನನೇಕತ್ವಮಂ
ಸ್ವೀಕರಿಸಿ ನಿಜಮಹಿಮೆಗಳ ಮೂರ್ತಿವೆತ್ತಂತೆ
ಸಾಕಾರವಾಗಿ ಪಲವವತಾರ ಭೇದದೊಳು ಸುಳಿದು ವೇಷವನು ಧರಿಸಿ
ಲೋಕನುತ ವಿಜಯ ಕಲ್ಯಾಣದೊಳು ಮಣಿಮಯ
ಪ್ರಾಕಾರವೆಸೆವ ಶಿವಸಿಂಹಾಸನದೊಳತಿ ಕೃ
ಪಾಕಟಾಕ್ಷದಿ ಹೊಳೆವ ಚರಲಿಂಗಮೂರ್ತಿಗಳ ಚರಣಾಂಬುಜಕ್ಕೆ ಶರಣು"

"ಮೃತ್ಯುವಂ ತೊತ್ತು ಮಾಡುವ ಜವನ ದಾಡೆಯಂ
ಕಿತ್ತು ಬಿಸುಡುವ ಮಾಯೆಯಂ ದಾಯವಂ ಮಾಳ್ಪ
ಸುತ್ತಿದರಿಷಡ್ವರ್ಗದುರ್ಗಕ್ಕೆ ಲಗ್ಗೆ ಮಾಡುವ ಮದಗಜವ್ರಜವನು
ಒತ್ತಿ ಮೆಟ್ಟುತ ಸೀಳ್ವ ಸಪ್ತ ದುರ್ವ್ಯಸನಮಂ
ಕತ್ತರಿಪ ವಿಜಯಕಲ್ಯಾಣದಲಿ ವಿಕ್ರಮೋ
ದಾತ್ತ ಸಿಂಹಾಸನದ ಚರಲಿಂಗಮೂರ್ತಿಗಳ ಚರಣಾಂಬುಜಕ್ಕೆ ಶರಣು"

"ಅಂಗದ ವಿಮೋಹಮಂ ಮಱೆದು ಪಂಚೇಂದ್ರಿಯ ಸು
ಖಂಗಳಂ ಜಱೆದು ಲಿಂಗದ ನಿರೂಪದಿ ಬಂದ
ಮಂಗಳ ಪದಾರ್ಥಮಂ ಶಿವಭಾವದಿಂ ಸವಿದು ಲೌಕಿಕದ ಹಂಗನುಳಿದು

ತುಂಗ ವಿಕ್ರಮ ವೀರಭದ್ರೇಶನೊಲಿದಿಹ ಮ
ತಂಗಾಚಲದ ಗುಹಾಂತರದೊಳವಿರಳರಾಗಿ
ಹಿಂಗದ ನಿರಾಕುಳದ ಚರಲಿಂಗಮೂರ್ತಿಗಳ ಚರಣಾಂಬುಜಕ್ಕೆ ಶರಣು"

ಈ ಮೇಲಿನ ಮೊದಲ ಪದ್ಯದಲ್ಲಿ ಕವಿ ಬಳಸಿದ 'ಅವತಾರ ಭೇದದೊಳು ಸುಳಿದು ವೇಷವನು ಧರಿಸಿ' ಎಂಬುದು ನೂರೊಂದು ವಿರಕ್ತರು ಬೇರೆ-ಬೇರೆ ಕುಲಕಸುಬುಗಳಿಂದ ಬಂದು ವಿರಕ್ತ ಪಡೆಗೆ ಸೇರಿದ ಸುಳುಹು ನೀಡುತ್ತದೆ. ಎರಡನೆಯ ಪದ್ಯವು ಮೃತ್ಯುವನ್ನು ಗೆಲ್ಲುವ ಅಂದರೆ ಸಾವಿಗೆ ಹೆದರದ, ಮಾಯೆಯನ್ನು ನಾಶ ಮಾಡುವ, ಅರಿಷಡ್ವರ್ಗದ ದುರ್ಗಕ್ಕೆ ಲಗ್ಗೆ ಹಾಕುವ ಮದಗಜವನ್ನು (ಮನಸ್ಸು) ಒತ್ತಿ ಮೆಟ್ಟುವ, ಸಪ್ತದುರ್ವ್ಯಸನವನ್ನು ಕತ್ತರಿಸಿಹಾಕಿದವರು ನೂರೊಂದು ವಿರಕ್ತರು ಎಂಬುದನ್ನು ದಾಖಲಿಸುತ್ತದೆ. ಮೂರನೆಯ ಪದ್ಯವಂತೂ ಮೋದಿರುದ್ರ ಹೇಳಿರುವ ಹಾಗೆ ಅಂಗದ ಭ್ರಾಂತಿಯನ್ನು ಮರೆತು, ಪಂಚೇಂದ್ರಿಯ ಸುಖಗಳನ್ನು ಜರಿದು, ಲಿಂಗದ ಸಂಗದಿಂದ ಬಂದ ಮಂಗಳವಾದ ಅರಿವಿನ ಪದಾರ್ಥವನ್ನು ಶಿವಭಾವದಿಂದಲೇ ಸವಿದು ಲೌಕಿಕ-ಪ್ರಾಪಂಚಿಕ ಲೋಕದ ಹಂಗನಳಿದು ಬದುಕಿದ ಮಹಾಮಹಾವಿರಕ್ತರು ಇವರಾಗಿದ್ದರು ಎಂಬುದನ್ನು ತಿಳಿಸುತ್ತದೆ. ಈ ಎಲ್ಲಾ ದಾಖಲೆಗಳು ಇರುವಾಗ ಲಕ್ಕಣ್ಣದಂಡೇಶನು ನೂರೊಂದು ವಿರಕ್ತರ ಕುರಿತು ಚಕಾರವೆತ್ತಿಲ್ಲವೆಂದು ಹೇಳಲು ಹೇಗೆ ಸಾಧ್ಯ? ಕವಿ ನೂರೊಂದು ವಿರಕ್ತರು ಎಂದು ಸಂಖ್ಯೆಯನ್ನು ಹೇಳದೆ ಚರಲಿಂಗಮೂರ್ತಿಗಳೆಂದು ಹೇಳಿ ಅವರ ಸಿಂಹಾಸನ (ಶೂನ್ಯಸಿಂಹಾಸನದ ಪರಿಕಲ್ಪನೆಯಲ್ಲಿ)ವನ್ನು ಹೇಳಿ ಕೈಬಿಟ್ಟಿದ್ದಾನೆ. ಲಕ್ಕಣ್ಣದಂಡೇಶನ ಕಾಲದಲ್ಲಿ ಇವರ ಸಂಖ್ಯಾನಿರ್ಣಯವಾಗಿರಲಿಲ್ಲ ಎಂಬ ಮಾತ್ರಕ್ಕೆ 'ನೂರೊಂದು' ಪದಪ್ರಯೋಗ ಮಾಡಲಾರದ ಮಾತ್ರಕ್ಕೆ ನೂರೊಂದು ವಿರಕ್ತರ ಚರಿತ್ರೆ ಸುಳ್ಳಾಗದು. ಈ ಕವಿಯ ನಂತರದ ಕವಿಗಳು ಪ್ರೌಢರಾಯನ ಕಾಲದಲ್ಲಿ ಅವನ ಸಮಕಾಲೀನರಾಗಿ ನೂರೊಂದು ಜನ ವಿರಕ್ತರು ಇದ್ದರೆಂದು ಹೇಳಿವೆ. ಹಾಗಾಗಿ ಲಕ್ಕಣ್ಣದಂಡೇಶ ಅವರ ಕುರಿತು ನಿಖರವಾಗಿ ಏನು ಹೇಳಿಲ್ಲವೆಂದು ಹೇಳಲಾಗದು. ಈ ವಿಚಾರ ಕುರಿತು "ನೂರೊಂದು ವಿರಕ್ತರಿದ್ದರೆಂದು ಲಕ್ಕಣ್ಣದಂಡೇಶನಿಗಿಂತ ಈಚೆಗಿನ ಗ್ರಂಥಗಳು ಹೇಳುತ್ತಿವೆ. ನೂರೊಂದು ಸಾಂಕೇತಿಕ ಸಂಖ್ಯೆಯೇ ಇರಬೇಕು. ಅಂತೂ ವಿಜಯನಗರಿ, ವಿಜಯಕಲ್ಯಾಣ ರಥಬೀದಿಗಳಲ್ಲಿ, ಪಂಪಾಕ್ಷೇತ್ರದಲ್ಲಿ, ಆ ಕ್ಷೇತ್ರದ ಬೆಟ್ಟ-ಗುಹೆಗಳಲ್ಲಿ ಅನೇಕ ಕಡೆ ಚರಲಿಂಗಮೂರ್ತಿಗಳಿದ್ದರೆಂಬುದು ಈ ವರ್ಣನಾ ಪದ್ಯಗಳಿಂದ ಹೊರಪಡುತ್ತದೆ." ಎಂಬುದಾಗಿ ಎಚ್. ದೇವೀರಪ್ಪನವರು ನಿಜಾಂಶಕ್ಕೆ ಹತ್ತಿರವಾಗಿ ನುಡಿದಿದ್ದಾರೆ. ಈ ಸುಳುಹುಗಳು, ದಾಖಲೆಗಳು, ಉಲ್ಲೇಖಗಳು ನೂರೊಂದು ವಿರಕ್ತರ ಕುರಿತು ನಮಗೆ ಇಲ್ಲಿ ತಿಳಿಸುತ್ತವೆ. ಮಲ್ಯವಂತಪರ್ವತ, ಅಂಜನಾದ್ರಿಬೆಟ್ಟ, ಮತಂಗಪರ್ವತ ಇತ್ಯಾದಿ ನೆಲೆಗಳಲ್ಲಿ ವಾಸವಾಗಿದ್ದ

ಚರಲಿಂಗಮೂರ್ತಿಗಳು 'ಭಾರಿ ಜಡೆಯ ಕಾಷಾಂಬರದ' 'ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೊಳು ನೆಟ್ಟ ದೃಷ್ಟಿಯ' 'ಸಾದು ನಿಕರಕ್ಕೆ ಶಾಂತಿಯಿವುತ' 'ಸರ್ವೇಂದ್ರಿಯದ ಭೋಗದೊಳ್ ವಿರಾಗಿಗಳಾಗುತ' ಬಾಳಿದವರು ಎಂದೇ ಹೇಳಬೇಕು.

**2. ಗುಬ್ಬಿಯ ಮಲ್ಲಣಾರ್ಯ ವಿರಚಿತ–ವೀರಶೈವಾಮೃತ ಪುರಾಣ (1513–61)**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುಬ್ಬಿಯ ಮಲ್ಲಣಾರ್ಯನ ಹೆಸರು ಚಿರಸ್ಥಾಯಿಯಾಗಲು ಆತ ಬರೆದ ಕನ್ನಡದ ಬೃಹತ್ ಕಾವ್ಯಗಳ ಸಾಲಿನಲ್ಲಿ ನಿಲ್ಲುವ 'ವೀರಶೈವಾಮೃತ ಮಹಾಪುರಾಣ' ಕೃತಿಯೇ ಮೂಲ ಕಾರಣ. ಇದು ರಚನೆಗೊಂಡ ಕಾಲ ಕ್ರಿ.ಶ. ಸುಮಾರು 1530 ಎಂದು ಕವಿಚರಿತ್ರೆಕಾರರು ತಿಳಿಸಿದ್ದಾರೆ. ಕವಿ ವರ್ತಮಾನಕಾಲದ ಶರಣರನ್ನು ಕುರಿತು ಹೇಳುವ ಸಂದರ್ಭದಲ್ಲಿ–

> "ಆ ತುರಕ ಹುಚ್ಚದೇವರು ಬಿಲ್ಲ ಮರುಳ ಸು
> ಪ್ರೀತಿಯ ಕರಸ್ಥಲದ ವಿರೇಶ್ವರಂ ಸುವಿ
> ಖ್ಯಾತರಾಗಲ್ಲಗೂಳಿಗಳು ಗುರುಬಸವೇಶ ಪಟ್ಟಪರಿ ನಾಗಿದೇವಂ
> ನೂತನ ಕರಸ್ಥಲದ ನಾಗಿದೇವರು ಬತ್ತ
> ಲಾತಿಶಯನೊಡೆಯರವ್ರತ ಪುಟ್ಟಶಾಂತೇಶ
> ಸಾತಿಶಯವೆನಿಸುವೊಡೆಯರ ಕಟ್ಟಳೆಯ ಮಲ್ಲಿಕಾರ್ಜುನಸ್ವಾಮಿ ಬಳಿಕ"

ಎಂದು, ಇನ್ನೊಂದೆಡೆ "ಆ ಕರಸ್ಥಲದ ವೀರಂಣೊಡೆಯರರೆಯೂರೊ ಳೌಕಸಂ........" ಎಂದಿರುವಲ್ಲಿ; ತುರಕ ಹುಚ್ಚದೇವರು, ಬಿಲ್ಲ ಮರುಳ, ಕರಸ್ಥಲದ ವೀರೇಶ್ವರ/ ಕರಸ್ಥಲದ ವೀರಂಣೊಡೆಯ, ಗುರುಬಸವೇಶ, ಪಟ್ಟಪರಿ ನಾಗಿದೇವ, ಕರಸ್ಥಲ ನಾಗಿದೇವ, ಬತ್ತಲೇಶ, ಪುಟ್ಟಶಾಂತೇಶ ಎಂದು ನೂರೊಂದು ವಿರಕ್ತರಲ್ಲಿ ಕೆಲವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾನೆ. ಮುಖ್ಯವಾಗಿ ಇವರನ್ನು ವರ್ತಮಾನ ಕಾಲದ ಶರಣರಲ್ಲಿ ಪರಿಗಣಿಸಿ ಹೇಳಿದ್ದಾನೆ. ಆದರೆ ಇವರೇ ನೂರೊಂದು ವಿರಕ್ತರು ಎಂದು ಸಂಖ್ಯಾಖಚಿತವಾಗಿ ಹೇಳಿಲ್ಲ. ಅಂದರೆ ಲಕ್ಕಣ್ಣದಂಡೇಶ ಮತ್ತು ಗುಬ್ಬಿಯ ಮಲ್ಲಣಾರ್ಯನ ಕಾಲಕ್ಕೆ ನೂರೊಂದು ನೂತನ ಶರಣರ ಗಣದಲ್ಲಿ ಸೇರಿದ್ದರು ಎಂದರ್ಥವಾಗುತ್ತದೆ. ಹಾಗಾಗಿಯೇ ಇವರಿಬ್ಬರು ಕವಿಗಳು ನೂತನ ಗಣಂಗಳ ಕಥೆ (ಲಕ್ಕಣ್ಣದಂಡೇಶ), ವರ್ತಮಾನಕಾಲದ ಶರಣರ ಕಥೆ (ಗುಬ್ಬಿಮಲ್ಲಣಾರ್ಯ) ಪ್ರತ್ಯೇಕ ಸಂಧಿಗಳಲ್ಲಿ ಇವರನ್ನು ಸ್ಮರಿಸುವ ಕೆಲಸ ಮಾಡಿದ್ದಾರೆ. ಈ ಕವಿಗೆ ನೂರೊಂದು ವಿರಕ್ತರು ಕಾಲದ ದೃಷ್ಟಿಯಿಂದ ಹತ್ತಿರದವರಾಗಿದ್ದಾರೆ. ಅವರ ಕಾರ್ಯವೈಖರಿಯನ್ನು ಇವನು ಹಚ್ಚಹಸಿರಾಗಿರುವ ಬೆನ್ನಲ್ಲೇ ನೋಡಿ ಇಲ್ಲವೇ ಕೇಳಿ ತಿಳಿದಿರಬೇಕು. ಕವಿ ಕಾಲಕ್ಕೂ ನೂರೊಂದು ವಿರಕ್ತರ ಕಾಲಕ್ಕೂ ಹೆಚ್ಚು ಕಡಿಮೆ 50–60 ವರ್ಷಗಳ ಅಂತರವಿದೆ. ಹಾಗಾಗಿ ಘಂಟಾಘೋಷವಾಗಿ ಕವಿ ನೂರೊಂದು ವಿರಕ್ತರು ಎಂದು ಹೆಸರಿಸದಿದ್ದರೂ ಸಹ ನಂತರದ ಕವಿಗಳು

ಹುಚ್ಚ ದೇವರು ಮತ್ತು ಪಟ್ಟಪರಿನಾಗಿದೇವರನ್ನು ಬಿಟ್ಟು ಉಳಿದವರನ್ನು ನೂರೊಂದು ವಿರಕ್ತರೆಂದು ಹೆಸರಿಸಿರುವುದರಿಂದ ಈ ನೂರೊಂದು ವಿರಕ್ತರ ಚರಿತ್ರೆಯ ಮೊದ ಮೊದಲಿನ ಆಕರ ಗ್ರಂಥಗಳಲ್ಲಿ ಈ ವೀರಶೈವಾಮೃತ ಪುರಾಣ ಕೃತಿಯು ಒಂದು ಮಹತ್ವ ಪಡೆದ ಗ್ರಂಥವಾಗಿದೆ.

### 3. ಅದೃಶ ಕವಿಯ–ಪ್ರೌಢರಾಯನ ಕಾವ್ಯ (ಕ್ರಿ.ಶ. 1525)

'ಪ್ರೌಢರಾಯನ ಕಾವ್ಯ' ಬರೆದ ಕವಿ ಅದೃಶ್ಯ. ಕವಿಚರಿತ್ರಕಾರರು ಇವನ ಕಾಲವನ್ನು ಸುಮಾರು 1580 ಎಂದು ಉಲ್ಲೇಖಿಸಿದ್ದಾರೆ. ಡಾ. ಜಿ.ಆರ್. ನಂದಿಕೋಲಮಠರವರು "ಈ ಕವಿಯ ಕಾಲವನ್ನು 1525 ಎಂದು ಉಲ್ಲೇಖಿಸಿದ್ದಾರೆ." "ಅದ್ರೀಶ, ಅದ್ರೀಶಪ್ಪ ಎಂಬ ಹೆಸರು ಕವಿಗೆ ಇದ್ದಂತೆ ತೋರುತ್ತದೆ." ಈತನು ವಿಜಯಪುರ ಪ್ರಾಂತ್ಯದ ತೊರೆಸಾಲು (=ಹೊಳೆಸಾಲು) ಭಾಗದ ಪಗರಣೆಯ ಕೋಲಾರಪುರ(ಕೊಲ್ಹಾರ)ದವನು. ಕಾವ್ಯದಲ್ಲಿ ವಿದ್ಯಾನಗರವನ್ನು ಆಳುವ ಪ್ರೌಢರಾಯನ ಮಂತ್ರಿ ಜಕ್ಕಣಾಚಾರ್ಯ ರಚಿಸಿದ 'ಏಕೋತ್ತರ ಶತಸ್ಥಲ' ಎಂಬ ಗ್ರಂಥವನ್ನು ಮೆರೆಯಿಸುವ ಸಂದರ್ಭದಲ್ಲಿ ಸ್ಪಷ್ಟವಾಗಿ ನೂರೊಂದು ವಿರಕ್ತರು ಎಂದು ಪದಪ್ರಯೋಗ ಮಾಡಿದ್ದಾನೆ. ಕವಿ ಉಲ್ಲೇಖಿಸುವ ಪದ್ಯ ಹೀಗಿದೆ–

> "ಹರರೂಪವಾದ ನೂರೊಂದು ಸುವಿರಕ್ತರುರೆ
> ಕರಸ್ಥಲದ ನಾಗಿದೇವನು ಕಲ್ಲುಮಠದ ಪ್ರಭು
> ವರನು ವೀರಣ್ಣೊಡೆಯರುಂ ಚಾಮರಸರಾದಿ ಶಿವಭಕ್ತ ತತಿಯು ನೆರೆದು
> ಭರದಿಂದ ಭೋರ್ಗರೆವ ಭೇರಿ ನಿಸ್ಸಾಳ್ಗಳಿಂ
> ತರತರದೊಳೊದರುತಿಹ ಕಹಳೆ ಕೌಸಾಳ್ಗಳಿಂ
> ಧರೆಯೊಳಚ್ಚರಿಯೆನಿಸೆ ಮೆರೆಯಿಸಿದರಾಯಿರುಳು ಏಕೋತ್ರ ಶತಸ್ಥಲವನು"

ಎಂದಿರುವಲ್ಲಿ ನೂರೊಂದು ವಿರಕ್ತರಲ್ಲಿ ಮುಖ್ಯರಾದ ಕರಸ್ಥಲ ನಾಗಿದೇವ, ಕಲ್ಲುಮಠದ ಪ್ರಭುದೇವ, ಕರಸ್ಥಲ ವೀರಣ್ಣೊಡೆಯ, ಚಾಮರಸರ ಉಲ್ಲೇಖವಿದೆ. ವೀರಶೈವ ತಾಂತ್ರಿಕ ಗ್ರಂಥ ಏಕೋತ್ತರ ಶತಸ್ಥಲದ ಮೆರವಣಿಗೆಯಲ್ಲಿ ಈ ವಿರಕ್ತರು ಭಾಗಿಯಾಗಿರುವುದು ಚಾರಿತ್ರಿಕವಾಗಿ ಮಹತ್ವದ ಸಂಗತಿಯಾಗಿದೆ. ಒಟ್ಟಾರೆಯಾಗಿ ನೂರೊಂದು ಸುವಿರಕ್ತರು ಎಂಬ ನಿಚ್ಚಳವಾದ ಪದಪ್ರಯೋಗವಾದ ಕೃತಿಯಾಗಿರುವುದರಿಂದ ವಿರಕ್ತರ ಅಧ್ಯಯನದ ದೃಷ್ಟಿಯಿಂದ ಮಹತ್ವದ ಕೃತಿಯೆನಿಸಿದೆ.

### 4. ಚೆನ್ನಬಸವಾಂಕನ–ಮಹಾದೇವಿಯಕ್ಕನ ಪುರಾಣ (ಕ್ರಿ.ಶ. 1560)

ಈ ಕೃತಿ 33 ಸ್ಥಲ, 1604 ಪದ್ಯಗಳನ್ನು ಹೊಂದಿದ್ದು; ಅಕ್ಕಮಹಾದೇವಿಯ ಬದುಕನ್ನು ಮತ್ತು ವ್ಯಕ್ತಿತ್ವವನ್ನು ವೈಭವೀಕರಿಸಿದೆ. ಈ ಪುರಾಣಕೃತಿಯಲ್ಲಿ ಕರಸ್ಥಲ ನಾಗಿದೇವನ ಜೀವನಕ್ಕೆ ಸಂಬಂಧಿಸಿದ ಘಟನೆಯ ಚಿತ್ರಣವಿದೆ. ಇಲ್ಲಿ ಕವಿ 12ನೆಯ ಶತಮಾನದಲ್ಲಿ ಬಿಜ್ಜಳರಾಜನಿಗೆ ಬಸವೇಶನು ಪ್ರಮಥರ ಕುರಿತು ಹೇಳಿದಂತೆ,

ನಾಗಿದೇವನು ಪ್ರೌಢರಾಯನಿಗೆ ತಿಳಿಹೇಳಲು ತೊಡಗಿದಾಗ ರಾಯ ಮೆಚ್ಚಿ ದಾನವಾಗಿ ಕೊಟ್ಟಿದ್ದ ಕಂಕಣ (=ಕಡಗ)ವನ್ನು ಅರಸನಿಗೆ ಮರಳಿಕೊಟ್ಟು ಹೇಮದಾಸೆಯನ್ನು ತಿರಸ್ಕರಿಸಿ ವಿರಕ್ತರ ಗುಣವನ್ನು ಅರುಹಿದನೆಂದು ಹೇಳಿದ್ದಾನೆ.

**5. ವಿರೂಪಾಕ್ಷಪಂಡಿತನ–ಚೆನ್ನಬಸವಪುರಾಣ (1584)**

ವಿದ್ಯಾನಗರಿ ಹಿರಿಯಮಠದ ಸಿದ್ಧವೀರೇಶನ ಶಿಷ್ಯನಾದ ವಿರೂಪಾಕ್ಷಪಂಡಿತನು ಸರಸ ಕರ್ಣಾಟಾದಿ ಭಾಷಾವಿಶಾರದ, ಸಕಲಾಗಮ ಪುರಾಣಕೋವಿದ ಎಂಬ ಬಿರುದುಗಳನ್ನು ಹೊಂದಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಗ್ರಮಾನ್ಯನಾಗಿದ್ದಾನೆ. 63ನೆಯ ಸಂಧಿಯಲ್ಲಿ ನೂರೊಂದು ವಿರಕ್ತರಲ್ಲಿ ಕೆಲವರ ಹೆಸರುಗಳನ್ನು ಹೇಳಿರುವುದಲ್ಲದೆ ಅವರ ಜೀವನದಲ್ಲಿ ನಡೆದ ಕೆಲವು ಘಟನೆಗಳನ್ನು ಸಹ ಕವಿ ಇಲ್ಲಿ ಹೇಳಿರುವುದು ವಿಶೇಷವೆನಿಸಿದೆ. ಈತ ಹೇಳುವ ಪ್ರಕಾರ–

> "ಹರನಾಜ್ಞೆಯಿಂದಿಂದ್ರ ಸಹವಾಗಿ ನೂರೊಂದು
> ವಿರತರಿಳೆಯೊಳ್ ಜನಿಸಿ ಬಯಲಾಗಲೇಳ್ನೂರು
> ವಿರತರುಂ ಸಂಜನಿಸಿ ಪೋಗಲೀ ಬಸವಾದಿ ಶರಣರುಂ ಜನಿಯಿಸುವರು"

ಅಂದರೆ ಹರನ ಆಜ್ಞೆಯಿಂದ ಇಂದ್ರನ ಸಮೇತ ನೂರೊಂದು ವಿರಕ್ತರು ಇಳೆಯಲ್ಲಿ ಹುಟ್ಟಿ ಬಯಲಾದವರು. ಇದೇ ಸಂಧಿಯ ಪದ್ಯ 1 ರಿಂದ 5ರ ವರೆಗೆ ವಿಜಯನಗರ ಸಾಮ್ರಾಜ್ಯ ಸಂಗಮ ವಂಶದವರಿಂದ ಹೇಗೆ ಸ್ಥಾಪನೆಯಾಯಿತು ಎಂದು ಹೇಳಿ, ಹರಿಹರ ಮತ್ತು ಅವನ ಹದಿಮೂರು ತಲೆಮಾರಿನವರು 150 (1336ರಲ್ಲಿ ಹರಿಹರನಿಂದ ಸ್ಥಾಪನೆಯಾದ ಸಾಮ್ರಾಜ್ಯ ಇಮ್ಮಡಿ ಪ್ರೌಢದೇವರಾಯನ ಚಿಕ್ಕಪ್ಪನ ಮಗನಾದ ಮುಮ್ಮಡಿ ವಿರೂಪಾಕ್ಷರಾಯನವರೆಗೆ ಅರ್ಥಾತ್ 1485ರವರೆಗೆ ಸಂಗಮವಂಶ 150 ವರ್ಷಗಳ ಕಾಲ ಆಳ್ವಿಕೆ ಮಾಡಿರುವುದು ಇತಿಹಾಸದಿಂದ ತಿಳಿಯುತ್ತದೆ. ಇಲ್ಲಿ ಕವಿಯು ನಿಖರವಾದ ಮಾಹಿತಿ ನೀಡಿದ್ದಾನೆ.) ವರ್ಷ ಆಳ್ವಿಕೆ ಮಾಡಿರುವ ವಿಚಾರ ಹೇಳಿದ್ದಾನೆ.

ನಂತರ ಕೈಲಾಸಕ್ಕೆ ಶಿವನ ಸಭೆಗೆ ಹೋಗುವಾಗ ಕೈಲಾಸಪರ್ವತದ ಮೇಲೆ ವಿಕೃತರೂಪದ ಗಣೇಶ್ವರರನ್ನು ನೋಡಿ ಇವರು ಭವಿಗಳೋ ಏನೋ? ಎಂದು ಹೀಗಳೆಯುತ್ತಾನೆ. ಕೋಪಿತರಾದ ಗಣೇಶ್ವರರು ನೀನು ಭೂಲೋಕದಲ್ಲಿ 'ಭವಿ'ಯಾಗಿ ಹುಟ್ಟು ಎಂದು ಶಾಪ ಹಾಕುತ್ತಾರೆ. ಅದನ್ನು ತಿಳಿದ ಶಿವನು ಇಂದ್ರನಿಗೆ ಶಾಪವಿಮೋಚನೆಗಾಗಿ ಪ್ರೌಢದೇವೇಂದ್ರನಾಗಿ ಜನಿಸುವಂತೆ ಮಾಡಿ ಗಣೇಶ್ವರರನ್ನು ಕರೆದು ನೂರೊಂದು ವಿರಕ್ತರಾಗಿ ಭೂಮಿಯಲ್ಲಿ ಹುಟ್ಟಿ ಅಲ್ಲಿ ಮಹಿಮೆಗಳನ್ನು ತೋರಿಸಿ ಬಯಲಾಗಿ ಬನ್ನಿ ಎಂದು ಅವರನ್ನು ಬೀಳ್ಕೊಡುವನು. ಜಂಗಮಸ್ಥಲವನ್ನು ಸ್ವೀಕರಿಸಿ ವಿರಕ್ತರಾದವರಲ್ಲಿ ಮೊದಲಿಗೆ ಬರುವವರು ಕರಸ್ಥಲ ವೀರಣ್ಣೊಡೆಯ ಮತ್ತು ಆತನ ಕರಸಂಜಾತ ಶಿಷ್ಯ ಅಕ್ಕಸಾಲೆಯ ನಾಗ. ಅಕ್ಕಸಾಲೆಯ ನಾಗಿದೇವನ

ಕುರಿತು ಕವಿ; ನಾಗಿದೇವ ಒಂದು ದಿನ ಹಾದರಕ್ಕೆ ಹೋಗಲು ಆ ಮನೆಯವರು ಮುತ್ತಿಕೊಳ್ಳುವರು. ಆಗ ಮನಸ್ಸಿನಲ್ಲಿ ಸಮ್ಯಗ್‌ಜ್ಞಾನ ಬಂದು ಮನಸ್ಸಿನಲ್ಲಿಯೇ ವಿರಕ್ತನಾಗುವೆನೆಂದು ಸಂಸಾರವನ್ನು ತೊರೆದು ಕೈಯಲ್ಲಿ ಲಿಂಗ ತೆಗೆದುಕೊಂಡು ಪೀಠವನ್ನು ಪಕ್ಕಕ್ಕೆ ಇಟ್ಟು ಹುಚ್ಚನಂತೆ ದಿಗಂಬರನಾಗಿ, ತಲೆಗೆ ಬೂದಿ ಬಳಿದುಕೊಂಡು ಹೊರಗೆ ಬರಲು ಅವನ ಆ ಸ್ಥಿತಿಯನ್ನು ಎಲ್ಲರೂ ನೋಡುತ್ತಿರುವಂತೆ ತನ್ನ ಗುರುವಿದ್ದ ಪಟ್ಟಣಕ್ಕೆ ಬರಲು ಜನರು ಅಪಹಾಸ್ಯ ಮಾಡುತ್ತ 'ಅಕ್ಕಸಾಲೆಯನಾಗನಿರದೆ ಭಿಕ್ಷಕ್ಕೆ ಬಂದನಿದೆಕೊ ನೋಡೆಲ್' ಎನ್ನುವರು. ಗುರು ವೀರಣ್ಣೊಡೆಯರು ಇದೇನೆಂದು ಕೇಳಲು, ನಾಗಿದೇವ ನಡೆದ ವೃತ್ತಾಂತವನ್ನೆಲ್ಲಾ ಹೇಳುವನು. ಕೈಯಲ್ಲಿದ್ದ ಪೀಠರಹಿತವಾದ ಲಿಂಗವನ್ನು ತೋರಿಸುವನು. ಆಗ ವೀರಣ್ಣೊಡೆಯರು ಮತ್ತೊಂದು ಪೀಠಲಿಂಗವನಿತ್ತು ಬಾಹ್ಯಕ್ರಿಯೆಯು ನಾಶವಾಗುವ ತನಕ ಲಿಂಗವನ್ನು ಪೀಠದಿಂದ ತೆಗೆಯಬೇಡ ಎಂದು ಮತ್ತೆ ಉಪದೇಶ ನೀಡಿ ಪ್ರಸಾದವನ್ನು ಕೊಟ್ಟು ಕಳಿಸಲು ಅಲ್ಲಿಂದ ಹೊರಟು ಎಲ್ಲಾ ದೇಶಗಳನ್ನು ಸುತ್ತಿ ಮರಳಿ ಅಲ್ಲಿಗೆ ಬರುವನು.

ಮರಳಿ ಬಂದ ನಾಗಯ್ಯನ ಸ್ಥಿತಿಯನ್ನು ತಿಳಿದು ವೀರಣ್ಣೊಡೆಯ ಗುರುವೆಂಬ ಭಾವವಳಿದು ಶಿಷ್ಯನನ್ನು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ, ಮಂಚದಲ್ಲಿ ಕುಳ್ಳಿರಿಸಿ ಹೂ ತರುವುದಕ್ಕೆ ಹೋಗಲು ನಾಗಯ್ಯನು ಮೂರೆಡೆಯಲ್ಲಿ ಮಲವ ಬಿಟ್ಟು ಗುರುವಿನ ಮಡದಿಗೆ "ತರುಣಿ ಕೇಳೀ ಮಲಕ್ಕೊಳಗಾದೊಡಿಲ್ಲಿ ಸುಖಮಿರಲಿ ನಿಮ್ಮೊಡೆಯರಲ್ಲದೊಡೆಮ್ಮ ಕೂಡೀಗ ಬರಲಿ" ಎಂದು ಹೇಳಿ ಹೋಗಲು ವೀರಣ್ಣೊಡೆಯರು ಬಂದು ಮಡದಿಯಿಂದ ವಿಷಯ ತಿಳಿದು, ಶಿಷ್ಯನನ್ನು ಹುಡುಕುತ್ತಿರುವಾಗ ಬಿದಿರುಮೆಳೆಗೆ ತಲೆ ಸಿಕ್ಕಿಸಿ ಪರಶಿವನ ಯೋಗದಲ್ಲಿದ್ದ ನಾಗಿದೇವರನ್ನು ಕಂಡು ಕೂದಲು ಬಿಡಿಸಿದಾಗ ಕಣ್ಣು ತೆರೆದು ನೋಡಿದ ನಾಗಿದೇವರು "ಹಾ ವೀರ ನೀನು ಪರಿಹರಿಸಿ ಬಂದೆಯಾ ಸಂಸಾರಬಂಧಮಂ ನಿರುತವೇ ನಡೆ" ಎಂದು ಇಬ್ಬರೂ ಸಂತೋಷದಿಂದ ವಿದ್ಯಾನಗರಿಗೆ ಬರುವರು.

ಹೀಗೆ ಹುಚ್ಚ ರಾವುತನ ಹೆಂಡತಿಯನ್ನು ಸಂಭೋಗಿಸಿದ ಪ್ರಸಂಗ, ಗುರುಬಸವನ ಲಿಂಗಧ್ಯಾನ ಪರೀಕ್ಷಿಸಿದ ಪ್ರಸಂಗ, ಸಿಂಗಾರತೋಟದಲ್ಲಿ ಕೆಂದೆಂಗಿನ ಮರದ ಎಳನೀರು ಭಾವಾರ್ಪಣ ಮಾಡಿದ ಪ್ರಸಂಗ, ಗುರು–ಶಿಷ್ಯರಿಬ್ಬರು ನಿರವಯಲಾಗಲು ಮೋಹಿನಿ ಗಜವ ಏರಲು ಹೋಗಿದ್ದಾಗ ವೀರಣ್ಣೊಡೆಯರು ಬಂಗಾರ ಸರಗಳನ್ನು ಕಂಡು ಮೋಹಿತರಾದ ಪ್ರಸಂಗ, ವೀರಣ್ಣೊಡೆಯರು ಕಡಗವನ್ನು ಹೊಳೆಗೆ ಹಾಕಿ ಅರಮನೆ ಬೊಕ್ಕಸದಿಂದ ಮರಳಿ ಪಡೆದ ಪ್ರಸಂಗಗಳನ್ನು ಕವಿ ತನ್ನ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ. ಅಲ್ಲದೆ ಹೊನ್ನಯ್ಯನೆಂಬ ವಿರಕ್ತನು ತನ್ನ ಗುರು ವೀರಣ್ಣೊಡೆಯರ ಮಡದಿಗೆ, ಅರಸನ ಅರಸಿಗೆ ಒಂದೇ ಬಗೆಯ ಚಂದ್ರಗಾವಿಯ ಸೀರೆಯನ್ನು ತಂದುಕೊಟ್ಟದ್ದು, ಗುರುವಿನ ಸತಿಯ ಸೀರೆ ನೋಡಿದ ಅರಸ ಸಂದೇಹಗೊಂಡು

ಹೊನ್ನಯ್ಯನನ್ನು ಕರೆದು ನಿನ್ನ ಬೊಕ್ಕಸದ ಲೆಕ್ಕ ಸರಿ ಇದೆಯೇ ಎಂದು ಕೇಳಿದಾಗ ಹೊನ್ನಯ್ಯ ಸರಿ ಲೆಕ್ಕ ತೋರಿಸಿ ಬಯಲಾದ ಪ್ರಸಂಗಗಳು ಅಧ್ಯಯನ ದೃಷ್ಟಿಯಿಂದ ಮಹತ್ವದಾಗಿವೆ.

ಮಿಡಬಿಲ್ಲಶಾಂತಿದೇವ, ಹೇಟೆಯ ಮರುಳ, ಟಗರಿನ ಕಾಳಗದ ಪ್ರಭು, ಬಾಲಲಿಂಗಣ್ಣ, ಬತ್ತಲೇಶ್ವರ ಶಿವಯೋಗಿಗಳು ಬಯಲಾದ ಸಂದರ್ಭಗಳನ್ನು ನೋಡಿ ಪ್ರೌಢದೇವರಾಯನಿಗೆ ಆಶ್ಚರ್ಯವೆನಿಸಿತು. ದಿವ್ಯಜ್ಞಾನಿಗಳೆನಿಸಿದ ಈ ವಿರಕ್ತರು ಲೋಕದ ಜನರ ಕಣ್ಣಿಗೆ ವಿಕೃತವಾಗಿ ಕಂಡರೂ ಸಹ ಒಂದೊಂದು ಕ್ಷಣಕ್ಕೂ ಅಪರೂಪದ ಲೀಲೆಯನ್ನು ಅರಸನಿಗೆ ತೋರಿಸಿ ಬಯಲಾಗಿದವರಾಗಿದ್ದಾರೆಂದು ಈ ಕಾವ್ಯ ನಮಗೆ ಮನದಟ್ಟು ಮಾಡುತ್ತದೆ.

ಈ ಕೃತಿಯಿಂದ ಕರಸ್ಥಲ ವೀರಣ್ಣೊಡೆಯನು, ನಾಗಿದೇವ ಹಾಗೂ ಹೊನ್ನಯ್ಯರ ಗುರುವಾಗಿರುವುದು ತಿಳಿಯುತ್ತದೆ. ಪ್ರೌಢರಾಯನ ಮಗಳಿಗೆ ಮದುವೆಯಾದ ಸಂಗತಿಯೂ ತಿಳಿಯುತ್ತದೆ. ಅಲ್ಲದೆ ವೀರಣ್ಣೊಡೆಯ ಪ್ರೌಢರಾಯನ ಆಪ್ತಮಂತ್ರಿಯಾಗಿರುವುದಕ್ಕೆ ಅವರಿಬ್ಬರು ಪಂಪಾನದಿ ತೀರಕ್ಕೆ ವಿಹಾರಕ್ಕೆಂದು ಹೋದ ಪ್ರಸಂಗ ಸಾಕ್ಷಿಯಾಗಿ ನಿಲ್ಲುತ್ತದೆ. ಮುಖ್ಯವಾಗಿ ನಾಗಿದೇವ ಸಾಂಸಾರಿಕ ಜೀವನ ತೊರೆದು ವೀರಣ್ಣೊಡೆಯರಿಂದ ಲಿಂಗದೀಕ್ಷೆ ಪಡೆದು ವಿರಕ್ತರಲ್ಲಿ ಅಗ್ರಗಣ್ಯನಾಗಿ ಕಾಣಿಸಿಕೊಂಡದ್ದು ಈ ಕಾವ್ಯದಿಂದ ಅರಿಯಬಹುದಾಗಿದೆ. ಕವಿ ದೃಷ್ಟಿಯಲ್ಲಿ ವಿರಕ್ತರೆಂದರೆ–"…..ಪರಿಪರಿಯಲತಿಮರುಳರಂದದೊಳಿರ್ಪ ನೂರೊಂದು ವಿರತರೆಲ್ಲರ್ ನಿರಾಕಾರಮಂ ತಳೆವರ್" ಎಂದಿರುವಲ್ಲಿ ಅತಿಮರುಳರ ರೀತಿಯಲ್ಲಿ ಪರಿಪರಿಯಾಗಿ ಬದುಕಿದವರಾಗಿದ್ದಾರೆ. ಕವಿ ತನ್ನ ಕಾವ್ಯದಲ್ಲಿ ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗಿದೇವ, ಗುರುಬಸವ, ಭಂಡಾರಿ ಹೊನ್ನಯ್ಯ/ ಅಗಸ ಹೊನ್ನಯ್ಯ, ಮಿಡಬಿಲ್ಲ ಶಾಂತದೇವ, ಹೇಟೆಯ ಮರುಳ, ಟಗರಿನ ಕಾಳಗದ ಪ್ರಬಖ್ಖು, ಬಾಲಲಿಂಗಣ್ಣ, ಕಾಲನ್ನು ಹಗ್ಗದಿಂದ ಸುತ್ತಿ ಅದಕ್ಕೆ ಲಿಂಗವನ್ನು ಕಟ್ಟಿಕೊಂಡು ಓಡಾಡುತ್ತಿದ್ದ ವಿರಕ್ತ, ಬತ್ತಲೇಶ್ವರ, ನಿರ್ವಾಣಿಬೋಳೇಶ, ಪರಪಟ್ಟಿ ಹೀಗೆ ಒಟ್ಟು 12 ಜನ ವಿರಕ್ತರನ್ನು ಹೆಸರಿಸಿದ್ದಾನೆ. ಆದರೆ ಡಾ. ಶಿವಾನಂದ ವಿರಕ್ತಮಠರು ಹಾಗೂ ಡಾ. ಜೆ. ಕುಮಾರ್‌ರವರು 11 ಜನರನ್ನು ಮಾತ್ರ ಉಲ್ಲೇಖಿಸಿ 'ಕಾಲಿಗೆ ಲಿಂಗ ಕಟ್ಟಿಕೊಂಡು ಓಡಾಡುತ್ತಿರುವ ಒಬ್ಬ ವಿರಕ್ತನನ್ನು ತಮ್ಮ ಪಟ್ಟಿಯಿಂದ ಬಿಟ್ಟಿದ್ದಾರೆ. ಬಹುಶಃ ಇವರ ಹೆಸರು ಉಲ್ಲೇಖವಾಗದೆ ಅವನ ಬಾಹ್ಯಚಹರೆ ಮಾತ್ರ ಉಲ್ಲೇಖವಾಗಿರುವುದರಿಂದ ಅಥವಾ ಕಾವ್ಯ ಓದಿನ ಗ್ರಹಿಕೆಯ ತಪ್ಪಿನಿಂದ ಬಿಟ್ಟಿರಬಹುದು. ಮುಂದೆ ಬರುವ 'ಮೋದಿರುದ್ರ' ಕವಿಯಾಗಲಿ ಅಥವಾ 'ನೂರೊಂದು ವಿರಕ್ತರ ಸ್ತೋತ್ರ'ವಾಗಲಿ ಈ ತರಹದ ವಿರಕ್ತರನ್ನು ಕೃತಿಯಲ್ಲಿ ಉಲ್ಲೇಖಿಸಿರುವುದರಿಂದ ಇಲ್ಲಿಯೂ ಸಹ ವಿರೂಪಾಕ್ಷಪಂಡಿತ ತಿಳಿಸಿದ ಈ ವಿರಕ್ತನೊಬ್ಬನನ್ನು ಸೇರಿಸಲು ಯಾವ ಅಡ್ಡಿಯಿಲ್ಲ.

**6. ಸಿಂಗಳದ ಸಿದ್ಧಬಸವ ಸಂಕಲಿಸಿದ–ಸಕಲ ಪುರಾತನರ ಬೆಡಗಿನ ವಚನ (1600)**

ಸಿಂಹಳದ ಸಿದ್ಧಬಸವರಾಜದೇವರ ಟೀಕಿನ ವಚನದ ತಾಳೆಗರಿ ಪ್ರತಿ (ನಂ 32. ಕರ್ನಾಟಕ ವಿ.ವಿ ವಚನ ಭಂಡಾರ)ಯ ಕೊನೆಯ ಒಂದು ಓಲೆಗರಿಯ ಮೇಲೆ ವಾರ್ಧಕಷಟ್ಪದಿಯ 9 ಪದ್ಯಗಳಲ್ಲಿ 'ಶತಯೇಕ ವಿರಕ್ತರ ಸ್ತೋತ್ರ' ಲಿಖಿತವಾಗಿದೆ. ಪ್ರಸ್ತುತ ಮಾರ್ಗ ಸಂಪುಟ 1ರಲ್ಲಿ ಎಂ.ಎಂ. ಕಲಬುರ್ಗಿ ಸಂಪಾದಿಸಿದ್ದಾರೆ. ಮೋದಿಯರುದ್ರನು ಹೇಳಿದ ಒಟ್ಟು ಹೆಸರುಗಳಲ್ಲಿ ಸುಮಾರು 70 ಹೆಸರುಗಳು ಒಂದೇ ಆಗಿದೆ. ಉಳಿದ 31 ಹೆಸರುಗಳು ಇಲ್ಲಿ ಹೊಸದಾಗಿ ಬಂದು ಸೇರಿದೆ. ಅದರ ಪಟ್ಟಿಯನ್ನಿಲ್ಲಿ ಕೊಟ್ಟಿದೆ.

ಉರುಗೆರೆಯ ಶಾಂತಯ್ಯ, ಒಲುಮೆಯ ಶಾಂತ, ಕಟಿಯರೋಮದ ಹೊದರಾಂತ ಶಾಂತ, ಕಟ್ಟಿಗೆಯ ಶಾಂತ, ಕಳೆಯಶಾಂತ, ಕುರುಬಶಾಂತದೇವ, ಕೈಲಾಸದ ಶಾಂತ, ಕೋಳಿಯ ಜೂಜಿನ ಗುರುಶಾಂತದೇವ, ಜಟೆಯ ಶಾಂತ, ದಿಂಡಿಯ ಶಾಂತ, ದೂಳಿತದ ಶಾಂತ, ನಿಡುಮಾಮಿಡಿ ಶಾಂತ, ನಿರ್ವಾಣಿ ಬೋಳೇಶ, ಪರಂದಾನಿ ಶಾಂತ, ಬಹುರೂಪ ಶಾಂತ, ಬೆಳದಡಿಯ ಶಾಂತ, ಬಿದ್ದತಾಳಿನ ಶಾಂತದೇವ, ಬೆಸಗೆಯ ಶಾಂತ, ಬೊಕ್ಕಸದ ಶಾಂತದೇವ, ಭಟರಶಾಂತ, ಮಿರಕೊರ ಶಾಂತೇಶ್ವರ, ಮುತ್ತಿನಮಣಿಯ ಶಾಂತೇಶ್ವರ, ರಗಡ ಶಾಂತ, ವೀರಣ್ಣೇಶ, ಹಾವಿನ ಶಾಂತ, ಹುಲ್ಲಿನ ಶಾಂತದೇವ, ಲಿಂಬೆಹಣ್ಣಿನ ಶಾಂತ, ಬಲಿಯ ಶಾಂತಯ್ಯ, ಬೆಣ್ಣೆಯ ಗದ್ದುಗೆಯ ಶಾಂತ, ಸಣ್ಣ ಕೆಲಸದವ ಶಾಂತ, ಆನೆಗಳ ಮೇಲಣ ಶಾಂತ.

ಒಂದೇ ಒಂದು ತಾಳೆಗರಿ ಪ್ರತಿಯು ದೊರೆತಿರುವುದರಿಂದ "9 ವಾರ್ಧಕ ಷಟ್ಪದಿಗಳನ್ನೊಳಗೊಂಡ ಈ ಸ್ತೋತ್ರಕೃತಿಯ ಕರ್ತೃವಾಗಲಿ ಕಾಲವಾಗಲಿ ತಿಳಿದು ಬರುವುದಿಲ್ಲ. ಪ್ರಾರಂಭದಲ್ಲಿ ತೋಂಟದ ಸಿದ್ಧಲಿಂಗನ ಸ್ಮರಣೆಯಿರುವುದರಿಂದ ಕರ್ತೃ ತೋಂಟದ ಸಿದ್ಧಲಿಂಗನ ಶಿಷ್ಯ ಸಂಪ್ರದಾಯದವನೆಂದು ಹೇಳಬಹುದಾಗಿದೆ" ಎಂದು ತಿಳಿಸಿದ್ದಾರೆ.

**7. ಕಂಬಳ ಶಾಂತಮಲ್ಲೇಶನ–ಗಣವಚನ ರತ್ನಾವಳಿ (ಕ್ರಿ.ಶ. 1600)**

"ಗಣವಚನ ರತ್ನಾವಳಿ ಎಂಬುದು ಪುರಾತನ ಹಾಗೂ ನೂತನ ಶಿವಶರಣರ ಸ್ವರವಚನಗಳನ್ನೊಳಗೊಂಡ ಒಂದು ಕೃತಿ. ಇದನ್ನು ಸಂಕಲಿಸಿದವನು ಕಂಬಳದ ಶಾಂತಮಲ್ಲೇಶ ಎಂದು ಕವಿಚರಿತ್ರೆಕಾರರು ತಿಳಿಸಿದ್ದಾರೆ. ಇವನ ಕಾಲವನ್ನು ಕ್ರಿ.ಶ. 1600 ಎಂದು ಗುರುತಿಸಿದ್ದಾರೆ." ಈ ಕೃತಿಯು ಬಸವೇಶ್ವರರ ಸ್ತುತಿಯಿಂದ ಕೂಡಿದ ಒಂದು ವೃತ್ತದಿಂದ ಪ್ರಾರಂಭವಾಗಿದೆ. ವಾರ್ಧಕ ಷಟ್ಪದಿಯಲ್ಲಿ–

"ಬಸವೇಶ ನೀಲಾಂಬೆ ಸಿದ್ಧರಾಮ ಚನ್ನ
ಬಸವನಲ್ಲಮ ಕರಸ್ಥಲವೀರ ನಾಗಾರ್ಯ

ರಸಮ ಮಾಯ್ದೇವರಪ್ಪಣ್ಣ ಮಹಾದೇವಿ ದಾಸಯ್ಯ ಬಹುರೂಪಿ ಚೌಡಂ
ಮಿಸುಪ ಶಾಂತಯ್ಯನಾದಯ್ಯ ಬೋಳೇಶ ಗುರು
ಬಸವ ಶಂಕರದೇವ ನಾಗಾಂಬೆ ಮೊದಲಾದ
ರುಸರ್ದ ನಾನಾರಾಗ ಲಲಿತ ವಚನಂಗಳಿಂ ರಚಿತಮಾಯ್ತೀ ಶಾಸ್ತ್ರವು"

ಎಂದು ಹೇಳಿರುವಲ್ಲಿ ತನ್ನ ಕೃತಿಯಲ್ಲಿ ಯಾವ ಯಾವ ಶಿವಶರಣರ ಸ್ವರ ವಚನಗಳು ಸೇರ್ಪಡೆಯಾಗಿವೆ ಎಂದು ಹೇಳುವ ಸಂದರ್ಭದಲ್ಲಿ–ಕರಸ್ಥಲ ವೀರಣ್ಣ, ನಾಗಾರ್ಯ, ಬೋಳೇಶ ಉಲ್ಲೇಖವಿದೆ. 'ಉಸರ್ದ ನಾನಾರಾಗ ಲಲಿತ ವಚನಂಗಳಿಂ' ಎಂಬುದು ವೀರಣ್ಣೊಡೆಯ, ನಾಗಿದೇವ, ನಿರ್ವಾಣಿಬೋಳೇಶರು ಸ್ವರವಚನಕಾರರಾಗಿದ್ದರು ಎಂಬುದು ಖಚಿತಪಡಿಸುತ್ತದೆ.

**8. ರುದ್ರಕವಿಯ–ಕರಸ್ಥಲ ನಾಗಲಿಂಗನ ಚರಿತೆ (ಕ್ರಿ.ಶ. 1650)**

ಇದು ಕರಸ್ಥಲ ನಾಗಿದೇವನ ಕುರಿತು ಬರೆದ ಸ್ವತಂತ್ರ ಕೃತಿಯಾಗಿದ್ದು, ನಾಗಿದೇವನದು ಶ್ರೀರಂಗಪಟ್ಟಣದ ಸಮೀಪವಿರುವ ಬೊಮ್ಮೂರು ಜನ್ಮಸ್ಥಳವೆಂಬುದು ತಿಳಿಸುತ್ತದೆ. ಹಾಗೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಮಂಚಳ್ಳಿಯಲ್ಲಿ ತನ್ನ ಆಧ್ಯಾತ್ಮಿಕ ಸಾಧನೆಗೈದುದು ಉಲ್ಲೇಖಿಸಿದೆ. "ಅಲ್ಲಿ ಕರಸ್ಥಲನಾಗಿದೇವನ ಬೆಟ್ಟವಿದ್ದು ಆತನ ಹೆಸರಿಗೆ ಒಂದು ಗುಹೆಯೂ ಇದೆ. ಭಕ್ತಾದಿಗಳು ಇಂದಿಗೂ ಅಲ್ಲಿಗೆ ಪೂಜೆ–ಪುನಸ್ಕಾರ ಮಾಡುತ್ತಾರೆ" ಎಂಬುದು ತಿಳಿಯುತ್ತದೆ. ನಾಗಿದೇವರ ಜೀವನ ಕುರಿತು ಹೇಳುವುದೇ ಮುಖ್ಯ ಉದ್ದೇಶವಾಗಿದ್ದರೂ ಸಾಂದರ್ಭಿಕವಾಗಿ ಕರಸ್ಥಲ ವೀರಣ್ಣೊಡೆಯನ ಸಂಕ್ಷಿಪ್ತ ಜೀವನ ಸಾಧನೆ ಕುರಿತಂತೆಯೂ ನಿರೂಪಿಸಿದ್ದಾನೆ.

ರುದ್ರಕವಿ ಈ ಗ್ರಂಥವನ್ನು ದೇಶೀಯ ಮಟ್ಟುವಾದ ಸಾಂಗತ್ಯದಲ್ಲಿ ರಚಿಸಿದ್ದಾನೆ. ಸಾಂಗತ್ಯ ಪದ್ಯಗಳ ಜೊತೆಗೆ ಕಂದಪದ್ಯ, ವೃತ್ತ, ಸ್ತೋತ್ರದ ವಚನಗಳೂ ಸೇರಿವೆ. ಕೃತಿಯಲ್ಲಿ ಇವರಿಬ್ಬರ ಜೊತೆಗೆ ಇತರೆ ಹೊಸ ಹೆಸರುಗಳ ವಿರಕ್ತರನ್ನು ಹೆಸರಿಸಿರುವುದರಿಂದ ನೂರೊಂದು ವಿರಕ್ತರ ಮೇಲೆ ಹೊಸ ಬೆಳಕು ಚೆಲ್ಲುವ ಮಹತ್ವದ ಕೃತಿ ಇದಾಗಿದೆ. ಈ ಕೆಳಗಿನ ಪದ್ಯವನ್ನು ಗಮನಿಸಿದರೆ ನೂರೊಂದು ವಿರಕ್ತರ ಕೆಲವು ಹೊಸ ಹೆಸರುಗಳು ಸಿಗುತ್ತವೆ–

"ಕೊಳ್ಳಿಯಶಾಂತಯ್ಯ ಬೋಳೆಯ ನಿರ್ವಾಣಿ
ಕೇಳು ಮೀಣಿಯ ಪ್ರಭುದೇವ
ಪೇಳಿ ಪಾದಕೆ ಲಿಂಗತಾಳಿ ಪೂಜಿಪರು ನಿ
ಮ್ಮೊಳುಂಟೆಯೊಂದು ಕೇಳಿದರೆ"

ಇಲ್ಲಿ ಕೊಳ್ಳಿಯ ಶಾಂತಯ್ಯ, ನಿರ್ವಾಣಿ ಬೋಳೇಶ ಮತ್ತು ಮೀಣಿಯ ಪ್ರಭುದೇವರ ಹೆಸರುಗಳು ಕರಸ್ಥಲ ನಾಗಲಿಂಗನು ಕಾಲಲ್ಲಿ ಲಿಂಗಕಟ್ಟಿ

ಪೂಜಿಸುತ್ತಿರುವಾಗ ಅದನ್ನು ನೋಡಿದ ಪ್ರೌಢದೇವರಾಯನು ಈ ಮೂವರನ್ನು ಕರೆದು ವೀರಶೈವರಾದವರು ಕಾಲಲ್ಲಿ ಲಿಂಗ ಕಟ್ಟಿಕೊಳ್ಳುವುದು ಸರಿಯೆ? ಎಂದು ಕೇಳುವ ಪ್ರಸಂಗದಲ್ಲಿ ಬಂದಿವೆ. "ಅಂತೂ ಇಷ್ಟೆಲ್ಲ ವಿರಕ್ತಮೂರ್ತಿಗಳು ಈ ದೊರೆಯ ಕಾಲದಲ್ಲಿ, ಅವನ ರಾಜಧಾನಿಯಲ್ಲಿ ಉಪಸ್ಥಿತರಿದ್ದರೆಂಬುದು ಇದರಿಂದ ಖಚಿತವಾಗುತ್ತದೆ" ಎನ್ನಬಹುದು.

ಪ್ರೌಢರಾಯರ ಆಸ್ಥಾನದಲ್ಲಿ ನಡೆಯುವ ಗಣಪತಿ ಉತ್ಸವದಲ್ಲಿ ನೂರೊಂದು ವಿರಕ್ತರು ಭಾಗವಹಿಸಿ ಸಂಭ್ರಮದಿಂದ ಗಣೇಶ ವಿಸರ್ಜನೆಯ ಕಾರ್ಯಕ್ರಮದಲ್ಲಿ ರಾಯನ ಭಿನ್ನಹದ ಮೇರೆಗೆ ಭಾಗಿಯಾಗಿರುವ ಪದ್ಯದ ಉಲ್ಲೇಖ ಹೀಗಿದೆ–

"ಮುರಾರಿ ಹೆಮ್ಮಗ ಹೇರಂಬ ನೊಸಗೆಯ
ಧಾರುಣೀಪತಿಯು ಸಂಭ್ರಮಿಸಿ
ನೂರೊಂದು ಮಂದಿಯ ವಿರಕ್ತರೊಲವಿಂದ
ಆರಾಧಿಸುತ ಗಣಪತಿಯ"

ಎಂಬಲ್ಲಿ "ವಿಜಯನಗರ ಅಂದಿನ ಸಾಂಸ್ಕೃತಿಕ ಮಹೋತ್ಸವದಲ್ಲಿ ನೂರೊಂದು ವಿರಕ್ತರಿಗಿದ್ದ ಈ ಪ್ರಾಶಸ್ತ್ಯ ಪೂಜೆ ಅವನ ಕಾಲಕ್ಕೆ ಇತರ ಹಬ್ಬಗಳಲ್ಲಿ ಇತ್ತೆಂದು" ಊಹಿಸಿದ್ದಾರೆ. ಆದ್ದರಿಂದ ಪ್ರೌಢರಾಯನ ಕಾಲದ ವಿರಕ್ತರ ಪ್ರಭಾವ ಹಾಗೂ ರಾಜಾಶ್ರಯಗಳಿಂದ ಈ ಧರ್ಮವು ಪುನರುಜ್ಜೀವನಗೊಂಡಿದ್ದು ಸಹಜವೆನಿಸುತ್ತದೆ. ಇಲ್ಲಿ ಕವಿ ನಾಗಿದೇವ, ಗುರು ಶಾಂತಯ್ಯ (ವೀರಣ್ಣೊಡೆಯ), ಕೊಳ್ಳಿಯ ಶಾಂತಯ್ಯ, ನಿರ್ವಾಣಿಬೋಳೇಶ, ಮೀಣೆಯ ಪ್ರಭುದೇವ, ಗುರುಬಸವ, ಕಲ್ಲುಮಠದ ಪ್ರಭುದೇವನನ್ನು ಉಲ್ಲೇಖಿಸಿರುವುದು ಕಾಣುತ್ತೇವೆ.

### 9. ಏಕೋತ್ತರ ಶತಸ್ಥಲ ಟೀಕೆ (1650)

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವೀರಶೈವ ಕವಿಗಳು ವಿಫುಲವಾಗಿ ಏಕೋತ್ತರ ಶತಸ್ಥಲಕ್ಕೆ ಟೀಕುಗಳನ್ನು ಬರೆದಿರುವುದು ಕಾಣುತ್ತೇವೆ "... ಬಸವಣ್ಣ, ಚೆನ್ನಬಸವಣ್ಣ, ಪ್ರಭುಸ್ವಾಮಿಗಳು ಮೊದಲಾದ ಎಲ್ಲಾ ಪುರಾತನರೆ ಆದ್ಯಗಣಂಗಳೆನಿಸುವರು....... ಕೋಲಶಾಂತಯ್ಯ, ಕೋವಿಶಾಂತಯ್ಯ, ಕುದುರಿಶಾಂತಯ್ಯ, ಮಂಚದಶಾಂತಯ್ಯ ಮೊದಲಾದ ನೂರೊಂದು ವಿರಕ್ತರೆ ವೇದ್ಯ ಗಣಂಗಳೆನಿಸುವವರು.....ತೋಂಟದ ಸಿದ್ಧಲಿಂಗ ಸ್ವಾಮಿಗಳು, ಮರುಳ ಸಿದ್ಧೇಶ್ವರ ಸ್ವಾಮಿಗಳು, ಸ್ವತಂತ್ರ ಸಿದ್ಧಲಿಂಗ ಸ್ವಾಮಿಗಳು, ಗುಮ್ಮಳಾಪುರದ ಸ್ವಾಮಿಗಳು, ಚೆನ್ನಂಜೇ ಸ್ವಾಮಿಗಳು ಮೊದಲಾದ ಪುರಾತನರೆ ಸಾಧ್ಯಗಣಂಗಳೆನಿಸುವರು....." ಎಂದಿರುವಲ್ಲಿ 12ನೆಯ ಶತಮಾನದ ವಚನ ಕಾಲಘಟ್ಟದ ಶರಣರನ್ನು ಆದ್ಯಗಣದವರೆಂದು, ನೂರೊಂದು ವಿರಕ್ತರನ್ನು ವೇದ್ಯಗಣದವರೆಂದು, ನಂತರದ 701 ವಿರಕ್ತರನ್ನು ಸಾಧ್ಯಗಣಗಳೆಂದು ಕರೆದಿರುವುದು ಕಂಡುಬರುತ್ತದೆ. 'ವೇದ್ಯ' ಎಂಬ ಪದ ತಿಳಿಯಲು ಸಾಧ್ಯವಾದುದು, 'ಜ್ಞಾನಿ'

ಎಂದರ್ಥ ಕೊಡುತ್ತಿದ್ದು ಕವಿ ಇಲ್ಲಿ ನೂರೊಂದು ವಿರಕ್ತರನ್ನು ಜ್ಞಾನಮೂರ್ತಿಗಳೆಂದು ಕರೆದಿದ್ದಾನೆಂದಿಟ್ಟುಕೊಳ್ಳಬಹುದು. "ಕೊನೆಯಲ್ಲಿ ಹೇಳಿದ ಚೆನ್ನಂಜೇದೇವನನ್ನು ಸಂಪಾದನೆಯ ಚೆನ್ನಂಜೇದೇವನೆಂದು ನಂಬಿದರೆ ಈ ಪ್ರತಿ ರಚನೆಯಾದ ಕಾಲ ಕ್ರಿ.ಶ. 1530ರಿಂದ ಈಚೆಗೆ. ಈ ಕಾಲಕ್ಕೆ ನೂರೊಂದು ಸ್ಥಳಕುಳದ ಸಂಬಂಧ ನೂರೊಂದು ವಿರಕ್ತರೊಡನೆ ಸೇರಿ ಪ್ರಯೋಗವಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ರೀತಿಯ ಹೆಸರುಗಳನ್ನು ಆಧರಿಸಿಯೇ ಮುಂದಿನ ಕವಿ ಮೋದಿರುದ್ರ ನೂರೊಂದು ವಿರಕ್ತರ ಕೃತಿಯನ್ನು ರಚಿಸಿರಬೇಕು ಅನ್ನಿಸುತ್ತದೆ.

**10. ಬೊಕ್ಕಪ್ಪಕವಿಯ–ನಿಜಶರಣನ ತ್ರಿವಿಧಿ (17ನೇ ಶತಮಾನ)**

ನೂರೊಂದು ವಿರಕ್ತರನ್ನು ಭಕ್ತಿಭಾವದಿಂದ ನೆನೆದ ಕೃತಿ ಇದಾಗಿದ್ದು, "ಎಲ್ಲ ಗಣಂಗಳು ಮೇಲಾಗಿ ರಾಮಪುರದ ಬೊಕ್ಕ" ಕಡೆಯಾಗಿ ಈ ಕಾವ್ಯ ರಚಿಸಿರು ವೆನೆಂದು ಕವಿ ಹೇಳಿರುವುದರಿಂದ ಆತನ ಹೆಸರು ಬೊಕ್ಕ ಅಥವಾ ಬೊಕ್ಕಪ್ಪ ಎಂದಿಟ್ಟುಕೊಳ್ಳಬಹುದು. ತನ್ನ ತ್ರಿವಿಧಿಯ ಆರಂಭದಲ್ಲಿ ನೂರೊಂದು ವಿರಕ್ತರನ್ನು ಸ್ಮರಿಸಿದ ಪದ್ಯ ಹೀಗಿದೆ–

"ನೂರೊಂದು ವಿರತರ ಪಾರೀಕ ನಾನಯ್ಯ
ಪಾರೆಯವ ತಿರುಗಿ ಪವಳ ಮಂಟಪದೊಳಗೆ
ದ್ವಾರ ಕಾಯ್ದಿಹೇನೂ ನಿಜಶರಣ
ಪರಮ ವಿರಕ್ತರ ಚರವಣ ಪಿಡಿಕೊಂಡು
ಬರೆಹವ ಕಲಿತು ಅನುಭಾವ ಮಾಡುವರ
ನೆರೆದು ಸುಖಿಯಾದೆ ನಿಜಶರಣ"

ಎಂದು ಹೇಳಿರುವಲ್ಲಿ, ಕವಿ ತಾನು ನೂರೊಂದು ವಿರಕ್ತರ ಪಹರೆಯವನು ಅಥವಾ ಕಾವಲುಗಾರನು ಅಂದರೆ ಅವರ ದರುಶನಕ್ಕಾಗಿ ಹವಳ ಮಂಟಪದೊಳಗೆ ಕಾವಲು ಕಾಯುತ್ತಿರುವೆನು ಎಂದಿದ್ದಾನೆ. ಹಾಗೆಯೇ ಪರಮ ವಿರಕ್ತರ ಚರಣ ಹಿಡಿದುಕೊಂಡು, ಬರಹವನ್ನು ಕಲಿತು, ಅನುಭಾವಿಗಳ ಜೊತೆ ಸೇರಿ ಸುಖಿಯಾದೆ ಎಂದು ಕವಿ ತನ್ಮಯದಿಂದ ಗೌರವಿಸಿ ಸ್ಮರಿಸಿದ್ದಾನೆ.

**11. ಕುಷ್ಟಗಿ ಕರಿಬಸವೇಶ್ವರ–ವಚನ (ಕ್ರಿ.ಶ. 17ನೇ ಶತಮಾನ)**

ವಚನಕಾರನಾದ ಈತನು ಹಿರಿಯ ಶರಣರಿಗೆ ಶರಣಾರ್ಥಿ ಹೇಳುವಾಗ ಕರಸ್ಥಲ ನಾಗಿದೇವನನ್ನು ವಚನದ ಸಾಲಿನಲ್ಲಿ ಸ್ಮರಿಸಿದ್ದಾನೆ.

"ಸೃಷ್ಟಿಯೊಳು ಭೋರಿಟ್ಟು ಹರಿವ ಶರಧಿಯ ಕಂಡು
ಅಂಗದಟ್ಟವ ಹಾಕಿ ದಾಟಿ
ಸರ್ವರಿಗೆ ಲಿಂಗವ ಕಟ್ಟಿ
ಪ್ರವುಡನ ಪಟ್ಟದಾನೆಗೆ ಭಸಿತವನಿಟ್ಟು ನಿಲಿಸಿದ

ಕರಸ್ಥಲ ದೇವರಿಗೆ ಮಿಡಿ ಬೀರದೆ ಲಿಂಗವ ಕಟ್ಟಿ
ಕಡಗಿಟ್ಟರೆ ಪ್ರಾಣಹೋದ ಬಳಿಕ ಆ ಲಿಂಗವ ಕಟ್ಟಿದರೆ
ಬದುಕುವ ಪ್ರಾಣಲಿಂಗಾಂಗಿ ಮರುಳ ಶಂಕರದೇವರಿಗೆ
ಶರಣು ಶರಣಾರ್ಥಿ"

ಎಂದು ವಚನಕಾರ ಹೇಳಿರುವಲ್ಲಿ ನಾಗಿದೇವ ಹರಿಯುವ ಶರಧಿ ದಾಟಿರುವುದನ್ನು, ಪ್ರೌಢರಾಯನ ಮದವೇರಿದ ಪಟ್ಟದಾನೆಗೆ ಭಸಿತವನ್ನಿಟ್ಟು ನಿಲ್ಲಿಸಿದ್ದನ್ನು ವಚನ ಉಲ್ಲೇಖಿಸಿದೆ.

### 12. ಮೋದಿಯ ರುದ್ರನ–ವಿರಕ್ತರ ಕಾವ್ಯ (ಕ್ರಿ.ಶ. 1732)

ನೂರೊಂದು ವಿರಕ್ತರನ್ನು ಮೊಟ್ಟಮೊದಲು ಎಲ್ಲರ ಹೆಸರುಗಳ ಮೂಲಕ ಪರಿಚಯಿಸಿದ ಕವಿ ಮೋದಿರುದ್ರ. "ಈತನು 'ಪಂಚಮೋದ್ಭವ' ಎಂಬ ಇನ್ನೊಂದು ಕಾವ್ಯ ಬರೆದಿದ್ದಾನೆ ಎಂದು ಕವಿಚರಿತ್ರೆಕಾರರು ಹೇಳಿದ್ದಾರೆ." ಇವನು ಕಾಮಾರಿ ಭಕ್ತರ ಚರಣ ಕಿಂಕರ ಪಂಚಮ ಕುಲಜೋದ್ಭವ ನಿಜವಿರಕ್ತರ ಕಾವ್ಯವನ್ನು ಶಕೆ 1658ರ ಪಿಂಗಳನಾಮ ಸಂವತ್ಸರ ಮಾರ್ಗಶಿರ ಬಹುಳಾ ಮೂಲಾ ಪಾಡ್ಯ ಆದಿತ್ಯವಾರದಂದು ರಚಿಸಿದಂತೆ ಅಂದರೆ, 1737ರಲ್ಲಿ ಬರೆದಂತೆ ಹೇಳಿದ್ದಾನೆ. ಕವಿ ತಾನು ಬಡಮತಿ, ಬದ್ಧಜೀವಿಯು ಆಗಿರುವೆನೆಂದು ತನ್ನ ಬಗ್ಗೆ ತಾನೇ ಹೇಳಿಕೊಂಡಿದ್ದಾನೆ. ತಾನು ನೂರೊಂದು ವಿರಕ್ತರ ಕಾವ್ಯ ರಚಿಸಿರುವುದರ ಹಿನ್ನೆಲೆಯನ್ನು ಸಂಧಿ 1 ಪದ್ಯ 21 ರಿಂದ 23ರಲ್ಲಿ ಹೇಳಿಕೊಂಡಿದ್ದಾನೆ. ಪಂಚಮೋದ್ಭವ ಕಾವ್ಯ ರಚಿಸಿರುವುದನ್ನು ಕೇಳಿ ಮತ್ತು ಗ್ರಂಥದ ಮಹತ್ವ ತಿಳಿದು ಮಲೆ ದೇಶದ ಬಿದರೂರು ಪಟ್ಟಣದ ಶಿವಭಕ್ತ ಸಮ್ಮೇಳನದಲ್ಲಿ ಚರಮೂರ್ತಿ ಷಟ್‌ಸ್ಥಲ ಜ್ಞಾನಕೋವಿದ ಮಳೆಯಸ್ವಾಮಿ ಎಂಬುವರ ಕಾಲಿಗೆರಗಲು; ಅವರು ಭಕ್ತ ನೀನಾರೆಂದು ಎಲ್ಲಾ ಸ್ಥಿತಿಗತಿಗಳ ಕೇಳಿ, ಕವನ ಕಾವ್ಯವ ನೋಡಿ, ಭಲ್ಲ ಭಾಪುರೆ ಪಂಚಮಾಚಾರ ಉದ್ಧಾರ ಭಕ್ತ ನೀನು ಎಂದು ಹೇಳುತ್ತ ಹೀಗೆ ನುಡಿದರಂತೆ–

"ಕರುಣಿಸುತ ಕಂದ ನೀ ಬಾರೆಲವೊ ನಿನಗೊಂದು
ಒರವೆ ಬುದ್ಧಿಯ ಕೇಳು ಈ ಕಾವ್ಯ ರಚಿಸಿದೈ
ಪರಮ ನೂರೊಂದು ವಿರಕ್ತ ಮಾಹೇಶ್ವರರ ಚಾರಿತ್ರ ವಿರಚಿಸೆಂದು
ವರವಿತ್ತು ಪೇಳಲ್ಕೆ ಆ ಮಹಾ ಪೂರ್ವಕಥನ
ದೊರಕುವುದು ದುರ್ಲಭಂ ನಾನೆಂತು ವಿರಚಿಸುವೆ
ಗುರುವೆ ಈ ಬಿನ್ನಹವೆಂದು ನುಡಿಯಲ್ಕೆ ಪೇಳಿದಂ ವರಪ್ರಸಾದ ವಾಕ್ಯವ"

ಈ ಪದ್ಯದ ಸಾಲುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನೂರೊಂದು ವಿರಕ್ತರ ಬಗ್ಗೆ ಸಂಪೂರ್ಣ ಮಾಹಿತಿ ದೊರಕುವುದು ಮಳೆಯಸ್ವಾಮಿ ಮತ್ತು ಮೋದಿರುದ್ರರ ಕಾಲಕ್ಕೆ (ಕ್ರಿ.ಶ. 1732) ದುರ್ಲಭವಾಗಿತ್ತು ಎಂಬ ಅಂಶ ಗೋಚರಿಸುತ್ತದೆ. ಆದರೆ ಪದ್ಯದ ಕೊನೆಯ ಸಾಲು 'ಪೇಳಿದ ವರಪ್ರಸಾದ ವಾಕ್ಯವ'

ಎನ್ನುವಲ್ಲಿ ಮಳೆಯಸ್ವಾಮಿಯೇ ಮೋದಿರುದ್ರನಿಗೆ ವಿರಕ್ತರ ಕುರಿತು ಮಾಹಿತಿ ನೀಡಿರುವ ಪರಿಯನ್ನು, ನೀಡಿದ ಪ್ರೇರಣೆಯನ್ನು ತಿಳಿಸುತ್ತದೆ.

ಹೀಗೆ ಮಳೆಯಸ್ವಾಮಿಯ ವರಪ್ರಸಾದದಿಂದ ವೀರಣ್ಣೊಡೆಯರ ಮುಖೇನ ಪ್ರೌಢದೇವರಾಯನಿಗೆ ನೂರೊಂದು ವಿರಕ್ತರ ಕಥೆಗಳನ್ನು ಆರು ಸಂಧಿ, 742 ಪದ್ಯಗಳಲ್ಲಿ (ವಾರ್ಧಕ, ಪರಿವರ್ಧಿನಿ, ಭಾಮಿನಿಷಟ್ಪದಿ) ಬರೆದಿದ್ದಾನೆ.

ಮೊದಲೆರಡು ಸಂಧಿಗಳಲ್ಲಿ ದೇವಲೋಕದಲ್ಲಿ ವಿಕಟಾಂಗ ಗಣೇಶ್ವರರನ್ನು ನೋಡಿ ಇಂದ್ರ ಇವರು ಭ್ರಾಂತುರಹಿತರು ಎಂದಾಗ; ಗಣೇಶ್ವರರು ಸಿಟ್ಟಾಗಿ ಶಾಪಕೊಡಲಾಗಿ ದೇವೇಂದ್ರ ವಿದ್ಯಾನಗರದಲ್ಲಿ ರಾಜನಾಗಿ ಹುಟ್ಟಿ ಶಿವಪೂಜೆಯನ್ನು ಮಾಡು ಆಗ ಶಾಪಮುಕ್ತನಾಗುವೆ ಎನ್ನುವರು. ಇಂದ್ರನು ಶಿವನ ಬಳಿಗೆ ಬಂದು ತನ್ನ ಶಾಪದ ವಿಚಾರ ತಿಳಿಸುವನು. ಅದಕ್ಕೆ ವಿಕಟಾಂಗರನ್ನು ಕರೆಯಿಸಿ ನೀವು ಭೂಲೋಕಕ್ಕೆ ಹೋಗಿ ಮರುಳರಂತಿದ್ದು ಮರಳಿ ಬನ್ನಿ ಎಂದು ಹೇಳಿ ಕಳುಹಿಸುವನು. ದೇವೇಂದ್ರನಿಗೆ ಹಂಪೆಯ ಹಿಂದಿನ ವೈಭವ, ವೈಶಿಷ್ಟ್ಯಗಳನ್ನು ಹೇಳುತ್ತಾ ಗಿರಿಜಾ ಕಲ್ಯಾಣ ತಾರಾಸುರನ ವಧೆ ವಿಷಯ ಹೇಳುವನು. ಮೂರನೆಯ ಸಂಧಿಯಲ್ಲಿ ಕರಸ್ಥಲ ನಾಗಿದೇವನ ಮತ್ತು ವೀರಣ್ಣೊಡೆಯರ  ಜೀವನ ಕುರಿತಾದ–

- ನಾಗಿದೇವ ಪತಿಯುಳ್ಳ ಸ್ತ್ರೀಯ ಮನೆಗೆ ಅರ್ಧರಾತ್ರಿಯಲ್ಲಿ ಹೋದ ಪ್ರಸಂಗ.
- ನಾಗಿದೇವ ವೀರಣ್ಣೊಡೆಯರಿಂದ ಲಿಂಗದೀಕ್ಷೆ ಪಡೆದು ದೇಶಸಂಚಾರ ಕೈಗೊಂಡು ಮರಳಿ ಬಂದ ಪ್ರಸಂಗ.
- ನಾಗಿದೇವ ಗುರು ವೀರಣ್ಣೊಡೆಯರನ್ನು ಸಂಸಾರಬಂಧನದಿಂದ ಮುಕ್ತರಾಗುವಂತೆ ಮಾಡಿದ ಪ್ರಸಂಗ.
- ವಿದ್ಯಾನಗರಿಯಲ್ಲಿ ಹುಚ್ಚ ರಾವುತನ ಮಡದಿ ತನ್ನನ್ನೇ ಅರ್ಪಿಸಿದಾಗ ಅವಳನ್ನು ನಾಗಿದೇವರು ಭೋಗಿಸಿದ ಪ್ರಸಂಗ.
- ಸಿಂಗಾರ ತೋಟದಲ್ಲಿ ಎಳೆನೀರನ್ನು ನಾಗಿದೇವರು ಲಿಂಗಕ್ಕೆ ಭಾವಾರ್ಪಣ ಮಾಡಿದ ಪ್ರಸಂಗ.
- ಶ್ರೀಗಿರಿಯ ಮೋಹಿನಿ ಗಜಾರೋಹಣ, ವೀರಣ್ಣೊಡೆಯರನ್ನು ಮರಳಿ ವಿದ್ಯಾನಗರಕ್ಕೆ ಕಳುಹಿಸಿದ ಪ್ರಸಂಗ.
- ವೀರಣ್ಣೊಡೆಯರಿಗೆ ಅರಸ ತನ್ನ ಮಗಳನ್ನು ಕೊಡುವುದು.
- ಅರಸ ನೀಡಿದ ಪಚ್ಚೆಕಡಗ ಮಿಂಗುಲಿಯ ಹಕ್ಕಿಗೆಂದು ಪಂಪಾನದಿಯಲ್ಲಿ ವೀರಣ್ಣೊಡೆಯರು ಎಸೆದಿರುವ ಪ್ರಸಂಗ.

ಇತ್ಯಾದಿ ಸನ್ನಿವೇಶಗಳು ಇಲ್ಲಿ ಚಿತ್ರಿತಗೊಂಡಿವೆ. ನಾಲ್ಕರಿಂದ ಆರನೆಯ ಸಂಧಿಯವರೆಗೆ ನೂರೊಂದು ವಿರಕ್ತರ ಜೀವನ ವೃತ್ತಾಂತಗಳನ್ನು ಹೇಳುತ್ತಾ ಅವರು ಬಯಲಲ್ಲಿ ಬಯಲಾದ ಸನ್ನಿವೇಶಗಳಿವೆ.

ಈ ಕಾವ್ಯದಲ್ಲಿ "ಮೋದಿಯ ರುದ್ರನು ಇಡಿಯಾಗಿ ಚೆನ್ನಬಸವಪುರಾಣ 63ನೆಯ ಸಂಧಿಯನ್ನು ಅನುಸರಿಸಿದರೂ ನೂರೊಂದು ವಿರಕ್ತರ ಮಹಿಮೆ ಸಾರುವುದು ಈತನ ಉದ್ದೇಶವಾಗಿದೆ. ಇಲ್ಲಿ ಬರುವ ಕರಸ್ಥಲ ವೀರಣ್ಣೊಡೆಯ ಹಾಗೂ ನಾಗಿದೇವರು ನೂರೊಂದು ವಿರಕ್ತರೊಳಗಿದ್ದವರು. ವೀರಣ್ಣೊಡೆಯರಂತೂ ವಿರಕ್ತರ ಗುರು ಅಷ್ಟೇ ಅಲ್ಲ ಅರಸನಿಗೆ ಆಪ್ತರಾದವರೆಂಬುದು ತಿಳಿಯುತ್ತದೆ." ಒಟ್ಟಾರೆಯಾಗಿ ನೂರೊಂದು ವಿರಕ್ತರ ಹೆಸರು ಕುರಿತು ದೊರಕುವ ಏಕೈಕ ಕೃತಿ ಇದಾಗಿರುವುದರಿಂದ ಈ ಕಾವ್ಯಕ್ಕೆ ಅಧ್ಯಯನ ದೃಷ್ಟಿಯಿಂದ ಪ್ರಾಶಸ್ತ್ಯ ನೀಡಬಹುದಾಗಿದೆ. ಕವಿ ತಿಳಿಸಿದ ಒಟ್ಟು ನೂರೊಂದು ವಿರಕ್ತರ ಹೆಸರುಗಳು ಹೀಗಿವೆ–

1. ಕರಸ್ಥಲದ ನಾಗಿದೇವ, 2. ಗುರುಬಸವ, 3. ಹೊನ್ನಿದೇವ, 4. ಹೇಟೆಯ ಮರುಳ, 5. ಟಗರ ಕಾಳಗದ ಪ್ರಭುದೇವ, 6. ಬಾಲಲಿಂಗಣ್ಣ, 7. ಕಾಲಿಗೆ ಸರವಿಯಕಟ್ಟಿದ ಪರಮಶಾಂತ, 8. ಬತ್ತಲೇಶ್ವರ, 9. ವಿಡಬಿಲ್ಲ ಶಾಂತ, 10. ತುಪಾಕದ/ಆಯುಧ ಶಾಂತ, 11. ಕುದರಿಶಾಂತ, 12. ಮಂಚದಶಾಂತ, 13. ಮದ್ದಳೆಶಾಂತ, 14. ಬುಡಬುಡಿಕೆಶಾಂತ, 15. ಡಂಗುರ ಗುರುಶಾಂತ, 16. ಖಂಡನೆಯ ಶಾಂತ, 17. ಸಾಣೆ ಖಂಡ ಶಾಂತ, 18. ಮದ್ದಾನಿ ಶಾಂತ, 19. ಶಿಂಗಡಿಯ ಶಾಂತ, 20. ಚಕ್ರದ ಶಾಂತ, 21. ಬೊಂಬೆಕಟ್ಟಿ ಮೆರೆಸುವ ಶಾಂತ, 22. ಜಟ್ಟಿಶಾಂತ, 23. ವಿಟ/ವೀರ ಶಾಂತ, 24. ಡೊಂಬರ ಶಾಂತ, 25. ಊರ್ಧ್ವರೇತದ ಶಾಂತ/ ವರ್ಧೇಂದ್ರಿಯ, 26. ಗುರುಬಸವೇಶ್ವರ, 27. ನಿಬ್ಬೆರಗಿನ ಮಹಾಶಾಂತ, 28. ಸರಕೀಲ ಶಾಂತೇಶ್ವರ, 29. ಸೂಚಿಗಭದ್ರಕಾಳಿ ಶಾಂತ, 30. ಇದ್ದಲಿಶಾಂತ, 31. ರುದ್ರಭೂಮಿಯ ಶಾಂತ, 32. ರುದ್ರಮೂರ್ತಿಶಾಂತ, 33. ಬಯಲಶಾಂತಮೂರ್ತಿ, 34. ಮಡಿವಾಳ ಶಾಂತ, 35. ಹಿಡಗಡಲೀಯ ಶಾಂತ, 36. ಶಿವಮೂರ್ತಿ ನಿರಧಿಶಾಂತ, 37. ಪೆಟಲಿನ ಶಾಂತ, 38. ಕಾಳಿ ಶಾಂತೇಶ, 39. ಪಾವನಗುಂಡಶಾಂತ, 40. ದ್ವಿಜಮೂರ್ತಿ ಚೆಂಡಿನಾಟದ ಪ್ರವರಶಾಂತ, 41. ಲಂಡರಾಹುತಶಾಂತ, 42. ಶಿಶುಗಳನು ಪಾಲಿಸುತ ಒಪ್ಪಿರ್ದಶಾಂತ, 43. ಬಿಸಿನೀರಿನ ಶಾಂತ, 44. ಚಂದಕುಸಿಲಿನ ಚೆದುರಶಾಂತ, 45. ಬೇಟೆಯ ಶಾಂತ, 46. ಧೂಪದ ಶಾಂತ, 47. ಸುವಿವೇಕಿಶಾಂತ, 48. ಮಜ್ಜನ ಮಾಳ್ಪಶಾಂತ, 49. ವಿಭೂತಿ ಶಾಂತ, 50. ವಸೂಗೆಲಸದಶಾಂತ, 51. ಹೊನ್ನಜೂಜಿನ ಶಾಂತ, 52. ಕಿನ್ನರಿಶಾಂತ, 53. ಎಚ್ಚರನಿಯೂವಶಾಂತ, 54. ವುಗ್ಗದಾ/ಎಗ್ಗದ ಶಾಂತೇಶ, 55. ಗಿರಗಟ್ಟಿಯ ಶಾಂತ, 56. ಕಸ್ತೂರಿ ತಿಲಕದ ಶಾಂತ, 57. ಇಂದ್ರಜಾಲದ ಶಾಂತ, 58. ಗಿಂಡಿಯ ಶಾಂತ, 59. ಚೆಂಡಿನಾಟದ ಶಾಂತ, 60. ಬೊಂಬೆಯಮಾಳ್ಪ ಶಾಂತ, 61. ಚಂಡವಿಕ್ರಮನಿಧಿನಿಧಾನದಶಾಂತ, 62. ಚಂದ್ರವಂಕಿ ಶಾಂತ, 63. ತೃಣದ ಶಾಂತ, 64. ನಾಟ್ಯಶಾಂತ, 65. ಮಹೇಂದ್ರಜಾಲದ ಶಾಂತ, 66. ಕವಿಶಾಂತ,

67. ಓಟ/ಭಟ್ಟ ಶಾಂತ, 68. ಹೆಸರನು ಇಟ್ಟ ಶಾಂತೇಶ, 69. ಗಾಂಗೇಯಶಾಂತ, 70. ಬೆಟ್ಟದಮೇಲಿರ್ಪ ಶಾಂತ, 71. ಪುಟ್ಟಿಗೋಲಿನ ಶಾಂತ, 72. ನೇಮದ/ ನೈಗಮದ ಶಾಂತ, 73. ಉಗ್ಗಡಿಪ ಶಾಂತ, 74. ಅಟ್ಟಿಹೋಯಿವಡಮಾಯೆ ಶಾಂತ, 75. ಕಟ್ಟುಗ್ರನಾಯಕ ಶಾಂತ, 76. ಶರಭಶಾಂತ, 77. ಮರವಿಕ್ರೈಪ ಶಾಂತೇಶ, 78. ಚೌಕಶಾಂತ, 79. ಮೊಗರಿಯ ಶಾಂತ, 80. ಉರುತರದ ಶರಪಶಾಂತ, 81. ಸ್ವಸ್ಥಿರ ಸಮಾಧಿಯಲ್ಲಿರುವ ಶಾಂತ, 82. ಸೂಜಿಯ ಪರಮಶಾಂತ, 83. ಒಕ್ಕಲಿಗ ಗುರು ಶಾಂತ, 84. ಕೆಲಸಿನ ಶಾಂತ, 85. ಶಂಕರನ ಒಲಮೆಶಾಂತ, 86. ನಿಂಬಿಶಾಂತ, 87. ದುಡ್ಡಿನ/ ಸೊಡ್ಡಿನ ಶಾಂತ, 88. ಚೆಲುವ ಶಾಂತೇಶ, 89. ಸಾಧನೆಯ ಶಾಂತ, 90. ವಡ್ಡಶಾಂತ, 91. ನಿರ್ವಂಚನೆಯ ಶಾಂತೇಶ, 92. ಪಂಚಾಂಗವಿಡಿದೋದುವಶಾಂತ, 93. ಶೂಲದ ಶಾಂತಲಿಂಗ, 94. ಕಂಚಿನಾದ್ರಿಯ ಶಾಂತ, 95. ರತ್ನದ ಶಾಂತ, 96. ಕೋಲಶಾಂತ, 97. ಬಾಲಗಾಸೆಯ ಶಾಂತಮೂರ್ತಿ, 98. ಹಾಲಶಾಂತ, 99. ಗಾಣಶಾಂತ, 100. ಬಾಣಬತ್ತಿ ಶಾಂತ, 101. ಬಣ್ಣ ಗದ್ದುಗೆ ಶಾಂತ.

**15. ಜನಪದ ಗೀತೆಗಳು**

ಡಾ. ಬಿ.ಎಸ್. ಗದ್ದಿಗಿಮಠರವರು 'ಕನ್ನಡ ಜನಪದ ಗೀತೆಗಳು' ಎಂಬ ವಿಷಯ ಕುರಿತು ಕನ್ನಡದಲ್ಲಿ ಮೊಟ್ಟಮೊದಲು ಕ್ಷೇತ್ರಕಾರ್ಯ ಮಾಡಿ ಪಿಎಚ್.ಡಿ. ಪದವಿಯನ್ನು ಪಡೆದರು. ಅವರ 'ಜನಪದ ಗೀತೆಗಳು' ಸಂಗ್ರಹ ಕೃತಿಯಲ್ಲಿ ನೂರೊಂದು ವಿರಕ್ತರನ್ನು ಸ್ತುತಿಸಿದ್ದು–

"ನೂರೊಂದು ಶರಣರು ನೂರೊಂದು ಬಂದಾರು
ಸಾರಿ ಹೇಳ್ಯಾನೊ ಒಕ್ಕಲಿಗೋ ॥ ಹೊಲಸುಗಿ ॥
ಧೀರ ಕಾಯಕದ ದಿನವೆಂದು
ನೂರೊಂದು ತಲಗಳಲಿ ನೂರೊಂದು ಶರಣರಿಗೆ
ಸಾರುವನು ತತ್ವ ಪ್ರಭುದೇವ ॥ ಚನ್ನಬಸವ ॥
ಮೀರಿದರು ನಾಣಾ ದೀವಟಿಗೆ"

ಈ ಸಾಲುಗಳು ಆ ಕಾಲಕ್ಕಾಗಲೇ ವಿರಕ್ತರು ರೈತರ ಮನದಲ್ಲಿ ಹಸಿಯಾಗಿ ನೆಲೆನಿಂತಿದ್ದರೆಂದು ಅರುಹುತ್ತವೆ. "ನೂರೊಂದು ವಿರಕ್ತರ ದಿವ್ಯ ವ್ಯಕ್ತಿತ್ವದ ಪ್ರಭಾವವು ಕ್ರಿ.ಶ. 17ನೆಯ ಶತಮಾನದ ಹೊತ್ತಿಗಾಗಲೇ ವೀರಶೈವ ಜನಪದ ಭಕ್ತರ ಮೇಲಾಗಿತ್ತೆಂಬುದಕ್ಕೆ ಜನಪದ ಗೀತೆಗಳು ಆಕರಗಳಾಗಿವೆ. ಉತ್ತರ ಕರ್ನಾಟಕದ ಒಕ್ಕಲಿಗರು ಹೆಚ್ಚಾಗಿ ಶಿವಶರಣರಾದುದರಿಂದ ಕಲ್ಯಾಣ ಶರಣರ ಪ್ರಭಾವಕ್ಕೊಳಗಾದಂತೆ, ಕಾಯಕವಿಡಿದಾಚರಿಸಿದ ನೂರೊಂದು ಶರಣರ ಪ್ರಭಾವಕ್ಕೂ ಇವರು ಮಣಿದು ಹಾಡು ಕಟ್ಟಿದ್ದಾರೆ. ನೂರೊಂದು ವಿರಕ್ತರಲ್ಲಿ 'ಒಕ್ಕಲು ಶಾಂತ' ಎಂಬ ಹೆಸರಿನ ಶರಣನೂ ಒಬ್ಬನಿರುವುದನ್ನು ಗಮನಿಸಬೇಕು" ಎಂದು ಹೇಳಿರುವುದು ಇಲ್ಲಿ ನೂರೊಂದು ವಿರಕ್ತರ ಕುರಿತು ರೈತಾಪಿ ವರ್ಗದವರು ತೋರಿದ ಗೌರವ ಎಂತಹದೆಂದು ಅರಿವಾಗುತ್ತದೆ.

ಈ ಹಿನ್ನೆಲೆಯಿಂದ ನೂರೊಂದು ವಿರಕ್ತರನ್ನು ಕುರಿತು ಭೀಮಕವಿಯ–ಬಸವಪುರಾಣ (1430), ಚನ್ನವೀರ ಜಂಗಮನ–ಷಟ್‌ಸ್ಥಲ ವಲ್ಲಭ (1500), ಚಿಕ್ಕಸಿದ್ಧನಂಜೇಶನ–ರಾಘವಾಂಕ ಚರಿತೆ ಮತ್ತು ಗುರುರಾಜ ಚಾರಿತ್ರ (ಕ್ರಿ.ಶ. 1530), ಕಿಕ್ಕೇರಿಯಾರಾಧ್ಯ ನಂಜುಂಡ ಕವಿಯ–ಭೈರವೇಶ್ವರ ಕಾವ್ಯ (1550), ಘನಲಿಂಗದೇವನ–ವಚನ (ಕ್ರಿ.ಶ. 1561), ಗರಣಿಯ ಬಸವಲಿಂಗನ–ಬಸವೇಶ್ವರ ಕಾವ್ಯ (1600), ಶಾಂತಲಿಂಗವೀರದೇಶಿಕನ–ಶಿವಲಿಂಗ ಚಾರಿತ್ರ್ಯ (ಕ್ರಿ.ಶ. 1650), ನಿರಂಜನ ವಂಶ ರತ್ನಾಕರ (19ನೆಯ ಶತಮಾನ) ಅನೇಕ ಕವಿಗಳು, ವಚನಕಾರರು ತಮ್ಮ ಕಾವ್ಯಗಳಲ್ಲಿ, ವಚನಗಳಲ್ಲಿ ಸ್ಮರಿಸಿರುವುದರಿಂದ ಅವರ ಜೀವನ ವೃತ್ತಾಂತಗಳನ್ನು ಕುರಿತು ಹೇಳಿರುವುದರಿಂದ ನೂರೊಂದು ವಿರಕ್ತರು ಎಂಬುದು ಸಾಂಕೇತಿಕ ಎಂಬ ಕೆಲವರ ಅಭಿಪ್ರಾಯ ಸಮಂಜಸವೆನ್ನಿಸುವುದಿಲ್ಲ. ಈ ವಿಚಾರವನ್ನು ಕುರಿತು "ಹಾಗಾದರೆ 770 ಅಮರಗಣಂಗಳ ಸಂಖ್ಯೆಯೂ ಸಾಂಕೇತಿಕವೇ? ಕೆಲವರ ಚರಿತ್ರೆಗಳು ಇನ್ನೂ ಅಜ್ಞಾತದೆಸೆಯಲ್ಲಿವೆಯೆಂದಾಕ್ಷಣ ಅವರ ಭೌತಿಕ ಸತ್ಯವನ್ನು ಕಣ್ಮರೆ ಮಾಡುವುದೆ? ಇಷ್ಟೆಲ್ಲಾ ಪರಿಕರಗಳು ಲಕ್ಕಣ್ಣದಂಡೇಶನಲ್ಲಿ ವಿರಕ್ತರ ಪರವಾಗಿ ದೊರಕುತ್ತಿದ್ದರೂ, ಅನಂತರದ ಕವಿಗಳು ಇವರ ಚರಿತೆ ಕಥನಗಳನ್ನು ಘಂಟಾಘೋಷವಾಗಿ ಸಾರಿ ಹೇಳಿರುವಾಗಲೂ ಇವರ ಸಂಖ್ಯೆ ಸಾಂಕೇತಿಕ ಎಂದು ಭಾವಿಸುವುದು ಅಗ್ರಾಹ್ಯ; ಅವಸರದ ನಿರ್ಣಯ. ಪ್ರೌಢದೇವರಾಯನ ಕಾಲದ ವೀರಶೈವದ ಅಭ್ಯುತ್ಥಾನಕ್ಕೆ ಅವತಾರಿಗಳಾಗಿ ಬಂದಂತೆ ಬಂದು ಆ ಧರ್ಮದ ಸಾಹಿತ್ಯ ಸಂಸ್ಕೃತಿಗೆ ಜೀವ ಕಳೆಯಿತ್ತು ಅದನ್ನು ಬಲಿಸಿ, ಬೆಳೆಸಿ, ಉಳಿಸಿ ಹೋದ ಅಂತಹರ ವಿಷಯಕ್ಕೆ ಮೀನ–ಮೇಷದ ನಿರ್ಣಯ ತಾಳಿರುವುದು ಆಶ್ಚರ್ಯಕರ. ಹಾಗಾದರೆ ಪ್ರೌಢದೇವರಾಯನ ಕಾಲಕ್ಕೆ ಇದ್ದವರಾದರೂ ಯಾರು? ಆ ಕಾಲದಲ್ಲಿ ವೀರಶೈವದ ಪುನರುಜ್ಜೀವನಕ್ಕೆ ಕಾರಣರಾದ ವ್ಯಕ್ತಿಗಳಾರು? ಅಂದಿನ ಸ್ಫೂರ್ತಿ ಕೇಂದ್ರ ಯಾವುದು? ವಿಜಯನಗರ 'ವಿಜಯ ಕಲ್ಯಾಣ ನಗರಿ'ಯಾದದ್ದು ಹೇಗೆ?" ಎಂಬ ಮುಂತಾದ ಪ್ರಶ್ನೆಗಳನ್ನು ಎತ್ತುತ್ತಾರೆ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒಂದೇ; ನೂರೊಂದು ವಿರಕ್ತರು 15ನೆಯ ಶತಮಾನದಲ್ಲಿ ಶರಣ ಧರ್ಮವನ್ನು ಪುನರುಜ್ಜೀವನಗೊಳಿಸಿದ ವಿಜಯನಗರ ಸಾಮ್ರಾಜ್ಯದ ಇಮ್ಮಡಿ ಪ್ರೌಢರಾಯನ ಕಾಲದ ಪ್ರಭಾವಿ ವಿರಕ್ತರು ಹಾಗೂ ಕನ್ನಡ ಸಾಹಿತ್ಯಕ್ಕೆ ಈ ಕಾಲದ ಶಿವ ಕವಿಗಳ ಕೊಡುಗೆ ಏನಾದರೂ ಇದೆ ಎಂದರೆ ಅದು ಈ ನೂರೊಂದು ವಿರಕ್ತರದ್ದೇ ಎಂದು ಹೇಳಬಹುದು. (ಆ ಕಾಲಕ್ಕೆ ಕುಮಾರ ಬಂಕನಾಥ, ಮಗ್ಗೆಯ ಮಾಯಿದೇವನಂತಹ ವಿರಕ್ತ ಮುನಿಗಳು ಇದ್ದರೂ ಅವರನ್ನು ನೂರೊಂದು ವಿರಕ್ತರಲ್ಲಿ ಯಾವ ಕವಿಗಳು ಸೇರಿಸಿಲ್ಲ) ಸಾಹಿತ್ಯ, ಸಂಸ್ಕೃತಿ, ಸಮಾಜ, ಧರ್ಮ, ಆಧ್ಯಾತ್ಮ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ಕೊಟ್ಟಿದ್ದಾರೆ. ನೇರವಾಗಿ ವಚನಕಾರರ (12 ಶತಮಾನ) ಪ್ರಭಾವಕ್ಕೆ ಒಳಗಾದ ನೂರೊಂದು ವಿರಕ್ತರು ಲೌಕಿಕ–ಅಲೌಕಿಕ,

ಅಂತರಂಗ–ಬಹಿರಂಗ, ಜಾತಿ, ಹೆಣ್ಣು, ಸಂಸಾರ ಇತ್ಯಾದಿಗಳ ಕುರಿತು ವೇದಾಂತದ ನೆಲೆಯಲ್ಲಿ ನುಡಿದವರಾಗಿದ್ದಾರೆ. ವೇದಾಂತದ ನೆಲೆಯಲ್ಲಿ ಮಾತನಾಡುವುದರಿಂದ ಅದು ಊಹಾಪೋಹವಾಗಿರದೆ ಅದೊಂದು ದರ್ಶನವಾಗಿರುತ್ತದೆ. ಅನುಭಾವದ ನೆಲೆಗಟ್ಟಿನಲ್ಲಿ ಸಾಹಿತ್ಯ ಕೃತಿಯನ್ನು, ಶಾಸ್ತ್ರ ಕಾವ್ಯಗಳನ್ನು ರಚಿಸಿದ ಇವರು ತಮ್ಮ ಕಾವ್ಯಗಳ ಮೂಲಕ ಅಂದಿನ ಮಹಮ್ಮದಿಯರ ಆಳ್ವಿಕೆಯ ಕಾಲಕ್ಕೆ ನಶಿಸಿ ಹೋಗುತ್ತಿರುವ ಧರ್ಮವನ್ನು ಪ್ರಚಾರಗೈದು ಆ ಧರ್ಮದತ್ತ–ಜಾತಿ, ಮತ, ಧರ್ಮವೆನ್ನದೆ ಎಲ್ಲರನ್ನು ತಮ್ಮೆಡೆಗೆ ಸೆಳೆದರು. ಇಂತಹ ಅನೇಕ ಮಾಹಿತಿ ಅಂದಿನ ಸಾಹಿತ್ಯವನ್ನು ಶಾಸ್ತ್ರ ಕೃತಿಗಳನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಮಾತ್ರ ಲಭಿಸುತ್ತವೆ. ಇಲ್ಲವಾದರೆ ನೂರೊಂದು ವಿರಕ್ತರು ಚರಮೂರ್ತಿಗಳಾಗಿ ಗುಡ್ಡ–ಗುಹೆಯಲ್ಲಿ ಕಾಡು–ಕಣಿವೆಯಲ್ಲಿ ವಾಸವಾಗಿ ಹೋದ ವಿರಕ್ತರಾಗಿಯೇ ಉಳಿಯುತ್ತಾರೆ. ಅನೇಕ ಕವಿಗಳು ಅವರ ಗುಣಸ್ವಭಾವಗಳನ್ನು ಗುರುತಿಸಿರುವುದು ನೋಡಿದರೆ ನೂರೊಂದು ವಿರಕ್ತರು ವಿವಿಧ ವೃತ್ತಿ ಮೂಲಗಳಿಂದ ಬಂದವರಂತೆ ಕಾಣುತ್ತಾರೆ. ಹಾಗಾಗಿಯೇ 15ನೆಯ ಶತಮಾನದಲ್ಲಿ ಜಾತಿ, ಧರ್ಮ, ಕುಲ, ವೃತ್ತಿ, ಲಿಂಗ ಅಸಮಾನತೆ ಮೀರಿದ ಈ ಧರ್ಮ; ವಚನಕಾರರ ಮಾರ್ಗದಲ್ಲಿ ನಡೆದುದರಿಂದ ಅದು ಬಹುಬೇಗ ಚೇತರಿಕೆಯನ್ನು ಕಂಡುಕೊಂಡಿರುವುದು ಈ ಶತಮಾನದಲ್ಲಿ ಕಾಣುತ್ತೇವೆ. ಒಟ್ಟಾರೆಯಾಗಿ ಡಾ. ಫ.ಗು. ಹಳಕಟ್ಟಿ ಅವರು ವಿವರಿಸುವಂತೆ ನೂರೊಂದು ಸ್ಥಲಗಳ ಆಚರಣೆಯಂತೆ ಮನುಷ್ಯನು ಆಚರಿಸುತ್ತ ಹೋದಲ್ಲಿ ಷಟ್‌ಸ್ಥಲ ಜ್ಞಾನವು ಅವನಿಗೆ ಪ್ರಾಪ್ತವಾಗುತ್ತದೆ. ಸಾಧಕನು ಅದೇ ರೀತಿಯಿಂದ ಕ್ರಿಯೆಗಳನ್ನು ಮಾಡಬೇಕೆಂಬುದರ ಸೂಕ್ಷ್ಮ ವಿವರಣೆಗಾಗಿಯೇ ಏಕೋತ್ತರ ಶತಸ್ಥಲ (ಮಹಾಲಿಂಗ) ರಚಿತವಾಗಿದೆ. ಹೀಗೆ ಷಟ್‌ಸ್ಥಲಾಂತರ್ಗತವಾದ ನೂರೊಂದು ಸ್ಥಲಗಳನ್ನು ಅರಿತು ಆಚರಿಸಿ ನಿಜೈಕ್ಯರಾದವರೇ ನೂರೊಂದು ವಿರಕ್ತರು.

'ನೂರೊಂದು ವಿರಕ್ತರ ಕಾವ್ಯ' ಮತ್ತು 'ನೂರೊಂದು ವಿರಕ್ತರ ಸ್ತೋತ್ರ'ದಲ್ಲಿ ಉಲ್ಲೇಖಗೊಂಡ 70ಕ್ಕೂ ಹೆಚ್ಚು ಹೆಸರು ಒಂದೇ ಆಗಿರುವುದರಿಂದ 15ನೆಯ ಶತಮಾನದಲ್ಲಿದ್ದ ವಿರಕ್ತರನ್ನು 'ನೂರೊಂದು' ಎಂದು ಸಾಂಕೇತಿಕವೆಂದು ಭಾವಿಸಬೇಕಿಲ್ಲ. ಶರಣರು 12ನೇ ಶತಮಾನದಲ್ಲಿ ವಚನಗಳನ್ನು ಬರೆದು ಕೊನೆಯಲ್ಲಿ ತಮ್ಮ ಹೆಸರು ಮತ್ತು ವೃತ್ತಿಯನ್ನು ಉಲ್ಲೇಖಿಸಿದ್ದರಿಂದ ಅವರ ಹೆಸರುಗಳು ವಚನಗಳ ಮೂಲಕ ಉಳಿದುಬಂದವು. ಆದರೆ ನೂರೊಂದು ವಿರಕ್ತರೆಲ್ಲರೂ ವಚನ, ಕಾವ್ಯಗಳನ್ನು ಬರೆಯಲಿಲ್ಲ. ಆದುದರಿಂದ ಹಲವು ವಿರಕ್ತರ ಹೆಸರು ಉಳಿದುಬರಲು ಸಾಧ್ಯವಾಗಿಲ್ಲ. ಅಷ್ಟಕ್ಕೂ ಬಹುಪಾಲು ವಿರಕ್ತರು ಗಿರಿ–ಗುಹೆ–ಅರಣ್ಯವಾಸಿಗಳಾಗಿದ್ದರು ಎಂಬುದು ಕೃತಿಗಳಿಂದ ತಿಳಿದುಬರುವುದರಿಂದ, ನೂರೊಂದು ವಿರಕ್ತರು 15ನೇ ಶತಮಾನದಲ್ಲಿ ಇದ್ದದ್ದು ಸತ್ಯಸಂಗತಿಯಾಗಿದೆಯೇ ವಿನಃ, ಸಾಂಕೇತಿಕವಲ್ಲವೆಂದು ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

□

# ‘ಸೋಂಕಿನಸುಖ’ ಒಂದು ಚಿಂತನೆ

**ಡಾ. ಸಂಗಮೇಶ ಸವದತ್ತಿಮಠ**

‘ಸೋಂಕು’ ಎಂದಾಕ್ಷಣ ಬೆಚ್ಚಿಬೀಳುವವರೆ ಹೆಚ್ಚು. ಸೋಂಕು ಉಂಟಾದರೆ ಅದನ್ನು ಪರಿಹರಿಸಿಕೊಳ್ಳುವುದೇ ಕಷ್ಟ ಎಂಬ ಭಾವನೆ ಇದಕ್ಕೆ ಕಾರಣ. ಇಂಗ್ಲಿಷ್‌ನಲ್ಲಿ ವೈರಲ್‌ಇನ್‌ಫೆಕ್ಷನ್ ಎಂದು ಸೋಂಕಿಗೆ ಹೇಳುವುದುಂಟು. ಇದೆಲ್ಲ ಆರೋಗ್ಯ, ವೈದ್ಯಕೀಯ ವಿಚಾರವಾಯಿತು. ಆದರೆ ಅವಿರಳಜ್ಞಾನಿ ಅಲ್ಲಮಪ್ರಭುಗಳು ಸೋಂಕು ಎಂಬ ಪದವನ್ನು ಸುಖ ಎಂಬ ಪದಕ್ಕೆ ಜೋಡಿಸಿ ‘ಸೋಂಕಿನಸುಖ’ ಎಂದು ಹೇಳುವುದರ ಮೂಲಕ ಸೋಂಕಿಗೆ ಹೊಸ ದಾರ್ಶನಿಕ ಅರ್ಥವನ್ನು ನೀಡಿದ್ದು ಸ್ವಾರಸ್ಯಕರವಾಗಿದೆ. ಸೋಂಕಿನಸುಖವನ್ನು ಅವರು ವಿವರಿಸಿದ ವಚನ ಹೀಗಿದೆ:

> ಆಚಾರ ಸನ್ನಹಿತವಾಗಿ ಬಂದಡೆ, ಜಂಗಮ
> ಬೇರಲ್ಲದಿರ್ದಡೆ ಭೂತಪ್ರಾಣಿ ಎಂಬೆ
> ಅರ್ತಿಯಲ್ಲಿ ಲಿಂಗವೆ ಜಂಗಮವೆಂದರಿದು ಮಾಡುವಲ್ಲಿ, ಭಕ್ತ
> ಅಲ್ಲದಿರ್ದಡೆ ಫಲದಾಯಕನೆಂಬೆ
> ಸ್ಥಾವರ ಜಂಗಮ ಒಂದೆ ಎನಬಲ್ಲಡೆ, ಶರಣ ಸಂಬಂಧಿ,
> ಅಲ್ಲದಿರ್ದಡೆ ಪೂಜಕನೆಂಬೆ
> ಇಂತೀ ತ್ರಿವಿಧ ನಿರ್ಣಯದ ಸೋಂಕಿನ ಸುಖವ,
> ಗುಹೇಶ್ವರ ಲಿಂಗದಲ್ಲಿ ಬಸವಣ್ಣನೊಬ್ಬನೆ ಬಲ್ಲನು

ಈ ವಚನದ ಅರ್ಥ ಹೀಗಾಗುತ್ತದೆ: ಸದಾಚಾರಸಂಪನ್ನನಾಗಿ ಇರುವವನು ನಿಜವಾದ ಜಂಗಮ ಎನಿಸುತ್ತಾನೆ. ಇಲ್ಲದಿದ್ದರೆ ಅವನು ಭೌತಿಕವಾಗಿ ನಮ್ಮ ಕಣ್ಣಿಗೆ ಕಾಣುವ ಭೂತಪ್ರಾಣಿ ಮಾತ್ರ. ಈ ಭುವಿಯಲ್ಲಿ ಲಿಂಗವೇ ಜಂಗಮವೆಂದು ಅರ್ಚಿಸುವವನು ನಿಜವಾಗಿ ಭಕ್ತ ಎನಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಅವನು ತನ್ನ ಕಾರ್ಯಕ್ಕೆ ಫಲಾಪೇಕ್ಷೆಯ ಸ್ವಾರ್ಥಿ ಎನಿಸುತ್ತಾನೆ. ಸ್ಥಾವರಲಿಂಗ ಮತ್ತು ಜಂಗಮಲಿಂಗ ಇವೆರಡನ್ನೂ ಒಂದೇ ಎಂದು ಭಾವಿಸುವವ ನಿಜವಾಗಿ ಶರಣ ಎನಿಸುತ್ತಾನೆ. ಇಲ್ಲದಿದ್ದರೆ ಅವನು ಕೇವಲ ಒಬ್ಬ ಪೂಜಾರಿ ಎನಿಸುತ್ತಾನೆ. ಈ ರೀತಿ ಜಂಗಮ, ಭಕ್ತ, ಶರಣ ಈ ಮೂರರ ನಿಜವನ್ನು ನಿರ್ಣಯಿಸಲು ಇರುವುದು ‘ಸೋಂಕಿನಸುಖ’. ಇದನ್ನು ನಮ್ಮ

---

**ಡಾ. ಸಂಗಮೇಶ ಸವದತ್ತಿಮಠ,** ಎಮರಿಟಸ್ ಪ್ರಾಧ್ಯಾಪಕರು, ಧಾರವಾಡ.

ಬಸವಣ್ಣನೊಬ್ಬನೇ ಬಲ್ಲವನು.

'ಸೋಂಕಿನಸುಖ' ಎಂಬುದು ಯಾವುದಕ್ಕೆ ಸಂಬಂಧಿಸಿದೆ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಇಲ್ಲಿ ಮೂರು ಶಬ್ದಗಳನ್ನು ಗಮನಿಸಬೇಕು. ಈ ಭೂಮಿಯಲ್ಲಿನ(ಸ್ಥಾವರ) ಲಿಂಗವನ್ನು ಪೂಜಿಸುವ ಭಕ್ತ, ಸದಾಚಾರಿ **ಜಂಗಮ**, ಮತ್ತು ಇವೆರಡನ್ನೂ ಸಮನಾಗಿ ಒಂದೇ ಎಂದು ಗೌರವಿಸುವ **ಶರಣ**. ಇಲ್ಲಿ ಭಕ್ತ, ಜಂಗಮ ಮತ್ತು ಶರಣ ಈ ಮೂವರೂ ಲಿಂಗಪೂಜಕರೇ ಆದ್ದರಿಂದ ಮೂವರೂ ಲಿಂಗವನ್ನು ಹೇಗೆ ಪೂಜಿಸುತ್ತಾರೆ ಲಿಂಗದ ಬಗ್ಗೆ ಯಾವ ಭಾವವನ್ನು ಹೊಂದಿದ್ದಾರೆ ಎಂಬುದೇ ಅವರ ನಿಜತ್ವವನ್ನು ಒರೆಗೆ ಹಚ್ಚುವ ನಿಕಷ ಅದುವೇ 'ಸೋಂಕಿನಸುಖ'. ಸ್ಥಾವರ ಜಂಗಮ ಒಂದೆ ಎನ್ನುವವನು ಶರಣನೆನಿಸುತ್ತಾನೆ ಎಂದು ಹೇಳಿರುವಲ್ಲಿ ಲಿಂಗವು ಸ್ಥಾವರವಾಗಿರಲಿ, ಜಂಗಮ(ಚರಲಿಂಗ–ಇಷ್ಟಲಿಂಗ)ವಾಗಿರಲಿ ಭೇದವೆಣಿಸದೆ ಪೂಜಿಸಿದರೆ ಮಾತ್ರ ಅವನು ಶರಣ ಇಲ್ಲದಿದ್ದರೆ ಅವನು ಕೇವಲ ಪೂಜಾರಿ.

ಜಂಗಮನಿಗಾಗಲಿ, ಭಕ್ತನಿಗಾಗಲಿ, ಶರಣನಿಗಾಗಲಿ ಲಿಂಗಪೂಜೆ (ಅದು ಸ್ಥಾವರವಿರಲಿ, ಇಷ್ಟವಿರಲಿ) ಅತಿ ಮಹತ್ವದ್ದು. ಮೂವರಿಗೂ ಲಿಂಗಪೂಜೆಯಲ್ಲಿ 'ಸೋಂಕಿನಸುಖ' ಅಂತಿಮವಾಗಿರಬೇಕು ಎಂಬುದು ಅಲ್ಲಮಪ್ರಭುಗಳ ಆಶಯವಾಗಿದೆ. 'ಸೋಂಕಿನಸುಖ'ವನ್ನು ಲಿಂಗಪೂಜೆಯಲ್ಲಿ ಹೊಂದಬೇಕಾದರೆ ಲಿಂಗವೇ ಜಂಗಮವೆಂದರಿತಿರಬೇಕು, ಸ್ಥಾವರಜಂಗಮಗಳಲ್ಲಿ ಅಭಿನ್ನಭಾವ ಹೊಂದಿರಬೇಕು, ಸದಾಚಾದಿಂದ ಕೂಡಿರಬೇಕು. 'ಸೋಂಕಿನಸುಖ' ಎಂಬುದು ಲಿಂಗಾಂಗಸಾಮರಸ್ಯದ ಅನನ್ಯ ಅನುಭವ. ಇಷ್ಟಲಿಂಗಪೂಜೆಯ ಅಂತಿಮ ಗುರಿಯೂ ಇದೇ ಆಗಿದೆ.

'ಸ್ಥಾವರ ಜಂಗಮ ಒಂದೆ ಎನಬಲ್ಲಡೆ' ಮತ್ತು 'ಬಸವಣ್ಣನೊಬ್ಬನೇ ಇದನ್ನು ಬಲ್ಲವನು' ಎಂಬ ಮಾತುಗಳನ್ನು ಗಮನಿಸಿದರೆ ಈ ವಿಷಯದ ಬಗ್ಗೆ ಬಸವಣ್ಣನವರು ಏನು ಹೇಳಿರಬೇಕು? ಎಂಬ ಕುತೂಹಲ ನಮಗೆ ಉಂಟಾಗುತ್ತದೆ. ಸ್ಥಾವರ ಜಂಗಮದ ಬಗ್ಗೆ ಬಸವಣ್ಣನವರು ಹೇಳಿದ ವಚನಗಳನ್ನು ಗಮನಿಸೋಣ:

ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ,
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ.
'ಸ್ಥಾವರ ಜಂಗಮ ಒಂದೆ' ಎಂದುದು ಕೂಡಲಸಂಗನ ವಚನ.'
ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ
ನಮ್ಮ ಶರಣರಿಗುರಿ[ಯ]ರಗಾಗಿ ಕರಗದನ್ನಕ್ಕ,
ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ.
ಕೂಡಲಸಂಗಮದೇವಾ,
ಬರಿಯ ಮಾತಿನ ಮಾಲೆಯಲೇನಹುದು

ಸ್ಥಾವರ ಜಂಗಮವೆಂಬ ಉಭಯ ಪಕ್ಷ ಒಂದೆ;
ಆವ ಮುಖದಲಿ ಬಂದಡೂ ತೃಪ್ತಿಯೊಂದೆ,
ಕೂಡಲಸಂಗಮದೇವರ ಆಪ್ಯಾಯನವೊಂದೆ.

ಆರಾಧನೆಯ ಮಾಡಿದಡೆ ಅಮೃತದ ಬೆಳಸು,
ವಿರೋಧಿಸಿದಡೆ ವಿಷದ ಬೆಳಸು,
ಇದು ಕಾರಣ ಜಂಗಮಕ್ಕೆ ಅಂಜಲೇಬೇಕು
ಸ್ಥಾವರ ಜಂಗಮ ಒಂದೆಂದರಿದಡೆ
ಕೂಡಲಸಂಗಮದೇವ ಶರಣಸನ್ನಿಹಿತ

ಇಂತಹ ವಚನಗಳನ್ನು ನೋಡಿದಾಗ ಅಲ್ಲಮಪ್ರಭುಗಳು ಹೇಳಿದ 'ಬಸವಣ್ಣನೊಬ್ಬನೇ ಇದನ್ನು ಬಲ್ಲವನು' ಎಂಬ ಮಾತಿಗೆ ಪುಷ್ಟಿ ಸಿಗುತ್ತದೆ. ಆದರೆ ಹಾಗೆ ನೋಡಿದರೆ ಬಸವಣ್ಣ ಅಷ್ಟೇ ಅಲ್ಲ ಇನ್ನೂ ಅನೇಕ ಶರಣರು ಇದನ್ನು ಪುಷ್ಟೀಕರಿಸಿದ್ದಾರೆ. ಚೆನ್ನಬಸವಣ್ಣನವರ ಈ ವಚನಗಳನ್ನು ನೋಡಿ:

ಲಿಂಗದಲ್ಲಿ ಆಯತ, ಲಿಂಗದಲ್ಲಿ ಸಾಹಿತ್ಯವಾಗಿದ್ದೆ ನಾನು,
ಪರಮಸುಖಪರಿಣಾಮದೊಳಗಿದ್ದೆ ನಾನು,
ಸ್ಥಾವರ ಜಂಗಮ ಉಭಯ ಒಂದಾಗಿ, ಭಿನ್ನಭಾವವ ವಿಚಾರಿಸಲಿಲ್ಲ,
ಕೂಡಲಚೆನ್ನಸಂಗಮದೇವರಲ್ಲಿ ಸ್ವಯವಾಗಿರ್ದೆ ಸಹಜ

ಉನ್ಮನಿಯ ಲೌಕಿಕದನುಸಂಧಾನವ ಪರಿಹರಿಸಲ್ಕೆ,
ತನುವಿನ ಕೊರತೆಯ ಕಳೆಯಲ್ಕೆ ಸ್ಥಾವರವಾಯಿತ್ತು,
ಮನದ ಕೊರತೆಯ ಕಳೆಯಲ್ಕೆ ಜಂಗಮವಾಯಿತ್ತು
'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ'
ಇಂತೆಂಬ ವಚನವು ಕೂಡಲಚೆನ್ನಸಂಗಯ್ಯನಲ್ಲಿ
ಸಮಯಾಚಾರಿಗಲ್ಲದೆ ಎಲ್ಲರಿಗೆಲ್ಲಿಯದೊ ?

ವೀರಶೈವ ತತ್ತ್ವಸಿದ್ಧಾಂತಗಳಿಗೆ ಶಿವಶರಣರು ಹೇಗೆ ಹೊಸ ಅರ್ಥವಂತಿಕೆಯನ್ನು ತಂದುಕೊಡುತ್ತಾರೆ ಎಂಬುದಕ್ಕೆ ಸ್ಥಾವರ ಜಂಗಮ ಪರಿಕಲ್ಪನೆಗಳಿಗೆ ಅವರು ಅನ್ವಯಿಸುವ ಸೂಕ್ಷ್ಮಾರ್ಥಗಳು ನಮ್ಮನ್ನು ನಿಬ್ಬೆರಗಾಗಿಸುತ್ತವೆ. ಸ್ಥಾವರ ಜಂಗಮಗಳಲ್ಲಿನ ಸೂಕ್ಷ್ಮಭೇದಗಳನ್ನು ಅಲ್ಲಮಪ್ರಭುಗಳು ಇಲ್ಲಿ ಎಷ್ಟು ಚೆನ್ನಾಗಿ ವಿಶ್ಲೇಷಿಸಿದ್ದಾರೆ ನೋಡಿ. ಆಚಾರವಿಲ್ಲದ ಜಂಗಮನೂ ಸ್ಥಾವರ ಅಂದರೆ ಜಡ. ಸ್ಥಾವರ ಒಂದು ವೇಳೆ ಭಕ್ತರಲ್ಲಿ ಚೈತನ್ಯವನ್ನು ನೀಡುವಂತಿದ್ದರೆ ಗುಡಿಯಲ್ಲಿ ಇದ್ದರೂ ಅದು ಶ್ರೇಷ್ಠವೇ (ಜಂಗಮವೇ). ಹಸ್ತದಲ್ಲಿರುವ ಇಷ್ಟಲಿಂಗವೂ ಶಿಲಾಲಿಂಗದ ಚಿಕ್ಕರೂಪವೇ. ಅದನ್ನು ಭಕ್ತಿಭಾವದಿಂದ ಪೂಜಿಸಿದರೆ ಮಾತ್ರ ಅದು ಶಿವಶಕ್ತಿಸಂಕೇತ(ಜಂಗಮ)ವೆನಿಸುತ್ತದೆ ಇಲ್ಲದಿದ್ದರೆ ಅದು ಕೇವಲ ಕಲ್ಲಿನ(ಜಡ)ಲಿಂಗ. ಗುಡಿಯಲ್ಲಿನ ಲಿಂಗಕ್ಕೂ ಹಸ್ತದಲ್ಲಿನ ಲಿಂಗಕ್ಕೂ ಆಕಾರ ಭೌತಿಕವಾಗಿ ವ್ಯತ್ಯಾಸವಿರುವುದಿಲ್ಲ. ಆದರೂ ಹಸ್ತದಲ್ಲಿ ಪೂಜಿಸಿಕೊಳ್ಳುವ ಲಿಂಗ ಗುರುವಿನಿಂದ

ಸಂಸ್ಕಾರರೂಪದಲ್ಲಿ ಭಕ್ತನಿಗೆ ಬಂದಿರುವಂಥದ್ದು. ಆ ದೃಷ್ಟಿಯಿಂದ ಇಷ್ಟಲಿಂಗ ಹೆಚ್ಚು ಮಹತ್ವದ್ದು. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಅದೆಂದರೆ ಇಷ್ಟ ಅಥವಾ ಸ್ಥಾವರ ಯಾವುದೇ ಲಿಂಗವನ್ನು ಪೂಜಿಸಿದರೂ ಸೋಂಕಿನಸುಖದ ಅನುಭವ ಭಕ್ತನಿಗೆ ಒಂದೇ ಆಗಿರುತ್ತದೆ. ಬೇಡರಕಣ್ಣಪ್ಪ, ಕೋಳೂರುಕೊಡಗೂಸು ಮುಂತಾದವರು ೬೩ ಪುರಾತನರು ಲಿಂಗದೊಂದಿಗೆ ಅನುಭವಿಸಿದ ಸೋಂಕಿನಸುಖ ಮತ್ತು ಅಲ್ಲಮಪ್ರಭು, ಬಸವಣ್ಣ, ಆದಯ್ಯ, ಉರಿಲಿಂಗಪೆದ್ದಿ ಮುಂತಾದ ಶರಣಸಂದೋಹದವರು ಅನುಭವಿಸಿದ ಸೋಂಕಿನಸುಖ ಬೇರೆ ಎನಿಸುವುದಿಲ್ಲ. ಎರಡಕ್ಕೂ ಮಹತ್ವವುಂಟಾಗುವುದು. ಅವು ಭಕ್ತರ ಮನದಲ್ಲಿ ಮೂಡುವುದರ ಮೂಲಕವೇ ಹೊರತು ಅವು ತಮ್ಮಷ್ಟಕ್ಕೆ ತಾವೇ ಜಂಗಮವಾಗಲಾರವು. ಅವು ಪೂಜ್ಯವಸ್ತುವಾಗಿ ಜಂಗಮವಾಗಲು ಭಕ್ತಿಯ ಭಾವವು (ಸೋಂಕು) ಮುಖ್ಯವೇ ಹೊರತು ಬೇರೆ ಅಲ್ಲ. ಇದೇ ಕಾರಣವಾಗಿ ಭಾವಹೀನವಾದ ಪೂಜೆ ಸ್ಥಾವರಕ್ಕಿರಲಿ ಜಂಗಮಕ್ಕಿರಲಿ ವ್ಯರ್ಥವೇ ಆಗುತ್ತದೆ. ಅಂಥಲ್ಲಿ ಸ್ಥಾವರ ಎಂಬುದರ ಅರ್ಥ ಜಡ, ಅಥವಾ ಸ್ಥಗಿತತೆ ಎಂದಾಗುತ್ತದೆ. ಜಡವಾದರೆ ಜಂಗಮವೇ ಇರಲಿ, ಸ್ಥಾವರವೇ ಇರಲಿ ಎರಡೂ ಮಹತ್ವವನ್ನು ಕಳೆದುಕೊಳ್ಳುತ್ತವೆ. ಚೈತನ್ಯಶೀಲವೆನಿಸಿದರೆ ಶಕ್ತಿಸಂಕೇತವಾದರೆ ಎರಡೂ ಶ್ರೇಷ್ಠವೆನಿಸುತ್ತವೆ. ಆಗ ಸ್ಥಾವರಜಂಗಮ ಒಂದೆ ಎಂಬ ಬಸವಣ್ಣನವರ ವಿಚಾರ ಹೊಂದುತ್ತದೆ. ಚೆನ್ನಬಸವಣ್ಣನವರ ವಿಚಾರವೂ ಹೊಂದುತ್ತದೆ.

ಹೀಗೆ ಶಿವಶರಣರು ಸ್ಥಾವರ ಮತ್ತು ಜಂಗಮದ ಬಗ್ಗೆ ಬಹು ಸ್ಪಷ್ಟವಾದ ಪರಿಕಲ್ಪನೆಯನ್ನು ಹೊಂದಿದ್ದರು. ಅವರು ಆಗಮಗಳಲ್ಲಿ ಹೇಳಿದಂತೆ ಸ್ಥಾವರವನ್ನು ತಿರಸ್ಕರಿಸಿದ್ದೂ ಸತ್ಯ. ಆದರೆ ಅದಕ್ಕೆ ವಿರುದ್ಧವಾಗಿ ಪುರಸ್ಕರಿಸಿದ್ದೂ ಕಂಡುಬರುತ್ತದೆ. ಆದರೆ ಶೈವರ ರೀತಿಯಲ್ಲಿ ಸ್ಥಾವರವನ್ನು ಶರಣರು ಸಂಪೂರ್ಣ ನೆಚ್ಚಿಕೊಂಡಿಲ್ಲ. ಅಂದರೆ ಸ್ಥಾವರವನ್ನು ಸಂಪೂರ್ಣವಾಗಿ ತಿರಸ್ಕರಿಸದೆ ಚರಲಿಂಗವನ್ನೇ ನಂಬಿದ ಒಂದು ರೀತಿಯ ಭಕ್ತಿಸಮನ್ವಯದ, (ಅಲ್ಲಮಪ್ರಭುಗಳು ಹೇಳುವಂತೆ) 'ಸೋಂಕಿನಸುಖ'ದ ಹೊಸ ಮಾರ್ಗವನ್ನು ಹಿಡಿದಿರುವಂತೆ ಭಾಸವಾಗುತ್ತದೆ. ಬಸವಣ್ಣನವರು ಸ್ಥಾವರ ಕೂಡಲಸಂಗಮದೇವನನ್ನು ಪೂಜಿಸಿದರೂ ತನ್ನ ಇಷ್ಟಲಿಂಗವನ್ನು ಕಡೆಗಣಿಸುವುದಿಲ್ಲ. ಈ ಮಾತುಗಳಿಗೆ ಬಸವಣ್ಣ ಆದಯ್ಯ ಮುಂತಾದ ಕೆಲವು ಶರಣರನ್ನು ಬಿಟ್ಟು ಎಲ್ಲ ಶಿವಶರಣರನ್ನೂ ಸಾಕ್ಷಿಯಾಗಿಸುವುದು ಸಾಧ್ಯವಿಲ್ಲ. ಯಾಕೆಂದರೆ ಆಗಮಗಳಲ್ಲಿಯಂತೆ ಸ್ಥಾವರವನ್ನು ತಿರಸ್ಕರಿಸಿ ಇಷ್ಟಲಿಂಗ ಪಾರಮ್ಯವನ್ನೇ ಎತ್ತಿಹಿಡಿದ ಅನೇಕ ವಚನಗಳು ದೊರೆಯುತ್ತವೆ. ಇದರರ್ಥ ಸ್ಥಾವರವನ್ನು ಜಡತೆ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕು ಎಂಬುದನ್ನು ಮೇಲೆ ನೋಡಿದ್ದೇವೆ. ದೇವಾಲಯವೊಂದು ಲಕ್ಷಾಂತರ ಜನರಿಗೆ ದೈವೀಭಕ್ತಿಯ ಚೈತನ್ಯಶಕ್ತಿಯ

ಅನುಭವವನ್ನು ಉಂಟುಮಾಡುವಂತಿದ್ದರೆ ಒಂದರ್ಥದಲ್ಲಿ ಅದು ನಿಜಕ್ಕೂ ಜಂಗಮವೇ. ಅಲ್ಲಿ ಮನದಮೊನೆಯ ಚೈತನ್ಯಶಕ್ತಿ ಮಾನವರಲ್ಲಿ ಹರಿಯುತ್ತ ಸ್ಥಾವರವನ್ನು ನಿರಂತರ ಜಂಗಮವಾಗಿಸುತ್ತದೆ. ಸೋಂಕಿನಸುಖದ ಅನುಭವವೇ ಅಲ್ಲಿ ಪ್ರಧಾನವಾಗಿ ನಿಲುವಂಥದ್ದು. ಈ ದೃಷ್ಟಿಯಿಂದ ಹಿಂದಿನ ಮತ್ತು ಇಂದಿನ ಎಷ್ಟೋ ಮಹಾತ್ಮರ ಸಮಾಧಿಗಳು, ಗದ್ದುಗೆಗಳು, ಮಠಮಾನ್ಯಗಳು, ದೇವಾಲಯ ಗಳು, ಸ್ಮಾರಕಗಳು ಸೋಂಕಿನಸುಖದ ಭಕ್ತಿಕಾರಣವಾಗಿ ಜಂಗಮವಾಗಲೂಬಹುದು. ಒಂದು ವೇಳೆ ಅದೇ ದೇವಾಲಯ ಮುಂತಾದವುಗಳು ಚೈತನ್ಯಭಕ್ತಿಯ ಶಕ್ತಿಕೇಂದ್ರಗಳಾಗದೆ ಸ್ವಾರ್ಥಿಗಳ, ಶೋಷಕರ ಬೀಡಾದರೆ ಅವು ಜಡವಾಗುತ್ತವೆ. ಆದ್ದರಿಂದ ಸ್ಥಾವರವೆಂಬುದು ಜಡವೂ (ಸ್ಥಗಿತ) ಆಗಬಹುದು, ಜಂಗಮವೂ ಆಗಬಹುದು. ಅದೇ ರೀತಿ ಒಬ್ಬ ಇಷ್ಟಲಿಂಗಧಾರಿಯು ಲಿಂಗವನ್ನು ಕಟ್ಟಿಕೊಂಡಿದ್ದರೂ ದುರಾಚಾರಿಯಾದರೆ, ಅಥವಾ ಕೊರಳಲಿಂಗವನ್ನು ಗೂಟಕ್ಕೆ ಜೋತುಬಿಟ್ಟರೆ, ಜಗಲಿಯಮೇಲೆ ಇಟ್ಟುಬಿಟ್ಟರೆ ಅದು ಜಡವಾಗುತ್ತದೆ ಅದು ಅವನಿಗೆ ಸೋಂಕಿನ ಸುಖದ ಭಕ್ತಿಯ ಶಕ್ತಿಯಾಗಿ ಪರಿಣಮಿಸುವುದಿಲ್ಲ. ಪ್ರಾಯಃ ಇದೇ ವಿಚಾರವನ್ನು ಅಲ್ಲಮಪ್ರಭುಗಳು ಚೆನ್ನಬಸವಣ್ಣನವರು ಬಸವಣ್ಣನವರು ಸ್ಥಾವರಜಂಗಮಗಳಿಗೆ ಅನ್ವಯಿಕವಾಗಿ ಹೇಳಿದ್ದಾರೆ. ಘಟ್ಟಿವಾಳಯ್ಯನೆಂಬ ಶರಣ ಈ ವಿಚಾರವನ್ನು ಇನ್ನಷ್ಟು ವಿಸ್ತರಿಸಿ –

> ಸ್ಥಾವರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಶೈವಲಿಂಗ
> ಚರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಇಷ್ಟಲಿಂಗ
> ಅರಿವಿನ ಮನದ ಕೊನೆಯಲ್ಲಿ ನಿತ್ಯನಿವಾಸವಾಗಿ
> ಪೂಜಿಸಿಕೊಂಬುದು ವೀರಶೈವಲಿಂಗ
> ಇಂತೀ ಲಿಂಗತ್ರಯದ ಆದಿ ಆಧಾರವನರಿಯದೆ
> ಹೋದರಲ್ಲಾ ಹೊಲಬುದಪ್ಪಿ
> ಇನ್ನಾರಿಗೆ ಹೇಳುವೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ (ಘಟ್ಟಿವಾಳಯ್ಯ)

ಎಂದು ಹೇಳಿರುವಲ್ಲಿ ಅಲ್ಲಮಪ್ರಭುಗಳು ಹೇಳಿದ ಸೋಂಕಿನಸುಖ ವೀರಶೈವಲಿಂಗ ದಲ್ಲಿ ಉಂಟು. ಇದರ ಮರ್ಮ ತಿಳಿಯದೇ ಹೋದರಲ್ಲಾ ಎಂದು ಹಳಹಳಿಸುತ್ತಾನೆ. ಸೋಂಕಿನಸುಖದ ಕಾರಣವಾಗಿ ಸ್ಥಾವರಜಂಗಮಗಳಲ್ಲಿ ಬಸವಣ್ಣ ಮುಂತಾದವರು ಅಭಿನ್ನತೆಯನ್ನು ಆಚರಿಸಿದರೂ ಅನೇಕ ಶಿವಶರಣರು ಇದನ್ನು ಒಪ್ಪುತ್ತಿರಲಿಲ್ಲ ಎಂಬುದಕ್ಕೆ ಅನೇಕ ವಚನಗಳು ಸಿಗುತ್ತವೆ. ಉದಾಹರಣೆಗೆ ಮಡಿವಾಳಮಾಚಯ್ಯನ ಈ ವಚನ ನೋಡಿ:

> ಕಲ್ಯಾಣಪಟ್ಟಣದಲ್ಲಿ ಕಲಕೇತಯ್ಯಗಳು
> ಕಿನ್ನರಯ್ಯಗಳ ಸ್ಥಾವರದೈವದ ಸೇವೆ, ಯಾಚಕತ್ವವ ಬಿಡಿಸಿ,
> ಗುರು ಕೊಟ್ಟ ಇಷ್ಟಲಿಂಗದಲ್ಲಿ ನಿಷ್ಠೆಯ ಗಟ್ಟಿಗೊಳಿಸಿ,
> ಘನವೀರಶೈವದ ಬಟ್ಟೆಯನರುಹಿದರೆಂಬುದ ಕೇಳಿ ನಂಬದೆ,

ಸೃಷ್ಟಿಯ ಪ್ರತಿಷ್ಠೆಗೆ ಶರಣೆಂದಡೆ, ಮೆಟ್ಟುವ ನರಕದಲ್ಲಿ ಕಲಿದೇವಯ್ಯ

ಇದೇ ಕಾಲಕ್ಕೆ ಬಸವಣ್ಣನವರಂತೆ ಸ್ಥಾವರಜಂಗಮಗಳ ಸಮನ್ವಯ ಭಕ್ತಿಯನ್ನು ಸಮರ್ಥಿಸುವ ಶರಣರೂ ಇದ್ದರು. ಉದಾಹರಣೆಗೆ ಉರಿಲಿಂಗಪೆದ್ದಿಗಳು ಕೆಲವೆಡೆ ಇಷ್ಟಲಿಂಗಾರಾಧನೆ ಸರಿಯೆ ಆದರೆ ಸ್ಥಾವರ ಪೂಜಿಸಿದರೆ ತಪ್ಪೇನು? ಭಕ್ತಿ ಎಂಬುದು ಶಿವನನ್ನು ಸ್ಥಾವರದಲ್ಲಿಯೂ ಕಾಣುವಂತೆ ಮಾಡಬಲ್ಲುದು ಜಂಗಮದಲ್ಲಿಯೂ ಕಾಣುವಂತೆ ಮಾಡಬಲ್ಲುದು. ಹಿಂದಿನವರು ಸ್ಥಾವರ ಪೂಜಿಸಿ ಶ್ರೇಷ್ಠರಾಗಿಲ್ಲವೆ? ಎಷ್ಟೋ ಋಷಿಮುನಿಗಳು ಮುಕ್ತಿಯನ್ನು ಪಡೆದಿಲ್ಲವೇ? ಅವರೆಲ್ಲ ದಡ್ಡರು ನೀನೊಬ್ಬನೇ ಜಾಣನೇ? ಎಂದು ಪ್ರಶ್ನೆ ಮಾಡುತ್ತಾರೆ:

......
ಅನೇಕ ಜನ್ಮದ ಪಾಪಂಗಳು ಸವೆದು, ಶ್ರೀಗುರುಕಾರುಣ್ಯಮಂ ಪಡೆದು
ಶಿವಭಕ್ತನಾಗಿ ಶಿವಲಿಂಗವಂ ಧರಿಸಿ, ಶಿವಲಿಂಗದರ್ಶನಸ್ಪರ್ಶನಂ ಮಾಡಿ
ಇಷ್ಟಲಿಂಗ ಪ್ರಾಣಲಿಂಗಸಂಬಂಧ, ಅಂತರಂಗ ಬಹಿರಂಗ ಸರ್ವಾಂಗವಾದ ಬಳಿಕ
ಮರಳಿ ಆತ್ಮತತ್ತ್ವವ ವಿಚಾರಿಸಿ,
ಪರಮಾತ್ಮನಲ್ಲಿ ಯೋಗವ ಮಾಡಿ ಯೋಗಿಗಳಾದೆವೆಂಬಿರಿ.
........
ದೂರ್ವಾಸ, ಅಗಸ್ತ್ಯ, ಭೃಗು, ದಧೀಚಿ, ಮಾರ್ಕಂಡೇಯ
ಮೊದಲಾದ ಋಷಿಜನಂಗಳೆಲ್ಲರೂ
ಶಿವಲಿಂಗಪ್ರತಿಷ್ಠೆಯ ಮಾಡಿ ಶಿವಲಿಂಗಾರ್ಚನೆಯಂ ಮಾಡಿದರು.
ಇವರೆಲ್ಲರು ಮರುಳುಗಳು, ನೀನೊಬ್ಬನೇ ಬುದ್ಧಿವಂತನೇ?
ಕೆಡದಿರು ಕೆಡದಿರು.
ಮತ್ತೆ ವಿಷ್ಣು ಬ್ರಹ್ಮ ಇಂದ್ರ ಮೊದಲಾಗಿ
ಶಿವಲಿಂಗಪ್ರತಿಷ್ಠೆಯಂ ಮಾಡಿ ಶಿವಲಿಂಗಾರ್ಚನೆಯಂ ಮಾಡಿದರು.
ಇವರು ಮಾಡಿದುದಕ್ಕೆ ದೃಷ್ಟವ ನೋಡಿರೆ:
ಮತ್ಸ್ಯಕೇಶ್ವರ, ಕೂರ್ಮೇಶ್ವರ, ಮಾಹೇಶ್ವರ, ರಾಮೇಶ್ವರವೆಂದು
ಲಿಂಗಪ್ರತಿಷ್ಠೆಯಂ ಮಾಡಿ ಶಿವಲಿಂಗಾರ್ಚನೆಯಂ ಮಾಡಿದರು.
ಇವರುಗಳೆಲ್ಲರು ಮರುಳರು, ನೀನೊಬ್ಬನೇ ಬುದ್ಧಿವಂತನೇ?
ಕೆಡದಿರು ಕೆಡದಿರು.
ಹರಿಶ್ಚಂದ್ರ ಮೊದಲಾದ ಚಕ್ರವರ್ತಿಗಳು
ಶಿವಲಿಂಗಪ್ರತಿಷ್ಠೆಯಂ ಮಾಡಿ ಶಿವಲಿಂಗಾರ್ಚನೆಯಂ ಮಾಡಿದರು.
ಇವರು ಮಾಡಿದುದಕ್ಕೆ ದೃಷ್ಟವ ನೋಡಿರೆ:
ಕಾಶೀಪುರದಲ್ಲಿ ಇಂದ್ರೇಶ್ವರ, ಬ್ರಹ್ಮೇಶ್ವರ, ಯಕ್ಷಸಿದ್ಧೇಶ್ವರವೆಂದು
ಲಿಂಗಪ್ರತಿಷ್ಠೆಯಂ ಮಾಡಿ ಶಿವಲಿಂಗಾರ್ಚನೆಯ ಮಾಡಿದರು.
ಇವರೆಲ್ಲರೂ ಮರುಳುಗಳು, ನೀನೊಬ್ಬನೇ ಬುದ್ಧಿವಂತನೇ?
ಕೆಡದಿರು, ಕೆಡದಿರು.
ತಾರಕಾಸುರ ರಾವಣಾದಿಗಳೆಲ್ಲರೂ
ಶಿವಲಿಂಗಪ್ರತಿಷ್ಠೆಯಂ ಮಾಡಿ, ಶಿವಲಿಂಗಾರ್ಚನೆಯಂ ಮಾಡಿದರು.
ಇವರೆಲ್ಲರೂ ಮರುಳುಗಳು, ನೀನೊಬ್ಬನೇ ಬುದ್ಧಿವಂತನೇ?

ಇದು ಕಾರಣ,
ಶ್ರೀಗುರುವೆ ಅಧಿಕ, ಶಿವಲಿಂಗವೇ ಅಧಿಕ
ಶಿವಲಿಂಗಾರ್ಚನೆಯೇ ಅಧಿಕ, ಆ ಸಂಗವೇ ಸಂಗ,
ಶ್ರೀಗುರುಲಿಂಗಜಂಗಮದ ಪೂಜೆಯೇ ಪೂಜೆ,
ಅರ್ಚನೆಯೇ ಅರ್ಚನೆ, ಆ ಸಂಗವೇ ಸಂಗ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (ವ.ಸಂ. ೧೩೮೩)

ಹಾಗೆ ನೋಡಿದರೆ ಆತ್ಮಾನುಸಂಧಾನಕ್ಕೆ ಸ್ಥಾವರಕ್ಕಿಂತ ಇಷ್ಟಲಿಂಗವೇ ಶ್ರೇಷ್ಠ ಎಂಬುದನ್ನು ವೀರಶೈವ ಗಟ್ಟಿಯಾಗಿ ಪ್ರತಿಪಾದಿಸಿದೆ. ಸ್ಥಾವರಲಿಂಗಕ್ಕಿಂತ ಜಂಗಮಲಿಂಗ ಶ್ರೇಷ್ಠ ಎಂದು ವೀರಾಗಮ, ಸಿದ್ಧಾಂತಶಿಖಾಮಣಿಯೂ ಪ್ರತಿಪಾದಿಸಿದ್ದನ್ನು ಮೇಲೆ ನೋಡಿದ್ದೇವೆ. ವೀರಾಗಮವಂತೂ ಅತಿ ಖಡಕ್ ಆಗಿ ಸ್ಥಾವರಲಿಂಗಪೂಜೆಯನ್ನು ಖಂಡಿಸಿದ್ದನ್ನು ಕಾಣಬಹುದು.

ಇಷ್ಟೆಲ್ಲ ಚರ್ಚೆಯ ನಂತರ ಸ್ಥಾವರಜಂಗಮಗಳ ಬಗ್ಗೆ ಬಸವಾದಿ ಶಿವಶರಣರು ವಿಭಿನ್ನ ವಿಚಾರಗಳನ್ನು ಹೊಂದಿ ತಮತಮಗೆ ಅನುಕೂಲವಾದಂತೆ ನಡೆದಿರುವಾಗ ನಾವು ಯಾವ ನಿರ್ಣಯಕ್ಕೆ ಬರಬೇಕು? ಎಂಬುದನ್ನು ತೋಂಟದ ಸಿದ್ಧಲಿಂಗಯತಿ ವರ್ಯರ ವಚನ ದಾರಿ ತೋರುತ್ತದೆ:

ಸ್ಥಾವರ ಜಂಗಮಾತ್ಮಕಂಗಳ ಲಯ ಗಮನಂಗಳಿಗೆ
ಅಧಿಷ್ಠಾನ ಕರ್ತೃ ಶಿವನೆಂದರಿಯದವಂಗೆ ಶಿವಜ್ಞಾನವೆಲ್ಲಿಯದೋ?
ಸಮಸ್ತಾತ್ಮರಿಗೆ ಸರ್ವಪ್ರೇರಕ ಸರ್ವಚೈತನ್ಯ ಸರ್ವವ್ಯಾಪಕ
ಸರ್ವಮಯನು ಸರ್ವಜ್ಞನೊಬ್ಬನೆ ಸರ್ವಕಾರಣ
ಹೀಗೆಂಬುದು ಪರಮಾರ್ಥವಲ್ಲದೆ
ಉಳಿದವೆಲ್ಲಾ ಜೀವಭಾವ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

□

# ವಾರ್ತಾವಿಹಾರ

## ಬಸವ ಜಯಂತಿ ಮತ್ತು ಸಂಸದರು, ಸಚಿವರು ಹಾಗೂ ಶಾಸಕರಿಗೆ ಸನ್ಮಾನ

ಅಖಿಲ ಭಾರತ ವೀರಶೈವ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗ ಒಕ್ಕೂಟಗಳು ಆಗಸ್ಟ್ 4 ಮತ್ತು 5 ರಂದು ಎರಡು ದಿನ ಮೈಸೂರಿನ ಶ್ರೀ ಸುತ್ತೂರು ಶಾಖಾ ಮಠದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಮತ್ತು ಸಂಸದರು, ಸಚಿವರು ಮತ್ತು ಶಾಸಕರುಗಳಿಗೆ ಸನ್ಮಾನ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಎನ್. ಮಹೇಶ್‌ರವರು ದೇಶದಲ್ಲಿ ನಡೆದ ಎಲ್ಲಾ ಸಮಾನತೆಯ ಚಳವಳಿಗಳು ಶಾಂತಿ ಹಾಗೂ ಸೌಹಾರ್ದತೆ ಸ್ಥಾಪನೆಗಾಗಿ ನಡೆದಿವೆ. 12ನೆಯ ಶತಮಾನದಲ್ಲಿ ಬಸವಾದಿ ಶರಣರು ಜಾತಿವ್ಯವಸ್ಥೆ, ಅರ್ಥವ್ಯವಸ್ಥೆ. ಲಿಂಗತಾರತಮ್ಯಗಳ ವಿರುದ್ಧ ಧಾರ್ಮಿಕ ಮತ್ತು ಸಾಮಾಜಿಕ ಚಳವಳಿ ನಡೆಸಿದರು. ಅದಕ್ಕೂ ಮುನ್ನ ಬುದ್ಧ ಈ ನೆಲದಲ್ಲಿ ಸಮಾನತೆಯ ಸಂದೇಶ ಸಾರಿದರು. ಆಧುನಿಕ ಯುಗದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್‌ರವರು ಸಮಾಜದಲ್ಲಿ ಸಮಾನತೆ ತರಲು ಹೋರಾಟ ನಡೆಸಿದ್ದಾಗಿ ತಿಳಿಸುತ್ತಾ ಈ ಚಳವಳಿಗಳಲ್ಲಿನ ಚಿಂತನೆಗಳು ನಮಗೆ ದಾರಿದೀಪವಾಗಬೇಕಿದೆ ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರು 12ನೆಯ ಶತಮಾನದ ಅನುಭವ ಮಂಟಪದಲ್ಲಿ ದಲಿತರು, ಹಿಂದುಳಿದವರು, ಮಹಿಳೆಯರನ್ನೂ ಸೇರಿಸಿ ಸಮಾನತೆ ಸಾರಿದ ಬಸವಣ್ಣನವರು ಮೌಢ್ಯದ ವಿರುದ್ಧ ಹೋರಾಡಿ, ಕಾಯಕವೇ ಕೈಲಾಸ ಎನ್ನುವ ಮೂಲಕ ಕಾಯಕ ಮತ್ತು ದಾಸೋಹವನ್ನು ಮಾಡುವಂತೆ ಕರೆ ನೀಡಿ, ಜಗತ್ತಿಗೆ ಮಾನವೀಯ ಮೌಲ್ಯ ತೋರಿಸಿಕೊಟ್ಟಿದ್ದಾಗಿ ತಿಳಿಸಿದರು.

ಸಮಾರಂಭಕ್ಕೂ ಮೊದಲು ಬಸವೇಶ್ವರರ ಪುತ್ಥಳಿಯ ಮೆರವಣಿಗೆಗೆ ರಾಜ್ಯ ಬಿಜೆಪಿ ಯುವಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ವೈ. ವಿಜಯೇಂದ್ರ ಚಾಲನೆ ನೀಡಿದರು. ದಂಡಿಕೆರೆ ಮಠದ ಶ್ರೀ ಬಸವಲಿಂಗ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಇತ್ತೀಚಿನ ದಿನಗಳಲ್ಲಿ ಧರ್ಮ ಮತ್ತು ದಾರ್ಶನಿಕರನ್ನು ಜಾತಿಗೆ ಸೀಮಿತಗೊಳಿಸುವ ಪ್ರಯತ್ನ ನಡೆಯುತ್ತಿದೆ, ಇದು ದುರ್ದೈವದ ಸಂಗತಿ. ಇನ್ನಾದರೂ ನಮ್ಮ ಸಮುದಾಯ ಇಂತಹ ರಾಜಕೀಯ ಕುತಂತ್ರಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ವೀರಶೈವ ಮಹಾಸಭಾದ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಡಾ. ಶಾಮನೂರು ಶಿವಶಂಕರಪ್ಪನವರು ಸನ್ಮಾನವನ್ನು ಸ್ವೀಕರಿಸಿ, ವೀರಶೈವ ಅಥವಾ ಲಿಂಗಾಯತ ಎಂಬ ಭೇದಗಳು ನಮ್ಮಲ್ಲಿರುವ ಬೃಹತ್ ಸಾಮರ್ಥ್ಯವನ್ನು ಒಡೆಯುವ ತಂತ್ರಗಳಾಗಿವೆ. ಇದು ತಾತ್ಕಾಲಿಕ ಮಾತ್ರ. ನಾವೆಲ್ಲರೂ ಒಗ್ಗಟ್ಟಿನಿಂದಲೇ ಇರುತ್ತೇವೆ ಎಂದು ನುಡಿದರು.

ವೀರಶೈವ, ಲಿಂಗಾಯತ ಎಂಬ ವಿಭಜನೆಗಳಿಗಿಂತ ಐಕ್ಯತೆಯಲ್ಲಿಯೇ ಸಮಾದ ಬಹುದೊಡ್ಡ ಯಶಸ್ಸಿದೆ. ಅಂತಹ ಯಶಸ್ಸಿನ ಪರಂಪರೆಯನ್ನು ಮುಂದುವರಿಸಬೇಕೆಂಬ ಅಭಿಪ್ರಾಯಗಳನ್ನು ವೀರಶೈವ ಮಹಾಸಭಾದ ಕಾರ್ಯಾಧ್ಯಕ್ಷರಾದ ಶ್ರೀ ಎನ್. ತಿಪ್ಪಣ್ಣ, ಶಾಸಕರಾದ ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಬಿ.ಸಿ. ಪಾಟೀಲ್, ಶ್ರೀ ಅಶೋಕ್ ಖೇಣಿ ಮೊದಲಾದವರು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸಂಸದರು, ಸಚಿವರು ಹಾಗೂ ಶಾಸಕರುಗಳನ್ನು ಸನ್ಮಾನಿಸಲಾಯಿತು.

ಶ್ರೀ ಸಿದ್ಧಗಂಗಾಮಠದ ಕಿರಿಯ ಶ್ರೀಗಳು, ಮೈಸೂರಿನ ಹೊಸಮಠದ ಶ್ರೀಗಳು, ಶಾಸಕರುಗಳಾದ ಶ್ರೀ ಮಹಾಂತೇಶ್ ಮಲ್ಲಿಕಾರ್ಜುನ್ ಕವಟಗಿಮಠ, ಶ್ರೀ ವೀರಣ್ಣ ಚರಂತಿಮಠ, ಶ್ರೀ ಎಂ.ಪಿ. ರೇಣುಕಾಚಾರ್ಯ, ಶ್ರೀ ಸಿ.ಎಂ. ಉದಾಸಿ ಮುಂತಾದವರು ಉಪಸ್ಥಿತರಿದ್ದರು.

## ಯಕ್ಷೋತ್ಸವದ ಉದ್ಘಾಟನೆ ಮತ್ತು ಚಿಟ್ಟಾಣಿ ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ 10.8.2018 ರಂದು ನಗರದ ಕಲಾಮಂದಿರದಲ್ಲಿ ಇನ್ನೋವೇಟಿವ್ ಸಂಸ್ಥೆ ಹಮ್ಮಿಕೊಂಡಿದ್ದ ಯಕ್ಷೋತ್ಸವ ಮತ್ತು ಚಿಟ್ಟಾಣಿ ಪ್ರಶಸ್ತಿ ಪ್ರದಾನ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ವಿಶ್ವದ ಯಾವುದೇ ಭಾಗದಲ್ಲಿ ಇರುವ ಕರಾವಳಿ ನಾಡಿನ ಜನತೆ ತಮ್ಮ ನಾಡಿನ ಕಲೆ ಸಂಸ್ಕೃತಿಯನ್ನು ಪ್ರೀತಿಸುತ್ತಾರೆ. ಆ ಭಾಗದ ಬಹುತೇಕ ಗ್ರಾಮಗಳಲ್ಲಿ ಇಂದಿಗೂ ಒಂದಲ್ಲ ಒಂದು ಕಡೆ ಯಕ್ಷಗಾನದ ಚಂಡೆಮದ್ದಳೆಗಳ ದನಿ ಕೇಳುತ್ತಿರುತ್ತದೆ. ಈ ಪಾರಂಪರಿಕ ಕಲೆ ಮತ್ತು ಸಂಸ್ಕೃತಿಗಳಿಗೆ ಮನದ ದುಗುಡವನ್ನು ದೂರ ಮಾಡುವ ಗುಣಗಳಿವೆ. ಜನತೆಯ ಪ್ರೋತ್ಸಾಹ ದೊರೆಯದೇ ಇದ್ದಲ್ಲಿ ಕಲೆಗಳು ಬೆಳೆಯಲು ಸಾಧ್ಯವಿಲ್ಲ. ಹಾಗಾಗಿ ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಕಾರ ನೀಡುವ

ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಯಕ್ಷೋತ್ಸವದಲ್ಲಿ ಯಕ್ಷಗಾನ ಕಲಾವಿದ ಶ್ರೀ ಎಸ್.ಎನ್. ಪಂಚಾಜೆಯವರಿಗೆ ಚಿಟ್ಟಾಣಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಾಹಿತಿಗಳಾದ ಡಾ. ಕಬ್ಬಿನಾಲೆ ವಸಂತಭಾರದ್ವಾಜ್, ಪ್ರೊ. ಜಿ.ಎಸ್. ಭಟ್ಟ, ಡಾ. ಎಸ್.ಎನ್. ಹೆಗಡೆ, ಶ್ರೀ ಹೇರಂಭ ಆರ್. ಭಟ್ಟ ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಡಿ.ಎನ್. ಲೋಕಪ್ಪ-70 ಅಭಿನಂದನಾ ಸಮಾರಂಭ

ದಿನಾಂಕ 19.8.2018 ರಂದು ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಡಿ.ಎನ್. ಲೋಕಪ್ಪನವರಿಗೆ ಅಭಿನಂದನೆ ಹಾಗೂ ಲೋಕಪ್ರಿಯ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭವು ಶ್ರೀ ಸುತ್ತೂರು ಜಗದ್ಗುರುಗಳು ಹಾಗೂ ಶ್ರೀ ತರಳಬಾಳು ಬೃಹನ್ಮಠದ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಪರಮಪೂಜ್ಯ ಜಗದ್ಗುರುಗಳು ಶ್ರೀ ರಾಜೇಂದ್ರ ಪ್ರಿಂಟರ್ಸ್ ಮಾಲೀಕರಾಗಿ ಮುದ್ರಣ ಕ್ಷೇತ್ರದಲ್ಲಿ ತೊಡಗಿದ ಶ್ರೀ ಡಿ.ಎನ್. ಲೋಕಪ್ಪನವರು ಹಂತಹಂತವಾಗಿ ಪುಸ್ತಕ ಪ್ರಕಾಶನ ಕ್ಷೇತ್ರಕ್ಕೂ ಸೇವೆಯನ್ನು ವಿಸ್ತರಿಸಿಕೊಂಡು ನಾಡಿನ ಹೆಸರಾಂತ ಹಿರಿಯ ಹಾಗೂ ಯುವ ಲೇಖಕರ ಕೃತಿಗಳನ್ನು ಪ್ರಕಟಿಸುತ್ತ ಬಂದಿರುವುದು ಸಾಹಿತ್ಯ ಸಂಸ್ಕೃತಿಗೆ ಸಂದ ದೊಡ್ಡ ಕೊಡುಗೆಯಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಕತೆ, ಕಾದಂಬರಿ, ನಾಟಕ, ವಿಮರ್ಶೆ ಮುಂತಾದ ಅನೇಕ ಪ್ರಕಾರದ ಕೃತಿಗಳು ಇವರ ಸಂಸ್ಥೆ ಯಿಂದ ಲೋಕಾರ್ಪಣೆಗೊಂಡಿವೆ. ವ್ಯಾಪಾರಿ ದೃಷ್ಟಿಕೋನಕ್ಕೆ ಹೊರತಾಗಿ ಸೇವಾ ಮನೋಭಾವನೆಯನ್ನು ರೂಢಿಸಿಕೊಂಡ ಲೋಕಪ್ಪನವರು ಹಾಗೂ ಕುಟುಂಬದವರ ಸರಳ ಸ್ವಭಾವ ಅವರ ಯಶಸ್ಸಿಗೆ ಕಾರಣಗಳಾಗಿವೆ ಎಂದು ಶುಭ ಹಾರೈಸಿದರು.

ಶಾಂತ ಸ್ವಭಾವದ ಲೋಕಪ್ಪನವರು ಕಾಲೇಜು ಲೈಬ್ರರಿಯಲ್ಲಿ ಗ್ರಂಥಪಾಲಕರಾಗಿ ವೃತ್ತಿಜೀವನ ಆರಂಭಿಸಿದವರು. ಅಲ್ಲಿಂದ ಹೊರಬಂದರೂ ಆ ಕೆಲಸದ ಪರಿಣಾಮವಾಗಿ ಅವರಿಗೆ ಪುಸ್ತಕಗಳ ಮೌಲ್ಯ ಮತ್ತು ಅವುಗಳ ಮೇಲಿನ ಪ್ರೀತಿ ಮೂಡಿದೆ. ಶರಣ ಸಂಸ್ಕೃತಿಯ ಚೌಕಟ್ಟಿನಲ್ಲಿ ಕೌಟುಂಬಿಕ ಬದುಕು ತಮ್ಮ ಉದ್ಯಮವನ್ನು ಬೆಳೆಸಿದ ಡಿ.ಎನ್. ಲೋಕಪ್ಪನವರು ಕನ್ನಡ, ನುಡಿಯ ಓದುಗರ ಬಳಗವನ್ನು ಹೆಚ್ಚಿಸುವುದಕ್ಕೆ ಕಾರಣರಾಗಿದ್ದಾರೆಂದು ತರಳಬಾಳು ಜಗದ್ಗುರುಗಳು ಶ್ಲಾಘಿಸಿದರು.

ಸಂವಹನ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸುವ ಮೂಲಕ ನಲವತ್ತು ವರ್ಷಗಳ ಸೇವೆಯಲ್ಲಿ ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಶ್ರೀ ಡಿ.ಎನ್. ಲೋಕಪ್ಪ

ಇವರ ಸೇವೆ ಅನನ್ಯವಾದುದು. ಈ ಯಶಸ್ಸಿಗೆ ಕಾರಣ ಅವರಲ್ಲಿನ ಸಜ್ಜನಿಕೆ, ಪರಿಶ್ರಮ ಮತ್ತು ಬದ್ಧತೆ ಎಂದು ಪ್ರೊ. ಎನ್.ಎಸ್. ತಾರಾನಾಥ ಅಭಿನಂದಿಸಿ ಮಾತನಾಡಿದರು.

ಶಾಸಕರಾದ ಶ್ರೀ ಎ.ಹೆಚ್. ವಿಶ್ವನಾಥ್, ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಡಾ. ಲತಾ ರಾಜಶೇಖರ್, ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ 'ಲೋಕಪ್ರಿಯ' ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡಲಾಯಿತು.

**ಕೊಡಗಿನ ಸಂತ್ರಸ್ತ ಪ್ರದೇಶಗಳಿಗೆ ಭೇಟಿ - ಸಾಂತ್ವನ**

ದಿನಾಂಕ 25.8.2018 ರಂದು ಮೈಸೂರು ನಾಗರಿಕ ವೇದಿಕೆಯ ನಿಯೋಗವು ಪರಮಪೂಜ್ಯ ಜಗದ್ಗುರುಗಳ ನೇತೃತ್ವದಲ್ಲಿ ಪ್ರಾಕೃತಿಕವಿಕೋಪಪೀಡಿತ ಕೊಡಗಿನ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಲಾಯಿತು.

ನಿರಾಶ್ರಿತರಾಗಿ ಕಂಗಾಲಾಗಿದ್ದ ಕುಶಾಲನಗರ, ಸುಂಟಿಕೊಪ್ಪ, ಮಾದಾಪುರ, ಮಡಿಕೇರಿಯಲ್ಲಿನ ಪರಿಹಾರ ಕೇಂದ್ರಗಳಿಗೆ ಭೇಟಿ ನೀಡಿದ ಪರಮಪೂಜ್ಯ ಜಗದ್ಗುರುಗಳು ಪ್ರಕೃತಿವಿಕೋಪದಿಂದ ಧೃತಿಗೆಡಬೇಡಿ. ಎಲ್ಲರೂ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಿ. ಸುತ್ತೂರು ಶಾಲೆಯಲ್ಲಿ ನಿಮ್ಮ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಶ್ರೀಮಠದಿಂದ ಮಾಡಲಾಗುವುದು ಎಂದು ಅಭಯವನ್ನು ನೀಡಿದರು.

ಸಚಿವರುಗಳಾದ ಶ್ರೀ ಸಾ.ರಾ. ಮಹೇಶ್, ಶ್ರೀ ಎನ್. ಮಹೇಶ್, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯಾಧಿಕಾರಿಗಳೊಂದಿಗೆ ಪ್ರಸ್ತುತ ವಿದ್ಯಮಾನಗಳು ಹಾಗೂ ಪರಿಹಾರೋಪಾಯಗಳನ್ನು ಕುರಿತಂತೆ ನಿಯೋಗವು ಚರ್ಚಿಸಿ ಪರಿಹಾರಕಾರ್ಯಗಳಲ್ಲಿ ಕೈಜೋಡಿಸುವ ಭರವಸೆಯನ್ನು ನೀಡಲಾಯಿತು.

ನಿಯೋಗದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್, ಪ್ರೊ. ಎಸ್. ಶಿವಕುಮಾರಸ್ವಾಮಿ, ಪತ್ರಕರ್ತ ಶ್ರೀ ಕೆ.ಬಿ. ಗಣಪತಿ, ಉದ್ಯಮಿಗಳಾದ ಶ್ರೀ ಜಗದೀಶ್‌ಬಾಬು, ಶ್ರೀ ಗಿರಿ, ಶ್ರೀ ನರೇಂದ್ರ ಮುಂತಾದವರು ಭಾಗವಹಿಸಿದ್ದರು.

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವ ಹಾಗೂ ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ ಕಟ್ಟಡದ ಉದ್ಘಾಟನಾ ಸಮಾರಂಭ**

ದಿನಾಂಕ 28.8.2018 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವ ಹಾಗೂ ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ ಕಟ್ಟಡದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಸಮಾರಂಭವನ್ನು ಉದ್ಘಾಟಿಸಿದ ಭಾರತದ ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಎಂ. ವೆಂಕಯ್ಯನಾಯ್ಡುರವರು ದೇಶದ ಭದ್ರತೆಯ ದೃಷ್ಟಿಯಿಂದ ಜಾತಿ, ಧರ್ಮ, ಲಿಂಗವನ್ನು ಮೀರಿ ನಾವೆಲ್ಲರೂ ಭಾರತೀಯರು ಎನ್ನುವ ಭಾವನೆ ಬೆಳೆಸಿಕೊಳ್ಳಬೇಕಿದೆ. ಈ ಭಾವನೆಗಳನ್ನು ಬೆಳೆಸುವಲ್ಲಿ ಶ್ರೀಮಠಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಅದರಲ್ಲಿಯೂ ಸುತ್ತೂರು ಶ್ರೀಮಠವು ಇಂದು ಈಶಾನ್ಯ ರಾಜ್ಯವೂ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ, ಅನ್ನ, ವಸತಿ, ಒದಗಿಸುವುದರ ಜೊತೆಗೆ ನಮ್ಮ ದೇಶ, ಭಾಷೆಗಳ ಸಾಂಸ್ಕೃತಿಕ ಅರಿವನ್ನು ಸಹ ಮೂಡಿಸುತ್ತಿದೆ. ಇದು ಭಾರತಕ್ಕೆ ಮಾತ್ರವಲ್ಲ ವಿಶ್ವಕ್ಕೆ ಗೌರವ ತರುವ ಸಂಗತಿ, ಹೀಗಾಗಿ ಜೆಎಸ್‌ಎಸ್ ಸಂಸ್ಥೆಗಳಿಗೆ ಇಡೀ ಪ್ರಪಂಚದಲ್ಲಿ ಒಳ್ಳೆಯ ಹೆಸರಿದೆ. ಎರಡು ಉನ್ನತ ವಿಶ್ವವಿದ್ಯಾಲಯಗಳೂ ಸೇರಿದಂತೆ ಎಲ್ಲ ಬಗೆಯ ಆಧುನಿಕ ಮತ್ತು ಗುರುಕುಲ ಮಾದರಿಯ ಶಿಕ್ಷಣದ ವ್ಯವಸ್ಥೆಗಳನ್ನು ಶ್ರೀಮಠವು ಮುನ್ನಡೆಸುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ ಎಂದು ಶ್ರೀಕ್ಷೇತ್ರದ ಸೇವೆಯನ್ನು ಮುಕ್ತವಾಗಿ ಪ್ರಶಂಸಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಪ್ರತಿವರ್ಷವು ಶ್ರೀಮಠ ಹಾಗೂ ಜೆಎಸ್‌ಎಸ್ ಸಂಸ್ಥೆಗಳಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತ್ಯುತ್ಸವವನ್ನು ಆಚರಿಸಲಾಗುತ್ತದೆ. ಆದರೆ ಈ ಬಾರಿ ಕೊಡಗು ಜಿಲ್ಲೆಯಲ್ಲಿ ಪ್ರವಾಹ ಬಂದು ತೊಂದರೆಯಾಗಿರುವುದರಿಂದ ಸರಳವಾಗಿ ಕಾರ್ಯಕ್ರಮವನ್ನು ಆಚರಿಸಲು ನಿರ್ಧರಿಸಲಾಗಿದೆ. ಈ ಆಚರಣೆಗೆ ವೆಚ್ಚವಾಗುತ್ತಿದ್ದ ಹಣವನ್ನು ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ನಿಧಿಗೆ ದೇಣಿಗೆ ನೀಡಲಾಗುತ್ತಿದೆ. ಸಾಮಾಜಿಕ ಬದ್ಧತೆ ಸರಳತೆ ಹಾಗೂ ಸಜ್ಜನಿಕೆಯ ಪ್ರತಿರೂಪವಾಗಿದ್ದ ರಾಜೇಂದ್ರ ಶ್ರೀಗಳವರ ಆಶಯದಂತೆ ಶ್ರೀಮಠ ಮುನ್ನಡೆಯುತ್ತಿದೆ ಎಂದು ನುಡಿದರು.

ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಈ ಹಿಂದೆ ತಮಿಳುನಾಡಿಗೆ ಸುನಾಮಿ ಅಪ್ಪಳಿಸಿದಾಗ ಒಂದು ಗ್ರಾಮವನ್ನು ದತ್ತು ತೆಗೆದುಕೊಂಡ ಸುತ್ತೂರು ಶ್ರೀಮಠವು ನಾಡಿನ ಹಾಗೂ ದೇಶದ ವಿವಿಧ ಸಮಸ್ಯೆಗಳಿಗೆ ಪ್ರಾಕೃತಿಕ ಅವಘಡಗಳು ಘಟಿಸಿದ ಎಲ್ಲ ಕಾಲದಲ್ಲೂ ಸ್ಪಂದಿಸುತ್ತಾ ಬಂದಿರುವುದು ಅತ್ಯಂತ ಗೌರವದ ವಿಷಯ. ಇತ್ತೀಚೆಗೆ ಕೊಡಗಿನಲ್ಲಿ ಸಂಭವಿಸಿದ ಪ್ರಾಕೃತಿಕ ದುರಂತಕ್ಕೆ ಪರಿಹಾರ ನಿಧಿಯಾಗಿ 50 ಲಕ್ಷ ರೂ.ಗಳನ್ನು ಹಾಗೂ ನೆರೆ ರಾಜ್ಯವಾದ ಕೇರಳಕ್ಕೆ

ಹತ್ತು ಲಕ್ಷ ರೂ.ಗಳನ್ನು ದೇಣಿಗೆಯಾಗಿ ನೀಡಿರುವುದು ಇದಕ್ಕೆ ಸಾಕ್ಷಿಯಾಗಿದೆ. ಶ್ರೀಕ್ಷೇತ್ರದ ಈ ಕೆಲಸವು ಎಲ್ಲರಿಗೂ ಮಾದರಿ ಎಂದು ಅಭಿನಂದನೆಗಳನ್ನು ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶೈಕ್ಷಣಿಕ ಕಾಳಜಿ ಹಾಗೂ ಜನಪರವಾದ ಪ್ರಾಮಾಣಿಕ ಕಳಕಳಿಗಳನ್ನು ಸಂಸ್ಮರಿಸಿಕೊಂಡು ಪೂಜ್ಯರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವುದರ ಜೊತೆಗೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಹತ್ತು ಹಲವು ಯೋಜನೆಗಳನ್ನು ರೂಪಿಕೊಂಡು ಬಂದಿದ್ದರು ಎಂದು ತಿಳಿಸಿದರು.

ಸನ್ಮಾನ್ಯ ಉಪರಾಷ್ಟ್ರಪತಿಗಳು ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ ಕಟ್ಟಡವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ **ರಾಜೇಂದ್ರ ಚಿತ್ರಸಂಪುಟದ** ಇಂಗ್ಲಿಷ್ ಆವೃತ್ತಿ, **ಸುತ್ತೂರು ಸುರಧೇನು** ಹಿಂದಿ ಆವೃತ್ತಿ ಹಾಗೂ ಶ್ರೀ ಅಂಶಿ ಪ್ರಸನ್ನಕುಮಾರ ಅವರ **ಶ್ರೀ ಸುತ್ತೂರು ಕ್ಷೇತ್ರದರ್ಶನ** ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ನಿ.ಪ್ರ.ಸ್ವ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಸಚಿವರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಾ.ರಾ. ಮಹೇಶ್, ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶಾಸಕರುಗಳಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಚಿವ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮುಂತಾದವರು ಉಪಸ್ಥಿತರಿದ್ದರು.

## ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಸತ್ಸಂಗ ಕಾರ್ಯಕ್ರಮ

ದಿನಾಂಕ 10.9.2018 ರಂದು ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಸತ್ಸಂಗ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಜಗತ್ತಿನಾದ್ಯಂತ ಆಧ್ಯಾತ್ಮ ಪ್ರಸಾರ ಮಾಡುತ್ತಿರುವ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರನ್ನು ಸನ್ಮಾನಿಸಿದ ಪರಮಪೂಜ್ಯ ಜಗದ್ಗುರುಗಳು ಭಕ್ತರ ಮನಸ್ಸಿಗೆ ಮುದ ನೀಡಲು ಜಗತ್ತಿನಾದ್ಯಂತ ಆಧ್ಯಾತ್ಮ ಜ್ಞಾನವನ್ನು ಪ್ರಸಾರ ಮಾಡುತ್ತಿರುವ ಶ್ರೀಗಳ ಕೊಡುಗೆಯನ್ನು ಪ್ರಶಂಸಿದರು. ಮನುಷ್ಯನ ಸಾತ್ವಿಕವಾದ ಬದುಕಿಗೆ ಗುರುಗಳ ಮಾರ್ಗದರ್ಶನ ನಿರಂತರವಾಗಿ ಬೇಕಿದೆ ಎಂದು ತಿಳಿಸಿದರು.

ಭಕ್ತಿ, ಸಂಗೀತ ಮತ್ತು ಧ್ಯಾನಗಳು ಭಾಷೆಗಳಿಂದ ಅತೀತವಾದವು. ಇವು ಮನುಷ್ಯ ಧ್ಯಾನಾಸಕ್ತನಾಗಿ ಅಂತರ್ಮುಖಿಯಾಗಲು ಸಹಾಯಕವಾಗುತ್ತವೆ ಎಂದು ಮೈಸೂರು ಶ್ರೀ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮಿಗಳು ತಿಳಿಸಿ, ಶ್ರೀ ಸಚ್ಚಿದಾನಂದ ಆಶ್ರಮಕ್ಕೂ ಶ್ರೀ ಸುತ್ತೂರು ಮಠಕ್ಕೂ ಅನನ್ಯವಾದ ಸಂಬಂಧವಿದೆ. ಹಿರಿಯ ಶ್ರೀಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆತ್ಮೀಯ ಬಾಂಧವ್ಯ ಸದಾ ಸ್ಮರಣೀಯವಾದುದು ಎಂದು ಸ್ಮರಿಸಿದರು.

ಸಮಾರಂಭದಲ್ಲಿ ದತ್ತಪೀಠದ ಟ್ರಸ್ಟಿ ಶ್ರೀ ಹೆಚ್.ವಿ. ಪ್ರಸಾದ್, ಶ್ರೀ ಕುಮಾರ್ ರಾಜಶೇಖರ್, ಅಮೆರಿಕದ ಪಿಟ್ಸ್‌ಬರ್ಗ್, ಡಲ್ಲಾಸ್, ವರ್ಜೀನಿಯಾ ಮೊದಲಾದ ಕಡೆಯಿಂದ ಆಗಮಿಸಿದ್ದ ಭಕ್ತರು ಉಪಸ್ಥಿತರಿದ್ದರು.

## ಪ್ರಶಸ್ತಿಗಳ ಪ್ರದಾನ, ಕೃತಿ ಬಿಡುಗಡೆ, ಜೆಎಸ್‌ಎಸ್ ಭೌತಿಕ ಚಿಕಿತ್ಸೆ ಮತ್ತು ಪುನಶ್ಚೇತನ ಕೇಂದ್ರದ ಉದ್ಘಾಟನಾ ಸಮಾರಂಭ

ದಿನಾಂಕ 28.9.2018 ರಂದು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ವಚನ ಚಿತ್ರ ರಚನಾ ಪಿತಾಮಹ ಶ್ರೀ ಎಂ. ವೀರಪ್ಪ ಹಾಗೂ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳ ಪ್ರದಾನ, ಶ್ರೀ ಸಿ. ಅಂಕಪ್ಪನವರ 'ಶ್ರೀಪಾದಕ್ಕೆ ನಮೋ ನಮೋ' ಕೃತಿ ಬಿಡುಗಡೆ ಹಾಗೂ ಜೆಎಸ್‌ಎಸ್ ಭೌತಿಕ ಚಿಕಿತ್ಸೆ ಮತ್ತು ಪುನಶ್ಚೇತನ ಕೇಂದ್ರದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಶಿವಾನಂದ ಎಸ್. ಪಾಟೀಲ್‌ರವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರ ಆರೋಗ್ಯ ಕಾಪಾಡುವಲ್ಲಿ ಸತತವಾಗಿ ಪ್ರಯತ್ನ ಮಾಡುತ್ತಿವೆ. ಈಗ ಸರ್ಕಾರ ಜಾರಿಗೆ ತಂದಿರುವ 'ಆಯುಷ್ಮಾನ್ ಭಾರತ್' ಬೃಹತ್ ಆರೋಗ್ಯ ಯೋಜನೆಯಲ್ಲಿ ನಮ್ಮ ಕರ್ನಾಟಕದ 'ಆರೋಗ್ಯ ಕರ್ನಾಟಕ' ಎಂಬ ಯೋಜನೆಯನ್ನು ವಿಲೀನಗೊಳಿಸಲಾಗಿದೆ. ಇಂದು ವಿಕಲಚೇತನರ ಪುನಶ್ಚೇತನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನಗಳು ಅಷ್ಟಾಗಿ ಲಭ್ಯವಿಲ್ಲದಿರುವುದರಿಂದ ಸಂಘ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕಿದೆ. ಈ ನಿಟ್ಟಿನಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಎಲ್ಲ ರೀತಿಯ ಸಹಕಾರ ಮಾಡುವ ಕೆಲಸವನ್ನು ಶ್ರೀ ಸುತ್ತೂರು ಮಠವು ಮಾಡಿಕೊಂಡು ಬರುತ್ತಿರುವುದು ಅವಿಸ್ಮರಣೀಯ ಎಂದು ಶ್ರೀಕ್ಷೇತ್ರದ ಸೇವೆಗಳನ್ನು ಶ್ಲಾಘಿಸಿದರು.

ಕಲೆ, ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತಿ ಇವು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ. ಇವುಗಳಲ್ಲಿ ಒಂದು ರೀತಿಯ

ದಿವ್ಯಶಕ್ತಿ ಇದೆ. ಅದು ಕಲೆಯ ಯಾವುದೇ ಪ್ರಕಾರದಲ್ಲೂ ಅಂತಸ್ಥವಾಗಿರಬಹುದು. ಅಂತಹ ವಿಭಿನ್ನ ಪ್ರಕಾರಗಳಲ್ಲಿ ಮಹೋನ್ನತ ಸಾಧನೆ ಮಾಡಿದ ಸಾಧಕರು ನಮ್ಮೊಡನೆ ಇದ್ದಾರೆ. ಅಂತಹವರನ್ನು ಗುರುತಿಸುವುದು ಸಾಮಾಜಿಕರ ಜವಾಬ್ದಾರಿಯಾಗಿದೆ. ಇದರಿಂದ ಕಲಾವಿದರ ಕಲೆಗಳ ಬೆಳವಣಿಗೆಗೆ ಪ್ರೋತ್ಸಾಹವು ದೊರೆತಂತಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು. ಹಾಗೆಯೇ ಆರೋಗ್ಯ ಕ್ಷೇತ್ರದಲ್ಲಿ ಆಧುನಿಕ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ನಮ್ಮ ನಾಡಿನ ಜನತೆಯ ಆರೋಗ್ಯ ಸಂರಕ್ಷಣೆಗಳಿಗೆ ಅತ್ಯಗತ್ಯವಾದ ಚಿಕಿತ್ಸಾ ಸೌಲಭ್ಯಗಳು ದೊರೆಯುವಂತೆ ಮಾಡುವುದೂ ಉದ್ದೇಶವಾಗಿದೆ ಎಂದು ತಿಳಿಸಿದರು.

2017ನೆಯ ಸಾಲಿನ ವಚನ ಚಿತ್ರ ರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿಯನ್ನು ಚಿತ್ರಕಲಾವಿದರಾದ ಶ್ರೀ ಜಿ.ಎಂ. ಹೆಗಡೆ ತಾರಕೋಡುರವರಿಗೆ ಹಾಗೂ 2018ನೇ ಸಾಲಿನ ಪ್ರಶಸ್ತಿಯನ್ನು ಮೈಸೂರಿನ ಕುಂದಣ ಕಲಾವಿದರಾದ ಶ್ರೀ ಆರ್. ಪುಟ್ಟರಾಜುರವರಿಗೆ ಪ್ರದಾನ ಮಾಡಲಾಯಿತು.

2017ರ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಯನ್ನು ಬೆಂಗಳೂರಿನ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಜೆ. ಕಮಲಾಕ್ಷಿಯವರಿಗೆ ಹಾಗೂ 2018ರ ಪ್ರಶಸ್ತಿಯನ್ನು ಧಾರವಾಡದ ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಸ್.ಸಿ. ಪಾಟೀಲರವರಿಗೆ ಪ್ರದಾನ ಮಾಡಲಾಯಿತು ಹಾಗೂ ಡಾ. ನಂದೀಶ್ ಹಂಚೆ ಇವರು ಸಂಪಾದಿಸಿದ ಶ್ರೀ ಸಿ. ಅಂಕಪ್ಪನವರ 'ಶ್ರೀಪಾದಕ್ಕೆ ನಮೋ ನಮೋ' ಎಂಬ ಕೃತಿಯನ್ನು ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಬಿಡುಗಡೆ ಮಾಡಿದರು.

ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿಯವರು ಪ್ರಶಸ್ತಿ ಪುರಸ್ಕೃತ ಕಲಾವಿದರನ್ನು ಕುರಿತು ಅಭಿನಂದನಾ ಭಾಷಣ ಮಾಡಿದರು ಮತ್ತು ಬಿಡುಗಡೆಯಾದ ಕೃತಿಯನ್ನು ಕುರಿತು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಚಂದ್ರಕಾಂತ ಬೆಲ್ಲದರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 2018ನೇ ಸಾಲಿನ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾದ ಮೈಸೂರಿನ ಹಿರಿಯ ಕಲಾವಿದ ಶ್ರೀ ಎಸ್.ಎಂ. ಜಂಬುಕೇಶ್ವರ ಇವರನ್ನು ಸನ್ಮಾನಿಸಲಾಯಿತು.

□

## ಪ್ರಸಾದ



### ಕೃತಿ-ಸ್ವೀಕೃತಿ

**ಹಿಂದಿ ಧರ್ಮ**
**(ಸನಾತನ ಹಿಂದು ಧರ್ಮದ ಮೂಲ ತತ್ವಗಳು)**
ಪ್ರೊ. ಜಿ.ಎಚ್. ಹನ್ನೆರಡು ಮಠ
ಪ್ರಕಾಶನ: ಆನಂದ ಪ್ರಕಾಶನ
ವಿಜಯನಗರ, ಬೆಂಗಳೂರು
ಪು. 116, ಬೆಲೆ : 100/-

**ಆಚಾರ್ಯ ಶ್ರೀ ರಾಮಾನುಜರು**
**(ಜೀವನ ಮತ್ತು ಸಾಧನೆಗಳ ಚರಿತ್ರೆ)**
ಡಾ. ಶಲ್ವಪಿಳ್ಳೈ ಐಯ್ಯಂಗಾರ್
ಪ್ರಕಾಶನ: ಶ್ರೀ ರಾಮಾನುಜ ಸಹಸ್ರ
ಮಾನೋತ್ಸವ ಸೇವಾ (ರಿ).
ಮೇಲುಕೋಟೆ, ಮಂಡ್ಯ ಜಿಲ್ಲೆ
ಪು. 170, ಬೆಲೆ : 200/-

**ವಿದ್ಯಾರತ್ನ**
**(ಡಾ. ಎಸ್. ವಿದ್ಯಾಶಂಕರ ಸಂಸ್ಮರಣ ಸಂಪುಟ)**
ಸಂ: ಡಾ. ಎಂ. ಚಿದಾನಂದಮೂರ್ತಿ
ಪ್ರಕಾಶನ: ಪ್ರಿಯದರ್ಶಿನಿ ಪ್ರಕಾಶನ
ಹಂಪಿ ನಗರ, ಬೆಂಗಳೂರು
ಪು. 754, ಬೆಲೆ : 1000/-

**ಜೀವನ ದರ್ಶನ**
ಸಾಹಿತ್ಯ ವಿಭಾಗ
ಪ್ರಕಾಶನ: ಪ್ರಜಾಪಿತ ಬ್ರಹ್ಮಕುಮಾರಿ
ಈಶ್ವರೀಯ ವಿಶ್ವವಿದ್ಯಾಲಯ
ಜ್ಞಾನ ಸರೋವರ, ಲಿಂಗದೇವರ
ಕೊಪ್ಪಲು, ಹುಣಸೂರು ರಸ್ತೆ
ಇಲವಾಲ, ಮೈಸೂರು. ಪು. 53

**ಜನಸೇವಕ (ಶ್ರೀ ಆರ್.ಆರ್. ಕಲ್ಲೂರ**
**ಅವರ ಅಭಿನಂದನಗ್ರಂಥ)**
ಗೌ.ಸಂ: ಎನ್.ಜಿ. ಕರೂರ
ಪ್ರಕಾಶನ: ಆರ್.ಆರ್. ಕಲ್ಲೂರ
ಅಭಿನಂದನ ಸಮಿತಿ, ವಿಜಯಪುರ
ಪು. 281

**ಕಾಂತಾವರದ ಕಾಂತಾವರ**
**ಡಾ. ನಾ. ಮೊಗಸಾಲೆ**
ಶ್ರೀ ಬೆಳಗೋಡು ರಮೇಶ್‌ಭಟ್
ಪ್ರಕಾಶನ: ಪಾಂಚಜನ್ಯ ಪ್ರಕಾಶನ
ಪಾಪರೆಡ್ಡಿ ಪಾಳ್ಯ, ಬೆಂಗಳೂರು
ಪು. 100, ಬೆಲೆ : 100/-

**ಜ್ಞಾನಭಂಡಾರಿ ಬಸವಣ್ಣ**
ಶ್ರೀ ಬಸವರಾಜ ಸ್ವಾಮಿ
ಪ್ರಕಾಶನ: ಬಾಲಂಕು ಸೇವಾ ಫೌಡೇಶನ್
ಪು. 903, ಬೆಲೆ : 100/-

**ಶರಣರ ನುಡಿಹೆಜ್ಜೆ ನಡೆಗೆಜ್ಜೆ**
**(ಶರಣ ಸಂಸ್ಕೃತಿಯ ಚಿಂತನ ಲೇಖನಗಳು)**
ಡಾ. ನಾ. ಮೊಗಸಾಲೆ
ಪ್ರಕಾಶನ: ಪಾಂಚಜನ್ಯ ಪ್ರಕಾಶನ
ಪಾಪರೆಡ್ಡಿ ಪಾಳ್ಯ, ಬೆಂಗಳೂರು
ಪು. 240, ಬೆಲೆ : 250/-

**ಬ್ರಹ್ಮಾನಂದ ಗುರುದೇವರು**
ಡಾ. ಪ್ರದೀಪಕುಮಾರ ಹೆಬ್ರಿ
ಪ್ರಕಾಶನ: ಚನ್ನಬಸವೇಶ್ವರ ಪ್ರಕಾಶನ
ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ
ರಬಕವಿ
ಪು. 180, ಬೆಲೆ : 150/-

**ಮಾತಿಗೊಂದು ಹಾಡು**
ಸಂ.: ಶ್ರೀ ಗಿರೀಶ ಮುತ್ತೂರ
ಪ್ರಕಾಶನ: ಚನ್ನಬಸವೇಶ್ವರ ಪ್ರಕಾಶನ
ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ
ರಬಕವಿ, ಪು. 128, ಬೆಲೆ : 70/-

**ಜಗನ್ಮಾತೆ ಅಕ್ಕಮಹಾದೇವಿ**
ನಗರ್ಲೆ ಶಿವಕುಮಾರ
ಪ್ರಕಾಶನ: ವಿಶ್ವ ವಚನ ಫೌಂಡೇಷನ್
ರೈಲ್ವೆ ಬಡಾವಣೆ, ಬೋಗಾದಿ, ಮೈಸೂರು
ಪು. 72, ಬೆಲೆ : 100/-




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಡಿ.ಎನ್. ಲೋಕಪ್ಪ ಹಾಗೂ ಶ್ರೀಮತಿ ಮಹೇಂದ್ರಮಣಿಯವರನ್ನು ಅಭಿನಂದಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಡಿ. ನಾಗೇಂದ್ರಪ್ಪ, ಶ್ರೀ ಮ.ಗು. ಸದಾನಂದಯ್ಯ, ಶಾಸಕರಾದ ಶ್ರೀ ಎ.ಹೆಚ್. ವಿಶ್ವನಾಥ್, ಡಾ. ಸಿಪಿಕೆ, ತರಳಬಾಳು ಜಗದ್ಗುರುಗಳು, ಜಗದ್ಗುರುಗಳು, ಪ್ರೊ. ಎನ್.ಎಸ್. ತಾರಾನಾಥ, ಡಾ. ಲತಾ ರಾಜಶೇಖರ್, ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ (19.8.2018)




ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮವನ್ನು ಶ್ರೀ ಮಲೆಯ ಮಹದೇಶ್ವರ ಬೆಟ್ಟದ ಸಾಲೂರು ಮಠದ ಷ.ಬ್ರ. ಶ್ರೀ ಗುರುಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಂ.ಎಸ್. ಮರಿಸ್ವಾಮಿಗೌಡ, ಶ್ರೀ ಜಯರಾಜೇಂದ್ರರವರು, ಚುಂಚನಹಳ್ಳಿ ಶ್ರೀಗಳು, ಶ್ರೀ ಪಿ. ವಿಜಯಕುಮಾರ್ ಹಾಗೂ ಶ್ರೀ ಡಿ.ಎಂ. ಸಿದ್ದಲಿಂಗಸ್ವಾಮಿಯವರು (20.8.2018)



ಕೊಡಗಿನ ಸಂತ್ರಸ್ತರು ಆಶ್ರಯ ಪಡೆದಿದ್ದ ನಿರಾಶ್ರಿತರ ಶಿಬಿರಗಳಿಗೆ ಪರಮಪೂಜ್ಯ ಜಗದ್ಗುರುಗಳು ಮೈಸೂರಿನ ನಾಗರಿಕ ವೇದಿಕೆ ನಿಯೋಗದೊಂದಿಗೆ ತೆರಳಿ ಅಗತ್ಯ ಸಾಮಗ್ರಿಗಳನ್ನು ವಿತರಿಸಿ ಸಂತ್ರಸ್ತರಿಗೆ ಸಾಂತ್ವನ ನೀಡುತ್ತಿರುವುದು (25.8.2018)




ಸುತ್ತೂರಿನಲ್ಲಿ ಜರುಗಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವದಲ್ಲಿ ಶ್ರೀಮಠದ ವತಿಯಿಂದ ಕೊಡಗು ನೆರೆ ಸಂತ್ರಸ್ತರಿಗೆ 50 ಲಕ್ಷ ರೂ.ಗಳ ಚೆಕ್ಕನ್ನು ಪರಮಪೂಜ್ಯ ಜಗದ್ಗುರುಗಳವರು ಮುಖ್ಯಮಂತ್ರಿ ಶ್ರೀ ಎಚ್.ಡಿ. ಕುಮಾರಸ್ವಾಮಿಯವರಿಗೆ ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಎಂ. ವೆಂಕಯ್ಯನಾಯ್ಡುರವರ ಮೂಲಕ ನೀಡುತ್ತಿರುವುದು. ಚಿತ್ರದಲ್ಲಿ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ ಮತ್ತಿತರರು (28.8.2018)



"ಪ್ರಸಾದ" ದ್ವೈಮಾಸಿಕ ಲೇಖನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕು. ಬಿ.ಎಸ್. ಅನ್ನಪೂರ್ಣ ಪರಮಪೂಜ್ಯ ಜಗದ್ಗುರುಗಳವರಿಂದ ಬಹುಮಾನ ಸ್ವೀಕರಿಸುತ್ತಿರುವುದು (28.8.2018)



ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವದಲ್ಲಿ ಕೊಯಮತ್ತೂರಿನ ಜೆಎಸ್‌ಎಸ್ ಇನಿಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಕಾಲೇಜಿನ ವೈದ್ಯಾಧಿಕಾರಿ ಡಾ. ಎನ್. ವಿಜಯರಾಘವನ್ ಹಾಗೂ ಪ್ರಾಂಶುಪಾಲರಾದ ಡಾ. ಪಿ.ಎಸ್. ಶಿವಕಾಮಿ ಪರಮಪೂಜ್ಯ ಶ್ರೀಗಳವರಿಂದ ಉತ್ತಮ ವಾರ್ಷಿಕ ಸಂಚಿಕೆಯ ಬಹುಮಾನ ಸ್ವೀಕರಿಸುತ್ತಿರುವುದು (28.8.2018)




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ 2017 ಹಾಗೂ 2018ರ ವಚನ ಚಿತ್ರ ರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಹಾಗೂ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ದತ್ತಿ ಪ್ರಶಸ್ತಿಗಳನ್ನು ಶ್ರೀ ಜಿ.ಎಂ. ಹೆಗಡೆ, ಶ್ರೀ ಆರ್. ಪುಟ್ಟರಾಜು, ಪ್ರೊ. ಎಂ.ಜೆ. ಕಮಲಾಕ್ಷಿ, ಡಾ. ಎಸ್.ಸಿ. ಪಾಟೀಲರವರಿಗೆ ಪ್ರದಾನ ಮಾಡಲಾಯಿತು. ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಸಚಿವರಾದ ಶ್ರೀ ಶಿವಾನಂದ ಎಸ್. ಪಾಟೀಲ್, ಪರಮಪೂಜ್ಯ ಜಗದ್ಗುರುಗಳು, ಶ್ರೀ ಸತೀಶ್ ಪ್ರಫುಲ್ಲಚಂದ್ರ, ಶ್ರೀಮತಿ ಸುಶೀಲಾದೇವಿ ಸತೀಶ್‌ಚಂದ್ರ, ಶ್ರೀಮತಿ ಜಾನಕಿ ಹೆಗಡೆ, ಶ್ರೀಮತಿ ಫಿಲೋಮಿನಾ, ಶ್ರೀಮತಿ ಎಂ.ಜೆ. ಚಂದ್ರಿಕಾ ಗೌಡ, ಶ್ರೀಮತಿ ಶಶಿಕಲಾ ಪಾಟೀಲ್, ಡಾ. ಎಂ.ಎಸ್. ಮೂರ್ತಿ, ಮಾಜಿ ಶಾಸಕರಾದ ಶ್ರೀ ಚಂದ್ರಕಾಂತ ಬೆಲ್ಲದ, ಪ್ರೊ. ಮೊರಬದ ಮಲ್ಲಿಕಾರ್ಜುನ (28.9.2018)




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿ ಜೆಎಸ್‌ಎಸ್ ಬೌದ್ಧಿಕ ಚಿಕಿತ್ಸೆ ಮತ್ತು ಪುನಶ್ಚೇತನ ಕೇಂದ್ರವನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಶಿವಾನಂದ ಎಸ್. ಪಾಟೀಲ್ ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ಶಾಂತಮಲ್ಲಪ್ಪ, ಡಾ. ಕವಿತಾರಾಜ್, ಶ್ರೀ ಎನ್. ಮಹೇಶ್, ಮಾಜಿ ಶಾಸಕರಾದ ಶ್ರೀ ಚಂದ್ರಕಾಂತ್ ಬೆಲ್ಲದ, ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ಶ್ರೀ ಎಸ್.ಪಿ. ಮಂಜುನಾಥ್, ಪರಮಪೂಜ್ಯ ಜಗದ್ಗುರುಗಳು, ಪ್ರೊ. ಸಿ.ಜಿ. ಬೆಟಸೂರುಮಠ ಮತ್ತು ಶ್ರೀ ಪರಶಿವಮೂರ್ತಿ (28.9.2018)



ಅಮೆರಿಕಾದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಸತ್ಸಂಗ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳವರನ್ನು ಪರಮಪೂಜ್ಯರು ಬರಮಾಡಿಕೊಳ್ಳುತ್ತಿರುವುದು. ಚಿತ್ರದಲ್ಲಿ ಶ್ರೀ ರಾಮಚಂದ್ರ, ಶ್ರೀ ಎಚ್.ವಿ. ಪ್ರಸಾದ್, ಆಲಮಟ್ಟಿ ಶ್ರೀಗಳು ಹಾಗೂ ಇತರರು (10.9.2018)

Registered with the Registrar of Newspapers in India Under No. 50622/86
'Prasada' Bi-Monthly, Vol. 33 Issue No. 5, September-October 2018




ಸುತ್ತೂರಿನಲ್ಲಿ ಜರುಗಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವದಲ್ಲಿ ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲವನ್ನು ಉದ್ಘಾಟಿಸಲಾಯಿತು. ಚಿತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಸಚಿವರಾದ ಶ್ರೀ ಪುಟ್ಟರಂಗಶೆಟ್ಟಿ, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಎಂ. ವೆಂಕಯ್ಯನಾಯ್ಡು, ಪರಮಪೂಜ್ಯ ಜಗದ್ಗುರುಗಳು, ಸಿದ್ಧಗಂಗಾ ಮಠದ ಶ್ರೀಗಳು, ಶ್ರೀ ಜಯರಾಜೇಂದ್ರರವರು (28.8.2018)

ಬಿಡಿ ಪ್ರತಿ: ರೂ. 10
e-mail: jsspublications@gmail.com * www.jssonline.org